NON-OFFICIAL BUSINESS—RESOLUTIONS.

No. 1. Remission of land revenue in scarcity areas of Gundlupet Taluk.

*ಶ್ರೀ ಎಚ್. ಕೆ. ಸಿದ್ದಯ್ಯ ಉರುಫ್ ಕುನ್ನಯ್ಯ (ಗುಂಡ್ಲುಪೇಟೆ – ಹೆಗ್ಗಡದೇವನಕೋಟೆ ಅನುಸೂಚಿತ ಜಾತಿಗಳು).—

ಸ್ವಾಮಿ, ಅಧ್ಯಕ್ಷರೇ: ನನ್ನ ನಿರ್ಣಯವು ಈರೀತಿಯಾಗಿದೆ,

"ಗುಂಡ್ಲುಪೇಟೆ ತಾಲ್ಲೂಕಿನ ಅಭಾವ ಪ್ರದೇಶಗಳಲ್ಲಿ ಚಾಲ್ತಿ ಸಾಲಿನ ಜಮೀನು ಕಂದಾಯವನ್ನು ವಸೂಲು ಮಾಡದಂತೆ ಸರ್ಕಾರದವರು ಕೂಡಲೆ ಆಜ್ಞೆ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಈ ನನ್ನ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತ ನಾನು ಒಂದೆರಡು ಮಾತುಗಳನ್ನು ತಿಳಿಸಬೇಕೆಂದಿದ್ದೇನೆ.

ನಮ್ಮ ತಾಲ್ಲೂಕಿನಲ್ಲಿ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಸಕಾಲದಲ್ಲಿ ಸಾಕಾದಷ್ಟು ಮಳೆಯಾಗದೆ ಬೆಳೆಗಳೆಲ್ಲಾ ಹಾಳಾಗಿ ಹೋಗಿರುತ್ತವೆ ಎಂಬ ಅಂಶವನ್ನು ಈಗಾಗಲೇ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ನನ್ನ 491ನೆಯ ಪ್ರಶ್ನೆಗೆ ಸರ್ಕಾರದವರು ಒದಗಿಸಿರುವ ಉತ್ತರದಲ್ಲೇ ನಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 1946ನೆಯ ಸಾಲಿನಿಂದಲೂ ಮಳೆ ಬಹಳ ಕಡಮೆಯಾಗಿರುತ್ತೆಂಬುದನ್ನು ತಿಳಿಸಿರುತ್ತಾರೆ. ಆ ಒಂದು ಅಂಶದಿಂದಲೇ ನಾನು ಹೇಳತಕ್ಕ ವಿಚಾರಗಳೆಲ್ಲಾ ನಿಜವೆಂಬುದಕ್ಕೆ ಯಾವ ಅನುಮಾನವೂ ಇಲ್ಲ. ನಿಜವಾಗಿಯೂ ಅಲ್ಲಿಯ ಜನರು ಏನೇನು ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆಂಬುದನ್ನು ನಾನು ಕಣ್ಣಾರ ನೋಡಿಕೊಂಡು ಬಂದು ತಮ್ಮ ಮುಂದೆ ತಿಳಿಸುತ್ತಿದ್ದೇನೆ. ಕೂಲಿಮಾಡತಕ್ಕ ಜನರ ಗೋಳನ್ನು ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ರೈತರಿಗೆ ವ್ಯವಸಾಯಮಾಡಲು ಮಳೆಯೇ ಇಲ್ಲದಿರುವಾಗ ಕೂಲಿಯವರಿಗೆ ಕೂಲಿ ಹೇಗೆ ದೊರೆತೀತು? ಜನರಲ್ಲಿ ಸಾಲ ಕೇಳಿದರೆ ಸಾಲ ಸಿಕ್ಕುವುದಿಲ್ಲ. ಅಲ್ಲಿಗೂ ರೈತ ಪಿಜನರಿಗೆ ತಮ್ಮ ಆಸ್ತಿ ಪಾಸ್ತಿಗಳನ್ನು ಉಳಿಸಿಕೊಳ್ಳುವುದೇ ತುಂಬ ಕಷ್ಟಕ್ಕೆ ಬಂದಿದೆ. ಹೀಗೆಲ್ಲಾ ತೊಂದರೆಗಳಿರುವುದರಿಂದ, ಅಲ್ಲಲ್ಲಿ 'ಅಲ್ಪಸ್ವಲ್ಪ ವ್ಯವಸಾಯಮಾಡತಕ್ಕ ಜನರಿಗೆ ಅವರ ಕೂಲಿ ಸಹ ಗಿಟ್ಟುತ್ತಿಲ್ಲ. ಹಾಗೆ ರೈತರು ವ್ಯವಸಾಯಕ್ಕೆ ವಿಶೇಷವಾಗಿ ಹಣವನ್ನು ವ್ಯಯಮಾಡಿದ್ದಾಗ್ಯೂ ಅವರಿಗೆ ಬೆಳೆಯೇ ಆಗದಿರುವಾಗ ಅವರು ಸರ್ಕಾರಕ್ಕೆ ಏಕೆ ಕಂದಾಯ ಕೊಡಬೇಕು? ಅವನ ಸಂಸಾರ ಹೇಗೆ ನಡೆಯಬೇಕು? ಇದನ್ನೆಲ್ಲಾ ತಾವೇ ಹೇಳಬೇಕು, ಸ್ವಾಮಿ.

ಸಂಸ್ಥಾನದಲ್ಲಿ ಅನೇಕ ಕಡೆ ಅಭಾವ ಪರಿಸ್ಥಿತಿ ಬಂದಿದೆಯೆಂಬುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅವರು ಕೋಲಾರ, ಚಿಂತಾಮಣಿ ಇತ್ಯಾದಿ ಸ್ಥಳಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನೇನೋ ಖರ್ಚುಮಾಡಿದರು. ಆದರೆ ಅದೇ ಕ್ಷಾಮ ನಿವಾರಣೆ ಬಗ್ಗೆ ನಮ್ಮ ತಾಲ್ಲೂಕಿನಲ್ಲಿ ಮಾತ್ರ 13 ಬಾವಿಗಳ ಕೆಲಸವನ್ನು ಕೈಕೊಂಡು ಆ ಬಗ್ಗೆ ಒದಗಿಸಲಾಗಿದ್ದ ೪ ಸಾವಿರ ಚಿಲ್ಲರೆ ರೂಪಾಯಿಗಳ ಪೈಕಿ ಕೇವಲ 3 ಸಾವಿರ ಚಿಲ್ಲರೆ ಮೊಬಲಗನ್ನು ಮಾತ್ರ ಖರ್ಚುಮಾಡಿರುತ್ತೇವೆಂದು ತಿಳಿಸಿದ್ದಾರೆ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗೂ ಸಹ ತುಂಬ ಅಭಾವ ಉಂಟಾಗಿದೆ. ಅಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಇನ್ನೂ ಸ್ವಲ್ಪ ಆಳಮಾಡಬೇಕಾಗಿದೆ. ಅದಕ್ಕೆ ಹಣವನ್ನು ತಾವು ಒದಗಿಸಿದ್ದರೂ ಅದನ್ನು ಸದ್ವಿನಿಯೋಗ ಮಾಡುತ್ತಿಲ್ಲ. ಮಳೆಯೇ ಆಗದೆ ಅಲ್ಲಿ ತರಿ ಮತ್ತು ಖುಷ್ಕಿ ಬೆಳೆಗಳೇನೂ ಆಗದಿರುವುದರಿಂದ ಅಲ್ಲಿ ತರೀ ಜಮೀನುಗಳಿಗೂ ಮತ್ತು ಖುಷ್ಕಿ ಜಮೀನುಗಳಿಗೂ ಕಂದಾಯವನ್ನೇ ಅರ್ಧ ಮಾಫಿ ಮಾಡಬೇಕೆಂದು ನನ್ನ 458ನೆಯ ಪ್ರಶ್ನೆಯನ್ನು ಕಳುಹಿಸಿದ್ದೆನು. ಅದೇ ಪ್ರಶ್ನೆಗೆ ತಾವು ಉತ್ತರ ಒದಗಿಸುವುದರಲ್ಲಿ ನಮ್ಮ ಪ್ರಾಂತಗಳಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಕೆ. ಚಂಗಲರಾಯರೆಡ್ಡಿಯವರು ಪ್ರವಾಸ ಮಾಡಿ, ಆ ಪ್ರದೇಶದಲ್ಲಿ ಅಭಾವ ಉಂಟಾಗಿರುವುದು ನಿಜವೆಂದೂ, ಅದರ ಬಗ್ಗೆ ಸರ್ಕಾರದವರು ಕೂಡಲೆ ಉಪಕಾರ ನೀಡಬೇಕೆಂದೂ ಸರ್ಕಾರಕ್ಕೆ ತಿಳಿಸಿರುವಂತೆ ತಿಳಿಸಿದ್ದೀರಿ. ಆದರೆ ಆ ಪ್ರಕಾರ ತಾವು ಅಲ್ಲಿಗೆ ಯಾವ ರಿಯಾಯಿತಿಯನ್ನೂ ಇಲ್ಲಿಯತನಕ ತೋರಿಸದಿರುವುದು ತಮ್ಮಿಂದ ನಮಗೆ ನ್ಯಾಯ ದೊರೆತಂತೆ ಕಾಣುತ್ತಿಲ್ಲ. ಗ್ರಾಮದಲ್ಲಿರತಕ್ಕ ಪಟೇಲ್ ಶ್ಯಾನುಬೋಗರು ಎಲ್ಲಿಯೋ ಕುಳಿತುಕೊಂಡು ಜಮೀನುಗಳ ಮುಖವನ್ನೇ ನೋಡದ ತಯಾರಿಸಿದ ಪಹಣಿ ಲೆಕ್ಕಗಳನ್ನು ತಾವು ನಂಬತಕ್ಕದ್ದು ಸರಿಯಾದುದಲ್ಲ. ನಮ್ಮ ಪ್ರದೇಶದಲ್ಲಿ ಅಭಾವವಿದೆಯೆಂದು ಶ್ರೀ ಕೆ. ಸಿ. ರೆಡ್ಡಿಯವರು ಶಿಫಾರ್ಸು ಮಾಡಿರುವುದಕ್ಕಿಂತಲೂ ಹೆಚ್ಚಿನ ರುಜುವಾತು ತಮಗೆ ಮತ್ತೊಂದು ಬೇಕೆ? ತಾವು ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಹಾಕುವಂಥ ನೀತಿಯನ್ನು ಅನುಸರಿಸುವುದು ನ್ಯಾಯವಲ್ಲ. ತಮಗೆ ಅಂಥ ಅನುಮಾನವಿದ್ದರೆ ನಮ್ಮ ತಾಲ್ಲೂಕಿಗೆ ಬಂದು ನೋಡಿದರೆ ಆಗ ತಮಗೆ ನಾನು ಹೇಳಿರತಕ್ಕದ್ದೆಲ್ಲಾ ನಿಜವೆಂದು ಗೊತ್ತಾಗುತ್ತದೆ. ಮಳೆಯ ಆಧಾರದಮೇಲೆಯೇ ಈ ಬೆಳೆಗಳೆಲ್ಲಾ ನಿಂತಿರುವುದರಿಂದ ತಾವು ತರಿ ಮತ್ತು ಖುಷ್ಕಿ ಕಂದಾಯಗಳನ್ನು ವಜಾ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Resolution moved :

"That this Assembly is of the opinion that the Government should issue orders immediately not to recover the current year's land revenue in scarcity areas of Gundluupet Taluk."

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, ಈ ನಿರ್ಣಯವನ್ನು ನಾನು ಅನುಮೋದಿಸುತ್ತ, ಈ ಸಭೆಯ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕೆಂದೂ ಸರ್ಕಾರದವರಿಗೆ ಕೆಲವು ವಿಷಯಗಳನ್ನು ಅರಿಕೆಮಾಡಿಕೊಳ್ಳಬೇಕೆಂದೂ ನಾನೀಗ ನಿಂತಿದ್ದೇನೆ.

1948-49ನೆಯ ಸಾಲಿನಿಂದ ನಮ್ಮ ತಾಲ್ಲೂಕಿನಲ್ಲೂ ಮತ್ತು ಗುಂಡ್ಲುಪೇಟೆ ತಾಲ್ಲೂಕಿನಲ್ಲೂ ಮಳೆ ಬೀಳುವುದು ಕಮ್ಮಿಯಾದುದರ ದೆಸೆಯಿಂದಲೂ ಮತ್ತು ಇನ್ನೂ ಇತರ ಅನೇಕ ಕಾರಣಗಳಿಂದಲೂ ಬೆಳೆಗಳೆಲ್ಲಾ ಕಮ್ಮಿ

* Asterisk indicates that the speech has not been revised by the Member concerned

ಯಾಗುತ್ತ ಬಂದಿದೆ. ಈ ಮಳೆಯ ಹಿನ್ನೆಲೆಯನ್ನು ನಾವು ನೋಡುವುದಾದರೆ, ಸಾಧಾರಣವಾಗಿ 1937 ನೆಯ ಸಾಲಿನಿಂದ 1952 ನೆಯ ಸಾಲಿನವರೆಗೂ ನಮ್ಮ ತಾಲ್ಲೂಕಿನಲ್ಲಿ 37 ರಿಂದ 42 ಇಂಚುಗಳವರೆಗೆ ಮಳೆಯಾಗಿರುತ್ತದೆ. ಇತ್ತೀಚೆಗೆ ಇದು 20 ಇಂಚುಗಳಿಗಿಂತಲೂ ಕಮ್ಮಿ ಹೊಯ್ಯಲು ಪ್ರಾರಂಭವಾಗಿದೆ. ಹೀಗೆ ಮಳೆಯು ವರ್ಷೇ ವರ್ಷೇ ಕಮ್ಮಿಯಾಗುತ್ತಿದೆಯೆಂಬ ಅಂಶವನ್ನು ತಾವೂ ಒಪ್ಪಿಕೊಂಡಿದ್ದೀರಿ, ಸಭೆಯವರೆಲ್ಲರೂ ಒಪ್ಪಿಕೊಂಡಿದ್ದಾರೆ. ಈ ಒಂದೇ ಒಂದು ಕಾರಣದಿಂದ ನಮ್ಮ ಸರಹದ್ದಿನಲ್ಲಿ ಹರಿಯತಕ್ಕ ಹಳ್ಳಗಳಲ್ಲಿ ಒಂದು ಹನಿ ನೀರೂ ಸಹ ಇರುವುದಿಲ್ಲ. ಸಂಸ್ಥಾನದ ನಾನಾಭಾಗಗಳಲ್ಲಿ ಜನರು ಒಂದು ಹೆಜ್ಜೆ ಮುಂದೆ ಹೋಗುತ್ತಿದ್ದರೆ, ನಾವು ಒಂದು ಹೆಜ್ಜೆ ಹಿಂದಕ್ಕೆ ಬರುತ್ತಿದ್ದೇವೆ. ಅನೇಕ ಹಳ್ಳಿಗಳಲ್ಲಿ ನೀರೂ ಸಹ ಇಲ್ಲದೆ ಬಾವಿಗಳೆಲ್ಲಾ ಒಣಗಿಹೋಗಿವೆ. ಹೀಗಾಗಿ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗೂ ಸಹ ಅಭಾವ ತುಂಬ ಎದ್ದು ಕಾಣುತ್ತಿದೆ. ಈ ರೀತಿಯಾಗಿ ನಮ್ಮ ತಾಲ್ಲೂಕುಗಳಲ್ಲಿ ಮಳೆಯಿಲ್ಲದೆ ಬೆಳೆಗಳೆಲ್ಲಾ ಒಣಗಿಹೋಗಿ ಜನರಿಗೆ ತುಂಬ ಕಷ್ಟವಾಗಿರುತ್ತದೆಯೆಂಬ ವಿಷಯವನ್ನು ನಾನು ಬಹಳ ವ್ಯಸನದಿಂದ ತಿಳಿಸಬೇಕಾಗಿದೆ. ಹೀಗೆ ಮಳೆಯು ನಮ್ಮ ಪ್ರಾಂತದಲ್ಲಿ ವರ್ಷೇ ವರ್ಷೇ ಕಡಮೆಯಾಗುತ್ತಿದ್ದಾಗ್ಯೂ ಅಲ್ಲಿ ತಾವು ಯಾವ ಒಂದು ದೊಡ್ಡ ನೀರಾವರಿ ಯೋಜನೆಯನ್ನೂ ಮಾಡಿಸಿರುವುದಿಲ್ಲ. ಖುಷ್ಕಿ ಬೆಳೆಕೂಡ ಸುತರಾಂ ಆಗದೆ ನಮ್ಮ ತಾಲ್ಲೂಕು ಒಂದು ದೊಡ್ಡ ಬಂಜರ್ ಪ್ರದೇಶವಾಗಿದೆ. 1948-49 ಮತ್ತು 50 ಈ ಮೂರು ವರ್ಷಗಳಲ್ಲಿ ಕೋರಾರದಲ್ಲಿದ್ದಿತೆಂದು ನಾವು ಹೇಳುತ್ತಿದ್ದ ಕಷ್ಟಪರಿಸ್ಥಿತಿಗಿಂತಲೂ ಹೆಚ್ಚಿನ ಕಷ್ಟಪರಿಸ್ಥಿತಿ ನಮ್ಮಲ್ಲಿ ಉಂಟಾಗಿತ್ತು. ಆಗ ಸರ್ಕಾರದವರು 1951 ರಲ್ಲಿ ಏನೋ ಒಳ್ಳೆಯ ಬಿತ್ತನೆ ಕಾಳುಗಳನ್ನು ರೈತರಿಗೆ ಒದಗಿಸುತ್ತೇವೆಂದು ಹೇಳಿ ಒಂದು ಜಾತಿಯ ಜೋಳವನ್ನು ಒದಗಿಸಿದರು. ಆಗ ನಮಗೆ ಆ ಪ್ರಾಂತದಲ್ಲಿ ಬಿತ್ತನೆಗೂ ಕೂಡ ಜೋಳದಕಾಳು ಗತಿಯಿರಲಿಲ್ಲ. ಆಗ ಸರ್ಕಾರದವರು ಜೋಳದ ಬೀಜವನ್ನು ಒದಗಿಸಿದರು. ಆದರೆ ಆ ಬೀಜದ ಕಾಳು ಒಳ್ಳೆಯದೇ, ಅಲ್ಲವೇ, ಎಂಬುದನ್ನು ಪರೀಕ್ಷೆ ಮಾಡದೆ ಹಾಗೆಯೇ ಸರ್ಕಾರದವರು ರೈತರಿಗೆ ಒದಗಿಸಿದ್ದ ಕಾರಣ ಆ ಬೆಳೆ ಇಟ್ಟ ಜನರಲ್ಲಿ ಶೇಕಡ 90 ರಷ್ಟು ಭಾಗ ಬೆಳೆಯೇ ಹುಟ್ಟಲಿಲ್ಲ. ಹೀಗೆಲ್ಲಾ ಆಗಿ ಜನರು ನಾನಾ ರೀತಿಯಲ್ಲಿ ಕಷ್ಟನಷ್ಟಗಳಿಗೆ ಗುರಿಯಾದರು. ಹಾಗೆ ಜೋಳದ ಬೆಳೆ ಕೆಟ್ಟುಹೋದನಂತರ ಮುಂದಿನ ವರ್ಷ 1952-53ಕ್ಕೆ ಆ ಭೂಮಿಗಳಲ್ಲಿ ರಾಗಿಬೆಳೆಯನ್ನಿಟ್ಟರು. ಅದೂ ಸಹ ಕೆಟ್ಟುಹೋಯಿತು. ಹೀಗೆಲ್ಲಾ ಆಗಿ ರೈತರಿಗೆ ಸುಮಾರು 1948 ರಿಂದ ಇಲ್ಲಿಯವರೆಗೆ ಬಿತ್ತನೆಕಾಳೂ ಸಹ ದೊರೆತಿರುವುದಿಲ್ಲ. ಈ ಸಾಲಿನಲ್ಲಂತೂ ಇಡೀ ಸಂಸ್ಥಾನಕ್ಕೇ ಕ್ಷಾಮ ಸಂಭವಿಸಿದೆ. ನಮ್ಮ ತಾಲ್ಲೂಕು ಒಂದರ ಪರಿಸ್ಥಿತಿಯಂತೂ ಇತ್ತೀಚೆಗೆ ತೀರ ಬಿಗಡಾಯಿಸಿಕೊಂಡಿತು. ಈ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿಕೊಂಡುಹೋಗಲು ಆ ಪ್ರದೇಶಕ್ಕೆ ಕೇಂದ್ರ ಸಚಿವರಾದ ಶ್ರೀ ಕೆ. ಸಿ. ರೆಡ್ಡಿಯವರು ಬಂದು ಸುತ್ತಮುತ್ತಲೂ ಇದ್ದ ಅನೇಕ ಗ್ರಾಮಗಳಿಗೆಲ್ಲಾ ಭೇಟಿಕೊಟ್ಟು ಜನರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡು ಬಂದಿರುತ್ತಾರೆ. ಈ ವಿಚಾರ ಮಾನ್ಯ ರೆವಿನ್ಯೂ ಮಂತ್ರಿಗಳಿಗೂ ಗೊತ್ತಿದೆ. ಅವರು ನಮ್ಮ ಪ್ರಾಂತ್ಯಕ್ಕೆ ಬಂದು ನೋಡಿಕೊಂಡು ಬಂದ ಮೇಲೆ ಸರ್ಕಾರದವರು ಆ ಪ್ರಾಂತಕ್ಕೆ ಅನುಕೂಲಗಳನ್ನೊದಗಿಸಲಾಗುತ್ತದೆಂದು ತಿಳಿಸಿದರು. ಆದರೆ ಸರ್ಕಾರದವರು ಒದಗಿಸಿದ ಪರಿಹಾರ ಸಾಕಾಗದೆ ಅಲ್ಲಿ ಇನ್ನೂ ಅಭಾವ ಇರುವುದು ಎದ್ದು ಕಾಣುತ್ತಿದೆ. ಜನರಿಗೆ ಸರ್ಕಾರದವರು ಒದಗಿಸಿರುವ ಆಹಾರ ಧಾನ್ಯ ಸಾಕಾಗುವುದಿಲ್ಲ. ಜನರಲ್ಲಿ ಕೊಳ್ಳುವುದಕ್ಕೂ ಸಹ ದುಡ್ಡಿಲ್ಲ. ಇದಕ್ಕಾಗಿ ಅಲ್ಲಿ ಕೈಕೊಳ್ಳಬೇಕಾದ ಕಾಂಗಾರಿಗಳ ಬಗ್ಗೆ ನಾವು 12 ಕಾಂಗಾರಿಗಳನ್ನು ತಮಗೆ ಸೂಚಿಸಿದ್ದೆವು. ತಾವು ಆ ಪೈಕಿ ಒಂದನ್ನೂ ಆಗುವಮಾಡಿಲ್ಲ. ತಾವು ಹೀಗೆ ಅಭಾವ ಪ್ರದೇಶಗಳಿಗೆ ಸಹಾಯ ನೀಡುತ್ತೇವೆಂದು ಹೇಳಿ ಅವುಗಳನ್ನು ನೀಡದೆಹೋದುದರಿಂದ ಅಲ್ಲಿಯ ಜನರಿಗೆ ತೊಂದರೆಗಳು ಮತ್ತು ಅಭಾವದ ಭಯಂಕರ ಪರಿಸ್ಥಿತಿ ಇನ್ನೂ ಇದ್ದೇ ಇದೆಯೆಂದು ಹೇಳುತ್ತೇನೆ. ಈಗ ಜನರಿಗೆ ಮೊದಲಿಗಿಂತಲೂ ಕಷ್ಟಗಳು ಹೆಚ್ಚಾಗಿರುತ್ತವೆ. ಜನರ ಕೈಮೇಲೆ ಕಾಸಿಲ್ಲ, ತಿನ್ನಲು ಕಾಳಿಲ್ಲ, ಕುಡಿಯಲು ನೀರಿಲ್ಲ. ಹೀಗಿರುವ ವೇಳೆಯಲ್ಲಿ ತಾವು ಅವರಿಗೆ ಕಂದಾಯವನ್ನೂ ಕೊಡಬೇಕೆಂದು ಹೇಳುವುದಾದರೆ, ಅವರ ಗತಿಯೇನಾಗಬೇಕು? ಅನೇಕರು ಗ್ರಾಮಗಳನ್ನೇ ಬಿಟ್ಟುಹೋಗುತ್ತಿದ್ದಾರೆ. ಇಷ್ಟಾದರೂ ತಾವು ಕಂದಾಯ ಮಾಫಿ ಮಾಡತಕ್ಕ ಬಗ್ಗೆ ತಮ್ಮ ಗಮನವನ್ನೇ ಕೊಟ್ಟಿಲ್ಲ. ಅವರಿಗೆ ಈ ಒಂದು ಕಂದಾಯದ ರಿಯಾಯಿತಿಯನ್ನಾದರೂ ಕೊಡದೆ ಹೋದರೆ ತಾವು ಅವರಿಗೆ ತುಂಬ ಅನ್ಯಾಯ ಮಾಡಿದಂತಾಗುತ್ತದೆ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ತಾವು ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುತ್ತ, ಕೆರೆಕಟ್ಟೆಗಳ ಕೆಳಗೆ ತರೀ ಜಮೀನಿಗೆ ಅರ್ಧ ಕಂದಾಯ ಮಾಫಿ ಮಾಡಲಾಗಿರುತ್ತದೆಂದು ತಿಳಿಸಿದಿರಿ. ಆದರೆ ನಮ್ಮ ಪ್ರಾಂತಕ್ಕೆ ಅಷ್ಟೇ ಆದರೆ ಸಾಲದು. ನಮ್ಮಲ್ಲಿ ತರಿ ಮತ್ತು ಖುಷ್ಕಿ ಈ ಎರಡು ಜಮೀನುಗಳಿಗೂ ಕಂದಾಯ ರೆಮಿಷನ್ ಮಾಡಬೇಕಾಗಿದೆ. ತಮ್ಮ ರೂಲ್ಸಿನಲ್ಲಿ ಹೇಳಿರತಕ್ಕ ಪ್ರಕಾರ ಖುಷ್ಕಿ ಜಮೀನುಗಳ ಬಗ್ಗೆ ಕಂದಾಯ ರಿಮಿಷನ್ ಮಾಡಬೇಕಾಗಿದ್ದರೆ 4 ಆಣೆಗಳ ಬೆಳೆಗಿಂತಲೂ ಕಮ್ಮಿ ಬೆಳೆಯಾಗಿದ್ದರೆ ಮಾತ್ರವೇ ರಿಯಾಯಿತಿ ತೋರಿಸಲು ಅವಕಾಶವಿರುತ್ತದೆಯೆಂದು ತಾವು ತಿಳಿಸೋಣವಾಗಿದೆ. ಆದರೆ ಈ ದಿವಸ ಆ ಪಟೇಲ್ ಶ್ಯಾನುಭೋಗರು ಸರ್ಕಾರಕ್ಕೆ ತಿಳಿಸಿರತಕ್ಕ ಸುಳ್ಳುಪಹಣಿ ಲೆಕ್ಕಗಳ ದೆಸೆಯಿಂದ ಅನೇಕ ರೈತರು ತುಂಬ ಕಷ್ಟನಷ್ಟಕ್ಕೆ ಈಡಾಗಿದ್ದಾರೆ. ಆ ಪಟೇಲ್ ಶ್ಯಾನುಭೋಗರುಗಳಿಗೆ ನಿಜವಾಗಿಯೂ ಸರ್ಕಾರಕ್ಕೆ ಈ ವಿಚಾರದಲ್ಲಿ ತುಂಬ ಮರೆಮಾಚಿ ವಿಷಯಗಳನ್ನು ತಿಳಿಸಿದ್ದಾರೆ. ಸರ್ಕಾರದವರು ಈ ಲೆಕ್ಕ ಪತ್ರಗಳಿಗೆ ಗಮನ ಕೊಡುವುದಾದರೆ ಜನರನ್ನು ತಾವಾಗಿಯೇ ಹೀನಸ್ಥಿತಿಗೆ ತರಲು ದಾರಿ ಮಾಡಿಕೊಟ್ಟಂತಾಗುತ್ತದೆ. ಸರ್ಕಾರದವರ ಒಂದು ಭಯಕ್ಕೋ ಏನೋ ಆ ಪಟೇಲ್ ಶ್ಯಾನುಭೋಗರು ಹೀಗೆ ಮಾಡಿರಬಹುದು. ಈ ಮಾನ್ಯ ಸಭೆಯ ಸದಸ್ಯರು ಕಳುಹಿಸಿರತಕ್ಕ ಅನೇಕ ನಿರ್ಣಯಗಳಲ್ಲಿ ಈ ನಿರ್ಣಯಕ್ಕೇ ಮೊದಲನೆಯ ಸ್ಥಾನ ದೊರೆತಿದೆ. ದೇವರೇ ಆ ಜನರ ಕಷ್ಟನಷ್ಟಗಳಿಗೆ ಸಾಕ್ಷಿಯಾಗಿದ್ದುದರಿಂದ ಈ ನಿರ್ಣಯಕ್ಕೆ ಮೊದಲನೇ ಸ್ಥಾನ ಮತ್ತು ಪ್ರಾಶಸ್ತ್ಯ ದೊರೆತಿರುತ್ತದೆ. ಆ ಜನರು ಕಷ್ಟಕ್ಕೆ ಈಡಾಗಿದ್ದಾರೆಂಬುದಕ್ಕೆ ಇದೇ ಒಂದು ದೊಡ್ಡ ಸಾಕ್ಷಿಯಾಗಿದೆ. ಸರ್ಕಾರದವರು ಈ ನಿರ್ಣಯದಲ್ಲಿ ಕೇಳಿರತಕ್ಕ ಅಂಶಗಳನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಮಾಡಿ ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

(Sri M. Madiah rose).

Mr. SPEAKER.—A number of questions have been put for the last

(MR. SPEAKER.)

many days on this subject. This resolution pertains only to a particular area. Two representatives of that area have taken part in the debate. At this rate, we cannot show much progress so far as resolutions are concerned. It is left to the House. If I give a chance to the Hon'ble Member I will have to give chances for others also.

Sri M. MADIAH (Nanjangud—Scheduled Castes).—I may be permitted to say one or two sentences.

Mr. SPEAKER.—Yes.

*Sri M. MADIAH.—I cannot support the resolution as it is.

ಈ ನಿರ್ಣಯದ ವಿಷಯುವಾದ ರಿಲೀಫ್‌ಕೊಡತಕ್ಕ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೂ ಈ ನಿರ್ಣಯ ಇರತಕ್ಕ ರೀತಿಯಲ್ಲಿ ನಾನಿದನ್ನು ಸಮರ್ಥಿಸುವ ಹಾಗಿಲ್ಲ.

ಈ ನಿರ್ಣಯದಲ್ಲಿ ಹೇಳಿರುವಂತೆ ಅಲ್ಲಿನ ಜನರಿಗೆ ಪರಿಹಾರವನ್ನು ದೊರಕಿಸಿಕೊಡಬೇಕಾದದ್ದು ಅಗತ್ಯವೆಂದು ಹೇಳಬೇಕಾಗುತ್ತದೆ. ಏಕೆಂದರೆ, ನಂಜನಗೂಡು ತಾಲ್ಲೂಕಿಗೆ ಇದು ಪಕ್ಕದ ತಾಲ್ಲೂಕು. ನಾನು ಆ ಪ್ರದೇಶದಲ್ಲಿ ಸಂಚಾರಮಾಡಿ ಖುದ್ದಾಗಿ ಅಲ್ಲಿನ ಸ್ಥಿತಿಗತಿಗಳನ್ನು ನೋಡಿದ್ದೇನೆ. ಕಳೆದ ತಿಂಗಳಿನಲ್ಲಿ ತಾನೆ ಡೆಪ್ಯುಟೀಕಮಿಷನರ ಜೊತೆಯಲ್ಲಿ ನಾನು ಆ ಪ್ರಾಂತಕ್ಕೆ ಹೋಗಬೇಕಾದ ಅವಕಾಶ ದೊರಕಿತು. ನಿಜವಾಗಿಯೂ ಕಳೆದಸಾರಿ ಮಳೆಯಾಗದೆ ಅಲ್ಲಿ ಬೆಳೆಯಾಗಲಿಲ್ಲ. ಗೊಬ್ಬರವನ್ನು ಕೂಡ ಗುಡ್ಡೆ ಹಾಕಿದ್ದನ್ನು ಚೆಲ್ಲಲಿಲ್ಲ. ಗುಡ್ಡೆಗಳು ಇನ್ನೂ ಹಾಗೆಹಾಗೆಯೇ ಇವೆ. ಈ ದೃಷ್ಟಿಯಿಂದ ಇಲ್ಲಿ ಕೇಳಿರತಕ್ಕ ರೀತಿ ಕಂದಾಯ ಮಾಫಿ ಕೊಡಬೇಕಾದದ್ದು ಅಗತ್ಯವಾಗಿದೆ.

ಆದರೆ ಈ ವರ್ಷದ ಕಂದಾಯದ ವಸೂಲಿ ಕಾಲದ ಕಳೆ ತಿಂಗಳಿನಲ್ಲಿಯೇ ಪ್ರಾರಂಭವಾಗಿದೆ. ಹೋದ ಫೆಬ್ರವರಿ ಮಾರ್ಚಿ ತಿಂಗಳುಗಳಲ್ಲಿ ಸ್ವಲ್ಪಮಟ್ಟಿಗೆ ಕಂದಾಯ ವಸೂಲಿ ನಡೆದಿವೆ. ಆದ ರಿಂದ current year ನಲ್ಲಿ ಕಂದಾಯ ಮಾಫಿ ಕೊಡತಕ್ಕದ್ದು ಸ್ವಲ್ಪ ಕಷ್ಟವಾಗಿ ತೋರುತ್ತದೆ. ಅಲ್ಲದೆ ಅಲ್ಲಿನ ಡೆಪ್ಯುಟಿಕಮಿಷನರಾಗಲಿ ಅಮಲ್ದಾರರುಗಳೂ ಯಾವ ರೀತಿ ತಮಗೆ ವರದಿ ಕಳುಹಿಸಿದ್ದಾರೋ ಗೊತ್ತಿಲ್ಲ. ಬಹುಶಃ ಅಲ್ಲಿ ಬೆಳೆಯಾಗಿಲ್ಲವೆಂದೇ ಅವರೂ ವರದಿ ಕಳುಹಿಸಿರಬೇಕು. ನ್ಯಾಯವಾಗಿ ಇದುವರೆಗಾಗಲೇ ನ್ಯಾಯವಾಗಿ ಅಲ್ಲಿಗೆ ರೆಮಿಷನ್ ಕೊಡಬೇಕಾಗಿತ್ತು. ಇತ್ತೀಚೆಗೆ ನಾನು ನೆಡುತ್ತಿರುವುದರಲ್ಲಿ ಏಕೋ ಮೈಸೂರು ಜಿಲ್ಲೆಯ ವಿಷಯದಲ್ಲಿ ಅದು ರಿಮಿಷನ್ನಿಗೆ ಅರ್ಹವಾಗಿದ್ದರೂ ಅದರ ಕಡೆ ಸಹಾನುಭೂತಿಯಿಂದ ನೋಡುತ್ತಿಲ್ಲ. ಅಂದ ಮಾತ್ರಕ್ಕೆ ತಾವು ಉದ್ದೇಶಪೂರ್ವಕ ಆ ರೀತಿ ಮಾಡುತ್ತಿದ್ದೀರೆಂದು ಹೇಳುತ್ತಿಲ್ಲ. ಮೈಸೂರು ಡಿಸ್ಟ್ರಿಕ್ಟಿನ ಮಳೆಯಾಗದ ತಾಲ್ಲೂಕುಗಳ ಪೈಕಿ ಇದೂ ಒಂದು, ಆದರ ಹಿಂದಿನ ಸಾಲಿನಲ್ಲೂ ಅಲ್ಲಿ ಸಾಕಷ್ಟು ಮಳೆಯಾಗಲಿಲ್ಲ. ನ್ಯಾಯವಾಗಿ ಕಳೆದ ನಾಲ್ಕಾರು ವರ್ಷಗಳಿಂದಲೂ ಅಲ್ಲಿಗೆ ರೆಮಿಷನ್ ಕೊಡಬೇಕಾಗಿತ್ತು. ಅಂಥದರಲ್ಲಿ ಈ ವರ್ಷಕ್ಕೆ ಮಾತ್ರ ಕೇಳಿದ್ದಾರೆ. ಅದರಲ್ಲೂ ಎರಡು ತಿಂಗಳುಗಳು ಕಳೆದುಹೋಗಿವೆ. ಉಳಿದ ತಿಂಗಳುಗಳಿಗಾದರೂ ಮಾನ್ಯ ಸದಸ್ಯರು ಕೇಳಿರುವ ರೀತಿಯಲ್ಲಿ ರೆಮಿಷನ್ ಕೊಡುವುದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದರೂ ಒಂದು ತೊಂದರೆ ಇರುವಂತೆ ಕಾಣುತ್ತದೆ. ಇಲ್ಲಿ ನಿರ್ಣಯದಲ್ಲಿ 'immedate' ಎಂದು ಹೇಳಿದ್ದಾರೆ ಅದು ಸಾಧ್ಯವಾಗಲಾರದು. ಈ ಕಾರಣದಿಂದ ನನಗೆ ಈ ನಿರ್ಣಯದ ವಿಷಯದಲ್ಲಿ ಸಹಾನುಭೂತಿಯಿದ್ದರೂ ಸಮರ್ಥನೆ ಮಾಡುವುದಕ್ಕೆ ಅವಕಾಶವಿಲ್ಲದೆ ಹೋಗಿದೆ. ಆದ್ದರಿಂದ ಆದಷ್ಟು ಬೇಗನೆ ಪರಿಶೀಲನೆ ಮಾಡಿ ಈ ತಾಲ್ಲೂಕಿಗೆ ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮುರಾಮತ್ತು ಶಾಖೆಗಳ ಸಚಿವರು).—ಅಧ್ಯಕ್ಷರೇ, ಸಂಸ್ಥಾನದ ಮೂರನೆಯ ಎರಡು ಭಾಗದಷ್ಟು ಪ್ರದೇಶದಲ್ಲಿ ಈ ಸಾಲಿನಲ್ಲಿ ಅಭಾವದ ಪರಿಸ್ಥಿತಿ ತಲೆದೋರಿತ್ತು. ಗುಂಡ್ಲುಪೇಟೆ ತಾಲ್ಲೂಕಿನಲ್ಲೂ ಕೂಡ ಸ್ವಲ್ಪಮಟ್ಟಿನ ಪರಿಸ್ಥಿತಿಯಿತ್ತು. ಕೋಲಾರದ ಜಿಲ್ಲೆ ಮತ್ತು ಇತರ ಅಭಾವದ ಪ್ರದೇಶಗಳಲ್ಲಿ ಸರ್ಕಾರದವರು ಕೈಕೊಂಡಿರತಕ್ಕ ಕ್ಷಾಮಪರಿಹಾರದ ಕಾರ್ಯಗಳನ್ನೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಾಡಿರತಕ್ಕ ಕ್ಷಾಮಪರಿಹಾರದ ಕಾರ್ಯಗಳನ್ನೂ ಹೋಲಿಸುವ ಪ್ರಯತ್ನವನ್ನು ಮಾನ್ಯ ಸದಸ್ಯರು ಮಾಡಿದರು. ಆದರೆ ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿ ಒದಗಿದ್ದ ಅಭಾವ ಪರಿಸ್ಥಿತಿಗೂ ಮೈಸೂರು ಜಿಲ್ಲೆಯಲ್ಲಿ ಒದಗಿದ್ದ ಅಭಾವ ಪರಿಸ್ಥಿತಿಗೂ ಅರ್ಥಾರ್ಥ ಹೋಲಿಕೆಯೇ ಇಲ್ಲ. ಕಂದಾಯವನ್ನು ಮಾಫಿ ಮಾಡುವ ವಿಚಾರದಲ್ಲಿ ಸರ್ಕಾರದವರು ಬಹಳ ಸಹಾನುಭೂತಿಯ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಯಾವ ಯಾವ ತಾಲ್ಲೂಕುಗಳಲ್ಲಿ ಮಾಫೀ ಮಾಡತಕ್ಕದ್ದು ಅಗತ್ಯವೆಂದು ಸ್ಥಳೀಯ ಅಧಿಕಾರಿಗಳು ರಿಪೋರ್ಟ್ ಕಳುಹಿಸುತ್ತಾರೋ, ಆ ರಿಪೋರ್ಟಿನ ಪ್ರಕಾರ ನಾವು ಕಂದಾಯ ಮಾಫೀ ಮಾಡುತ್ತಲೇ ಬಂದಿದ್ದೇವೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸುಮಾರು 40,000 ಎಕರೆಗಳಷ್ಟು ಖುಷ್ಕಿ ಜಮೀನಿದೆ. ಆ ಪೈಕಿ ನಮಗೆ ಬಂದಿರತಕ್ಕ ವರದಿಯ ಪ್ರಕಾರ ಅರ್ಧಭಾಗದ ಜಮೀನಿನಲ್ಲಿ commercial crop ಬೆಳೆದಿದ್ದರೆಂದೂ ಇನ್ನುಳಿದ ಭಾಗದಲ್ಲಿ ಕೆಲವು ಭಾಗದಲ್ಲಿ ರಾಗಿ, ಕೆಲವು ಭಾಗದಲ್ಲಿ ಜೋಳ ಬೆಳೆದಿತ್ತೆಂದೂ, ರೂಪಾಯಿಗೆ 8 ಆಣೆ ಬೆಳೆಯಾಗಿತ್ತೆಂದೂ ತಿಳಿಸಿದ್ದಾರೆ. ಮಂತ್ರಿಗಳೇ ಸ್ಥಳಕ್ಕೆ ಹೋಗಿ ಎಂಟಾಣೆಯ ಬೆಳೆಯಾಗಿದೆಯೋ, ಆರಾಣೆಯ ಬೆಳೆಯಾಗಿದೆಯೋ ಎಂದು ನಿರ್ಧಾರಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಏನಿದ್ದರೂ ಸ್ಥಳೀಯ ಅಧಿಕಾರಿಗಳ ಮೇಲೆಯೇ ಅವಲಂಬಿಸಬೇಕಾಗುತ್ತದೆ. ಅಲ್ಲದೆ, ಯಾವ ಅಧಿಕಾರಿಗಳಿಗೂ ಕೂಡ ಬೆಳೆಯೇನೂ ಆಗದೆ ಇದ್ದಾಗ ಬೆಳೆಯಾಗಿದೆಯೆಂದು ಬರೆಯಿರಿ ಎಂದು ಸರ್ಕಾರದವರೇನೂ inst uctio s ಕೊಟ್ಟಿಲ್ಲ. ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಂದ ಕಂದಾಯ ಮಾಫೀ ಮಾಡುವುದಕ್ಕೆ ಶಿಫಾರಸುಗಳು ಬರುತ್ತಲೇ ಇವೆ. ಅವುಗಳನ್ನು ಪರಿಶೀಲಿಸುತ್ತಿದ್ದೇವೆ. ಯಾವ ಸಂದರ್ಭದಲ್ಲೂ ಸ್ಥಳೀಯ ಅಧಿಕಾರಿಗಳ ಶಿಫಾರಸನ್ನು ನಾವು ತಿರಸ್ಕಾರ ಮಾಡಿಲ್ಲ. ಈಗಲೂ ಕೂಡ ಗುಂಡ್ಲುಪೇಟೆ ತಾಲ್ಲೂಕಿನ ವಿಷಯದಲ್ಲಿ ಪುನಃ ಇನ್ನೊಮ್ಮೆ ಡೆಪ್ಯುಟಿಕಮಿಷನರನ್ನು ನೋಡಿಕೊಂಡು ಬನ್ನಿ ಎಂದು ಹೇಳುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಈಗ ಬಂದಿರತಕ್ಕ ವರದಿಯ

ಪ್ರಕಾರ ಕಂದಾಯ ಮಾಫೀ ಮಾಡ ವಷ್ಟು ಪರಿಸ್ಥಿತಿ ಅಲ್ಲಿಲ್ಲವೆಂದು ಸರ್ಕಾರದವರಿಗೆ ತಿಳಿಯಬಂದಿದೆ.

ಶ್ರೀ ಎಂ. ಮಾದಯ್ಯ.—ತಮಗೆ information ಬರುವುದಕ್ಕೆ ಮುನ್ನ ಅಲ್ಲಿ ಬೆಳೆಯಾಗಿಲ್ಲವೆಂಬ ಬಗ್ಗೆ ಅಮಲ್ದಾರರ ಆಫೀಸಿನಲ್ಲಿ ಏನಾದರೂ ರಿಕಾರ್ಡ್ ನಡೆದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—"ಶ್ರೀಮಾನ್ ಕೆ. ಸಿ. ರೆಡ್ಡಿಯವರು ಅಲ್ಲಿ ಪ್ರವಾಸಮಾಡಿದರು, ಅದರೂ ಕೂಡ ಅಲ್ಲಿನ ಪರಿಸ್ಥಿತಿಯನ್ನು ಮನಗಂಡಿದ್ದಾರೆ" ಎಂದು ಮಾನ್ಯ ಸದಸ್ಯರು ಹೇಳಿದ). ಶ್ರೀಮಾನ್ ರೆಡ್ಡಿಯವರು ಅಲ್ಲಿಗೆ ಹೋಗಿದ್ದುದು ನಿಜ. ಅಲ್ಲಿ ಅಭಾವ ಪರಿಸ್ಥಿತಿ ಇತ್ತೆಂದು ಹೇಳಿದುದನ್ನು ಸಭೆಯ ಮುಂದೆ ತಿಳಿಸಿದ್ದೇನೆ. ಅವರೂ ಕಂದಾಯ ಮಾಫೀ ಮಾಡಬೇಕೆಂದು ಹೇಳಲಿಲ್ಲ ಡೆಪ್ಯುಟೀಕಮಿಷನರಿಗೂ ಇದುವರೆಗೂ ಯಾರೂ ಈ ಬಗ್ಗೆ ಅರ್ಜಿಯನ್ನೂ ಕೊಟ್ಟಿಲ್ಲವೆಂದು ಗೊತ್ತಾಗಿದೆ. ಶ್ರೀಮಾನ್ ಕೆ. ಸಿ. ರೆಡ್ಡಿಯವರು ಅಲ್ಲಿಗೆ ಹೋಗಿದ್ದಾಗ ಅವರಿಗೆ ತಿಳಿಸಿದ್ದುವಿನಾ ಬೇರೆ ಯಾವಾಗಲೂ ಯಾರೂ ಇಲ್ಲಿಯತನಕ ಅರ್ಜಿಕೊಟ್ಟಿಲ್ಲವೆಂದು ತಿಳಿದುಬಂದಿದೆ. ಹೀಗಿರುವಲ್ಲಿ ನಾನು ಮೊದಲೇ ಅರಿಕೆಮಾಡಿಕೊಂಡ ಹಾಗೆ ಮಂತ್ರಿಗಳೇ ಪ್ರತಿಯೊಂದು ಕಡೆಗೂ ಹೋಗಿ ಎಷ್ಟು ಬೆಳೆಯಾಗಿದೆಯೆಂದು ಕಂಡು ಹಿಡಿಯುವುದಕ್ಕಾಗುವುದಿಲ್ಲ. ಸ್ಥಳೀಯ ಅಧಿಕಾರಿಗಳಿಂದ ತಿಳಿದುಬಂದಿದೆಯೆಂದರೆ, ತಾವು 'ಸ್ಥಳೀಯ ಅಧಿಕಾರಿಗಳು, ಶ್ಯಾನುಭೋಗ್ ಪಟೇಲರುಗಳು ಸುಳ್ಳು ಬರೆಯುತ್ತಾರೆ' ಎಂದು ಹೇಳುತ್ತೀರಿ. ಅಂಥ ಸಂದರ್ಭಗಳನ್ನು ನಮ್ಮ ಗಮನಕ್ಕೆ ತನ್ನಿ ಎಂದು ಮೊನ್ನೆಯೇ ತಿಳಿಸಿದೆ, ಆದರೂ ತಾವು ಇದುವರೆಗೂ ತರಲಿಲ್ಲ. ಅದೇನೇ ಇರಲಿ, ಈಗಲೂ ಡೆಪ್ಯುಟಿಕಮಿಷನರಿಂದ ಮತ್ತೆ ಪರಿಶೀಲನೆ ನಡೆಸಿ, ನಿಜವಾಗಿಯೂ ಪರಿಸ್ಥಿತಿ ಕೆಟ್ಟಿದ್ದರೆ, ರೆಮಿಷನ್ ಕೊಡುವುದಕ್ಕೆ ಸರ್ಕಾರದವರದೇನೂ ಅಭ್ಯಂತರವಿಲ್ಲ. ಇಷ್ಟು ವಿವರಣೆ ಕೊಟ್ಟಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri SIDDIAH *alias* KUNNIAH.—I press the resolution.

Mr. SPEAKER.—The question is :

"That this Assembly is of the opinion that the Government should issue orders immediately not to recover the current year's land revenue in scarcity areas of Gundlupet Taluk."

The motion was negatived.

No. 2—Promoting the spread of Hindi Language in the State.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ-

"This Assembly is of the opinion that our State Government should promote the spread of Hindi Language and give all encouragement to it."

ಅದನ್ನು ಮಂಡಿಸುತ್ತೇನೆ.

ಈ ವಿಚಾರವಾಗಿ ನಾನು ಹೆಚ್ಚಿಗೆ ಉಪನ್ಯಾಸ ಮಾಡುವುದು ಅನಾವಶ್ಯಕವೆಂದು ಈ ಸಭೆಯ ಗಮನಕ್ಕೆ ತರಬಚ್ಛಿಸುತ್ತೇನೆ. ಸ್ವಾಮಿ, ತಮ್ಮಗಳಿಗೆಲ್ಲಾ ಗೊತ್ತಿರುವ ಹಾಗೆ ಪ್ರತಿಯೊಂದು ರಾಜ್ಯಕ್ಕೂ ಒಂದೊಂದು ರಾಷ್ಟ್ರಭಾಷೆಯು ಅವಶ್ಯಕತೆಯಿದೆ. ಪರದೇಶಗಳಲ್ಲಿ ಯಾವ ರಾಷ್ಟ್ರವನ್ನು ನೋಡಿದರೂ ಕೂಡ ಅಲ್ಲಿ ಹೆಚ್ಚಿಗೆ ಭಾಷೆಗಳು ಪ್ರಚಾರದಲ್ಲಿರುವುದಿಲ್ಲ. ಜರ್ಮನಿಯಲ್ಲಿ ಜರ್ಮನ್ ಎಂದು ಒಂದೇ ಭಾಷೆಯಿದೆ; ಅಮೇರಿಕಾದಲ್ಲಿ ಆಂಗ್ಲ ಭಾಷೆಯೆಂದು ಒಂದೇ ಪ್ರಧಾನ ಭಾಷೆಯಿದೆ. ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಒಂದನ್ನೇ ಪ್ರಧಾನ ಭಾಷೆಯಾಗಿಟ್ಟುಕೊಂಡಿದ್ದಾರೆ. ಹೀಗೆ ಪ್ರತಿಯೊಂದು ರಾಷ್ಟ್ರಕ್ಕೂ ಒಂದೊಂದು ರಾಷ್ಟ್ರಭಾಷೆಯಿರುವುದು ತಮಗೆ ಗೊತ್ತಿದೆ. ಆದರೆ ನಮ್ಮ ದೇಶದ ಒಂದು ವೈಶಿಷ್ಟ್ಯವೇನೆಂದರೆ, ಇಲ್ಲಿ ಇದುವರೆಗೂ ರಾಷ್ಟ್ರಭಾಷೆ ಯಾವುದೆಂದು ತೀರ್ಮಾನವಾಗದಿದ್ದು, ನಮ್ಮ ನಿಜವಾದ ರಾಷ್ಟ್ರಭಾಷೆ ಯಾವುದಾಗಬೇಕೋ ಅದಕ್ಕೆ ಉತ್ತೇಜನ ದೊರೆಯದಿದ್ದುದರಿಂದ ದೇಶದಲ್ಲಿರುವ ನಾನಾ ಪ್ರಾಂತಗಳು ಪ್ರಾಂತೀಯ ಭಾಷೆಗಳಿಗೆ ಉತ್ತೇಜನ ಕೊಡಬೇಕೆಂದು ಕೇಳುತ್ತಿರುವುದಲ್ಲದೆ, ಇನ್ನೊಂದು ಕಡೆ ಆಂಗ್ಲೇಯ ಭಾಷೆಯನ್ನು ಅನುಸರಿಸುವುದಕ್ಕೂ ಜನ ಹೊರಟಿದ್ದಾರೆ. ಹೀಗಾಗಿ ಮದ್ರಾಸಿನಲ್ಲಿ ತೆಲುಗು, ಬೊಂಬಾಯಿನಲ್ಲಿ ಮರಾಠಿ, ಉತ್ತರ ಪ್ರದೇಶದಲ್ಲಿ ಗುಜರಾತಿ, ಹೀಗೆಲ್ಲಾ ಒಂದೊಂದು ಪ್ರಾಂತದಲ್ಲೂ ಒಂದೊಂದು ಭಾಷೆ ಬೆಳೆದುಕೊಂಡಿದೆ. ಇಂಥ ಪರಿಸ್ಥಿತಿಯಲ್ಲಿ ಯಾರಾದರೊಬ್ಬರು ನಮ್ಮ ದೇಶದಲ್ಲೆಲ್ಲಾ ಸಂಚಾರ ಮಾಡ ಹೊರಟು ಹೀಗೆ ಒಂದೊಂದು ಕಡೆಯೂ ಒಂದೊಂದು ಭಾಷೆಯಿರುವುದನ್ನು ನೋಡಿದರೆ ಏನೆಂದುಕೊಂಡಾರು ಎಂಬುದನ್ನು ನಾನು ಹೇಳಬೇಕಾಗಿಲ್ಲ. ಆದ್ದರಿಂದ ನಮಗೆ ಒಂದು ರಾಷ್ಟ್ರಭಾಷೆಯ ಅವಶ್ಯಕತೆಯ ವಿಚಾರದಲ್ಲಿ ನಾನೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಇದನ್ನೆಲ್ಲಾ ಗಮನಿಸಿಯೇ ನಮ್ಮ ಹಿರಿಯ ನಾಯಕರು ಈಗ ಅನೇಕ ವರ್ಷಗಳ ಹಿಂದೆಯೇ ಒಂದು ರಾಷ್ಟ್ರಭಾಷೆಯಾಗಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ಬಗ್ಗೆ ರಾಜ್ಯಾಂಗ ಘಟನೆಯಲ್ಲಿ ಅನೇಕ ನಿಯಮಗಳನ್ನು ತಯಾರುಮಾಡಿದ್ದಾರೆ. ಅದರ ಕಡೆಗೆ ನಮ್ಮ ಪ್ರಾಂತ ಸರ್ಕಾರದವರ ಗಮನವನ್ನು ಸೆಳೆಯುವುದೇ ನನ್ನ ನಿರ್ಣಯದ ಉದ್ದೇಶ. ಈ ಘನವಾದ ಉದ್ದೇಶದಿಂದ ಈ ನಿರ್ಣಯವನ್ನು ಮುಂದೆ ಮಂಡಿಸುತ್ತಿದ್ದೇನೆ.

ಆ ನಿಯಮಗಳು ಯಾವುವು, ಏನು ಎಂಬ ವಿಚಾರವನ್ನು ತಮ್ಮ ಮುಂದಿಡುವುದಕ್ಕೆ ನನಗೆ ಹೆಚ್ಚಿಗೆ ಕಾತುರತೆಯಿದ್ದರೂ ಕಾಲಾವಕಾಶವಿಲ್ಲದೆ, 351ನೇ ಸೆಕ್ಷನ್ನನ್ನು ಮಾತ್ರ ಈಗ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿ ಆದಷ್ಟು ಜಾಗ್ರತೆ ಎಲ್ಲಾ ಪ್ರಾಂತಗಳೂ ಹಿಂದೀ ಭಾಷೆಯನ್ನು ಪ್ರಸಾರ ಮಾಡಲಿಕ್ಕೂ, ಬಳಸುವುದಕ್ಕೂ ಸರ್ವಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ. ಅದರಲ್ಲೂ. 15 ವರ್ಷಗಳಲ್ಲಿ ಹಿಂದೀ ಭಾಷೆಯು Official Language ಆಗುತ್ತದೆಂದು ತಿಳಿಸಿದ್ದಾರೆ. ಇಷ್ಟು ಮಾಡಿದ್ದರೂ ಕೂಡ ಇನ್ನೂ ನಮ್ಮ ಪ್ರಾಂತ ಸರ್ಕಾರಗಳು ನಿಧಾನವಾಗಿ ಹೋಗುತ್ತಿವೆಯಲ್ಲ ಎಂಬುದು ಅನೇಕ ಸಂದರ್ಭಗಳಲ್ಲಿ ಆಶ್ಚರ್ಯವನ್ನುಂಟುಮಾಡಿದೆ.

ಅಲ್ಲದೆ ಹಿಂದೀ ಅಷ್ಟು ಕಷ್ಟವಾದ ಭಾಷೆಯಲ್ಲ. ಆದರೆ ಈಗ ಬಂದಿರುವ ಒಂದು ಮುಖ್ಯ ಅಡಚಣೆ

(ಶ್ರೀ ಜಿ. ಶಿವಪ್ಪ)

ಯೇನೆಂದರೆ, ಒಂದು ಕಡೆ ಕೆಲವರು ಮಾತ್ರ ಭಾಷೆ, ಮಾತೃಭಾಷೆ ಎಂದು ಹೇಳಿಕೊಂಡು ಕನ್ನಡಕ್ಕೆ ಹೆಚ್ಚು ಹೆಚ್ಚು ಉತ್ತೇಜನ ಕೊಡಿ ಎಂದು ವಾದ ಮಾಡುತ್ತಿದ್ದಾರೆ. ಕನ್ನಡ ಭಾಷೆಯ ವಿಷಯದಲ್ಲಿ ನನಗೂ ಹೆಚ್ಚಿನ ಅಭಿಮಾನವಿದೆ; ಅದಕ್ಕೂ ಉತ್ತೇಜನ ಕೊಡಬೇಕೆಂಬುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರೂ ಅದಕ್ಕೆ ಯಾವ ಮಿತಿಯಿರಬೇಕೋ ಅದನ್ನು ಆ ಮಿತಿಯಲ್ಲಿಟ್ಟಿರಬೇಕು. ಹೀಗೆ ಒಂದು ಕಡೆ ಕನ್ನಡಿಗರ ವಾದವಾದರೆ, ಇನ್ನೊಂದು ಕಡೆ ಇಂಗ್ಲೀಷಿನ ಪರವಾಗಿ ವಾದಿಸುವವರು ಬೇರೆ ಇದ್ದಾರೆ. ಇಂಗ್ಲೀಷಿನ ಭಾಷೆಯಿಂದಲೇ ಸರ್ವ ಸಂಸ್ಕೃತಿ, ಸರ್ವ ಶಾಸ್ತ್ರ, ಸರ್ವ ವಿಜ್ಞಾನಗಳಿಗೆ ದಾರಿ, ಬೇರೆ ಯಾವ ಭಾಷೆಯಿಂದಲೂ ಅದನ್ನು ಸಾಧಿಸಲು ಸಾಧ್ಯವಿಲ್ಲ ಎಂದು ವಾದಿಸುವವರೂ ಇದ್ದಾರೆ. ಈ ವಾದವನ್ನು ಕೇಳಿ ನಮ್ಮ ಪಂಡಿತ್ ಜವಾಹಿರಲಾಲ್ ಒಮ್ಮೆ ಹೇಳಿದ್ದಾರೆ. ಆಂಗ್ಲೇಯರ ಭಾಷೆಯಿಂದರಿಂದಲೇ ನಮ್ಮ ಸಂಸ್ಕೃತಿಯನ್ನಿಟ್ಟುಕೊಳ್ಳುವುದಕ್ಕೆ ಸಾಧ್ಯವೆಂದು ನಾವು ಭಾವಿಸುವುದಾದರೆ ನಾವು ಇನ್ನೂ ಅಂಧಕಾರದಲ್ಲಿದ್ದೇವೆಂದು ತಿಳಿಯಬೇಕೆಂದು ಅವರು ಹೇಳಿದರು. ವಿಶ್ವವಿದ್ಯಾನಿಲಯಕ್ಕೆ Convocation Address ಕೊಡುವ ಸಂದರ್ಭದಲ್ಲಿ ಈ ಅಭಿಪ್ರಾಯವನ್ನು ಸೂಚಿಸುತ್ತಾ ಹಿಂದೀಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ.

1-30 P.M.

ಇಷ್ಟು ವಿಚಾರವಾದ ಮೇಲೆ, ಹದಿನೈದು ವರ್ಷಗಳಲ್ಲಿ ಹಿಂದೀಯನ್ನು ನಮ್ಮ 'ಅಫಿಷಿಯಲ್ ಲ್ಯಾಂಗ್ವೇಜ್' ಆಗಿ ಮಾಡಬೇಕೆಂದು ವಿಧಾಯಕವಾಗಿದ್ದರೂ ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಿಲ್ಲ. ಈಗಾಗಲೇ ಸುಮಾರು ಐದು ವರ್ಷಗಳಾಗಿವೆ. ಒಂದು ಕಮಿಷನ್ ನೇಮಕ ಮಾಡಿ ಎಷ್ಟುಮಟ್ಟಿಗೆ ಹಿಂದೀಯ ಅಭಿವೃದ್ಧಿ ಸಾಧನೆಯಾಗಿದೆ, ಸಂಸ್ಥಾನಗಳ ಸರ್ಕಾರಗಳು ಹಿಂದಿಯನ್ನು ಮುಂದೆ ತರುವುದಕ್ಕೆ ಎಷ್ಟುಮಟ್ಟಿಗೆ ಶ್ರಮಪಟ್ಟಿವೆ, ಇದಕ್ಕಾಗಿ ಯಾವ ಯಾವ ಕೆಲಸಗಳನ್ನು ಮಾಡಿವೆ ಎಂದು ವರದಿ ಮಾಡಬೇಕು. ಆ ರೀತಿ ಅಗತ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ತೆಗೆದುಕೊಳ್ಳಬೇಕೆಂದು ಸೂಚನೆ ಕೊಡಬೇಕೆಂದು ಏರ್ಪಾಡು ಮಾಡಿದ್ದಾರೆ. ಇಷ್ಟಾದರೂ ಸಂಸ್ಥಾನದ ಸರ್ಕಾರದವರು ತಕ್ಕಷ್ಟು ಪ್ರೋತ್ಸಾಹ ಕೊಟ್ಟಿಲ್ಲವೆಂದು ಹೇಳಲಿಚ್ಛಿಸುತ್ತೇನೆ.

ಇನ್ನೊಂದು ವಿಚಾರ. ಹಿಂದೀಯಷ್ಟು ಸುಲಭ ಭಾಷೆ ಜಗತ್ತಿನಲ್ಲಿ ಇನ್ಯಾವ ಭಾಷೆಯೂ ಇಲ್ಲ. ಅದರಲ್ಲಿಯೂ ಹಿಂದೂಸ್ಥಾನದಲ್ಲಿರುವ ನಮಗೆ ಹಿಂದೀ ಕಲಿಯುವುದು ಬಹಳ ಸುಲಭ. ಸರ್ವ ಭಾಷೆಗಳ ಮೂಲ ಸಂಸ್ಕೃತ. ಇದರ ಲಿಪಿ ದೇವನಾಗರಿ. ನಾವು ದೇವನಾಗರಿ ಲಿಪಿಯ ಹಿಂದೀಯನ್ನು ಒಪ್ಪಿದ್ದೇವೆ. ಆದಕಾರಣ ಲಿಪಿ ಕಲಿಯುವುದಕ್ಕೆ ಶ್ರಮವೇ ಇಲ್ಲ. ಅಲ್ಲದೆ ದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು, ತಮಿಳು ಮುಂತಾದ ದಕ್ಷಿಣ ದೇಶದ ಭಾಷೆಗಳಲ್ಲಿ ಸಂಸ್ಕೃತ ಮತ್ತು ಹಿಂದೀ ಶಬ್ದಗಳು ಬೇಕಾದಷ್ಟಿವೆ. ಉದಾಹರಣೆಗೆ ಶಾಂತಿ, ಆತ್ಮ ಇಂಥ ಪದಗಳೆಷ್ಟೋ ಇವೆ. ನನ್ನ ಉದಾಹರಣೆ ಹೇಳುವುದಾದರೆ, ನಾನು ದಿನಕ್ಕೆ ಒಂದು ಗಂಟೆ ಕಾಲ ಒಂದು ವರ್ಷ ಮಾತ್ರ ಹಿಂದಿಯನ್ನು ಅಭ್ಯಾಸ ಮಾಡುತ್ತಿದ್ದೇನೆ. ಈಗ ನಾನು ಹಿಂದಿಯಲ್ಲಿ ತಕ್ಕಮಟ್ಟಿಗೆ ಎಲ್ಲರಿಗೂ ಅರ್ಥವಾಗುವ ಹಾಗೆ ಮಾತನಾಡಬಲ್ಲೆ. ಅದೇ ನಾನು ನನ್ನ ಜೀವನದ ಮುಕ್ಕಾಲುಭಾಗವನ್ನು ಇಂಗ್ಲಿಷ್ ವ್ಯಾಸಂಗಕ್ಕೆ ವಿನಿಯೋಗಿಸಿದ್ದರೂ ಈ ಭಾಷೆಯಲ್ಲಿ ಮಾತನಾಡಿಸಿದರೆ, ಅನೇಕ ಸಂದರ್ಭಗಳಲ್ಲಿ ಹಿಂದಿಯಲ್ಲಿ ಮಾತನಾಡಿದರೆ ಆಗುವುದಕ್ಕಿಂತ ಹೆಚ್ಚು ತಪ್ಪುಗಳಾಗುತ್ತವೆ. ಅಲ್ಲದೆ ಹಿಂದೀ ಭಾಷೆ ಇತರ ಎಲ್ಲ ಭಾಷೆಗಳಿಗಿಂತಲೂ ಹೆಚ್ಚು ಗಂಡುಭಾಷೆ, ಸಾರವತ್ತಾದ ಭಾಷೆ, ಇದರಲ್ಲಿ ವೀರ್ಯವಿದೆ, ಒಂದು ಶಕ್ತಿಯಿದೆ. ಇನ್ನೊಂದು ವಿಷಯ ಗಮನಿಸಬೇಕು. ಈಗ ಹಿಂದೂಸ್ಥಾನವನ್ನು ಭಾಷಾವಾರು ವಿಭಾಗ ಮಾಡುವ ಸಮಸ್ಯೆ ಹುಟ್ಟಿದೆ. ಹಿಂದೀಗೆ ಎಲ್ಲರೂ ಪ್ರೋತ್ಸಾಹ ಕೊಟ್ಟರೆ, ಜನರಲ್ಲಿ ಹಿಂದೂಸ್ಥಾನವೆಲ್ಲಾ ಒಂದೇ ಎಂಬ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ. ಪ್ರಾಂತೀಯ ಭಾವನೆ ಅಳಿಯುತ್ತದೆ. ನಾನು ಬೆಳಗಾಮಿನಲ್ಲಿ ಓದಿದ್ದು. ಅಲ್ಲಿ ಮಹಾರಾಷ್ಟ್ರದವರಿಗೂ ಕನ್ನಡಿಗರಿಗೂ ಇರುವ ವೈಷಮ್ಯ, ದ್ವೇಷವನ್ನು ನೋಡಿದರೆ, ಅಮೆರಿಕಾ ದೇಶಕ್ಕೂ ರಷ್ಯಾ ದೇಶಕ್ಕೂ ಇರುವ ದ್ವೇಷದಂತಿದೆ. ಯಾವುದಾದರೂ ಸಭೆಯೆಂದರೆ ಕನ್ನಡಿಗರು ಕನ್ನಡದಲ್ಲಿ ಮಾತನಾಡಬೇಕೆಂದು ಹೇಳುತ್ತಾರೆ, ಮಹಾ ರಾಷ್ಟ್ರದವರು ಮರಾಠಿಯಲ್ಲಿ ಮಾತನಾಡಬೇಕೆಂದು ಹೇಳುತ್ತಾರೆ. ನಾವು ಎಲ್ಲರೂ ಭಾರತಮಾತೆಯ ಪುತ್ರರೆಂದು ಹೇಳುವಾಗ ಎಲ್ಲರೂ ಒಂದು ಭಾಷೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂಬ ಉನ್ನತ ಧ್ಯೇಯಕ್ಕಾಗಿ ಹೋರಾಡಬೇಕು. ಈ ಸಂದರ್ಭದಲ್ಲಿ ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣೆಗಾಗಿ ಒಂದು ಸಮಿತಿ ಮಾಡಿದರು. ಅದರಲ್ಲಿ ಒಂದು ಅತಿ ಮುಖ್ಯವಾದ ವಿಚಾರವನ್ನು ಮರೆತಂತೆ ಕಾಣುತ್ತದೆ. ಮಾನ್ಯ ಸದಸ್ಯರು ಈ ವಿಚಾರಕ್ಕೆ ತೀವ್ರ ಗಮನ ಕೊಡಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆ ಸುಧಾರಣಾ ಸಮಿತಿಯ ಒಂದು ಉಪ ಸಮಿತಿಯವರು ಹಿಂದೀಯನ್ನು ಮೊದಲ ಐದು ಮತ್ತು ಆರನೆಯ ವರ್ಷದಲ್ಲಿ ಇಡಬೇಕೆಂದು ಶಿಫಾರಸು ಮಾಡಿದ್ದರು. ಆದರೆ ಆ ಸಮಿತಿಯಲ್ಲಿ ಇಂಗ್ಲಿಷಿನವರ ರಾಜ್ಯಾಡಳಿತವಿದ್ದ ಕಾಲದಲ್ಲಿ ಇಂಗ್ಲಿಷಿನಲ್ಲಿ ಪರಿಣತರಾಗಿರುವ ಮಹನೀಯರೇ ಜಾಸ್ತಿ ಸಂಖ್ಯೆಯಲ್ಲಿದ್ದುದರಿಂದ ಉಪಸಮಿತಿಯವರು ಐದು ಆರನೆಯ ವರ್ಷದಲ್ಲಿ ಹಿಂದೀ ಇರಬೇಕೆಂದು ಮಾಡಿದ್ದ ಸಲಹೆಗೆ ವಿರುದ್ಧವಾಗಿ ಇಂಗ್ಲಿಷ್ ಇರಬೇಕೆಂದೂ ಹಿಂದಿ ಬೇಕಾಗಿಲ್ಲವೆಂದೂ ತೀರ್ಮಾನ ಮಾಡಿ ವರದಿ ಮಾಡಿದ್ದಾರೆ. ಇದು ಖಂಡಿತವಾಗಿಯೂ ಶೋಚನೀಯವಾದ ವಿಚಾರ. ಪೂಜ್ಯ ಗಾಂಧೀಜಿಯವರು ಹಿಂದೀಗೆ ಭಾರತೀಯರೆಲ್ಲರೂ ಪ್ರಥಮ ಸ್ಥಾನ ಕೊಡಬೇಕೆಂದು ಅಷ್ಟು ದಿವಸಗಳಿಂದ ಹೇಳುತ್ತಿದ್ದಾಗ್ಯೂ ಕೂಡ ಈಹೊತ್ತು ಐದು ಆರನೆಯ ವರ್ಷದಲ್ಲಿ ನಮ್ಮ ಶಿಕ್ಷಣ ಕ್ರಮದಲ್ಲಿ ಹಿಂದೀಯನ್ನು ಬಿಟ್ಟು ಇಂಗ್ಲಿಷನ್ನಿಡಬೇಕೆಂದು ವಾದ ಮಾಡಿ ತೀರ್ಮಾನ ಮಾಡಿರುವುದು ಶೋಚನೀಯವಾದ ವಿಚಾರ. ಉಪಸಮಿತಿಯವರು ಕೂಲಂಕಷವಾಗಿ ಯೋಚಿಸಿ ಮಾಡಿರುವ ಸಲಹೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಪಟ್ಟಿದ್ದಾರೆ. ಆದರೂ ಕೊನೆಯ ತೀರ್ಮಾನ ನಮ್ಮ ಸಭೆಯ ಕೈಯ್ಯಲ್ಲಿದೆ. ಖಂಡಿತವಾಗಿಯೂ ಐದು ಆರನೆಯ ವರ್ಷಗಳಲ್ಲಿ ಹಿಂದೀಯನ್ನಿಡಬೇಕೆಂದು ಒತ್ತಾಯಮಾಡಬೇಕೆಂದು ವಿನಯಪೂರ್ವಕವಾಗಿ ಬೇಡುತ್ತೇನೆ.

ಒಂದು ಪ್ರಶ್ನಾರ್ಥಕ ವಿಚಾರವನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ. ಹದ್ದುಮೀರಿದ್ದೇನೆಂದು ತಿಳಿದುಕೊಂಡರೂ ಚಿಂತೆಯಿಲ್ಲ. ಅದನ್ನು ಹೇಳುತ್ತೇನೆ.

ಇಡೀ ಹಿಂದೂಸ್ಥಾನಕ್ಕೆ ಒಂದೇ ಲಿಪಿ ಇರಬೇಕು. ದೇವನಾಗರಿ ಲಿಪಿಯಿಂದ ಇದನ್ನು ಸಾಧಿಸಲು ಸಾಧ್ಯವಾಗುತ್ತದೆ. ಇದನ್ನು ಕಲಿಯಲು ನಮಗೆ ಕಷ್ಟವೇನೂ ಇಲ್ಲ. ತಮಿಳು, ತೆಲುಗು, ಮಲೆಯಾಳ ಅಥವಾ ಉತ್ತರ ಇಂಡಿಯಾ ದೇಶದ ಭಾಷೆಗಳನ್ನು ಕಲಿಯುವುದಕ್ಕೆ ಪ್ರಯತ್ನ ಮಾಡಿದರೂ ಕೂಡ, ದೇವನಾಗರಿಯಲ್ಲಿ 52 ಅಕ್ಷರಗಳಿವೆ, ಕನ್ನಡದಲ್ಲಿ 52 ಅಕ್ಷರಗಳಿವೆ ; ತಮಿಳು ಮಲೆಯಾಳದಲ್ಲಿ 48 ಅಕ್ಷರಗಳಿವೆ. ಕನ್ನಡದ ಅಕ್ಷರಗಳನ್ನು ಕಲಿಯಲು ಎಷ್ಟು ಶ್ರಮಪಡುತ್ತೇವೋ ಹಿಂದೀ, ದೇವನಾಗರಿ ಕಲಿಯಲೂ ಅಷ್ಟೇ ಕಷ್ಟ. ನಾವೇನೋ ಅಭಿಮಾನದಿಂದ ಕನ್ನಡ, ತಮಿಳು ಎಂದು ಹೇಳಿದರೂ ದೂರದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ನಮ್ಮ ರಾಷ್ಟ್ರ ಭಾಷೆಗೆ ಹೆಚ್ಚು ಗಮನ ಕೊಡಬೇಕು. ಈ ದೃಷ್ಟಿಯಿಂದ ಯೋಚನೆ ಮಾಡಿದರೆ ದೇವನಾಗರಿ ಲಿಪಿಯನ್ನುಮಾತ್ರ ಸರ್ವರೂ ಎಲ್ಲ ಭಾಷೆಗಳಿಗೂ ಇಟ್ಟುಕೊಂಡರೆ ನಮ್ಮ ಹಿಂದೂಸ್ಥಾನದಲ್ಲಿರುವ ನಲವತ್ತು ಕೋಟಿ ಜನರೂ ಒಬ್ಬರ ಅಭಿಪ್ರಾಯವನ್ನು ಇನ್ನೊಬ್ಬರು ಒಬ್ಬರ ಭಾಷೆಯನ್ನು ಇನ್ನೊಬ್ಬರು ಸುಲಭವಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಯೋಚನೆ ಮಾಡಬೇಕೆಂದು ತಮ್ಮ ಮುಂದಿಟ್ಟಿರುತ್ತೇನೆ. ಈ ಎಲ್ಲಾ ಕಾರಣಗಳಿಂದಲೂ ಹಿಂದೀಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಸರ್ಕಾರದವರು ಈಗ ಕೊಡುತ್ತಿರುವ ಪ್ರೋತ್ಸಾಹ ಸಾಲದು, ಇನ್ನೂ ಹೆಚ್ಚು ಕೊಡಬೇಕೆಂದು ಹೇಳಿ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—Resolution moved :

"That this Assembly is of opinion that our State Government should promote the spread of Hindi Language and give all encouragement to it."

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಹಿಂದೀ ಭಾಷೆಗೆ ಪ್ರೋತ್ಸಾಹ ಕೊಡಬೇಕೆಂಬುದರಲ್ಲಿ ಮಾನ್ಯ ಸದಸ್ಯರಿಗೂ ಸರ್ಕಾರಕ್ಕೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮೈಸೂರು ಸರ್ಕಾರದವರು 1929 ನೆಯ ಇಸವಿಯಲ್ಲೇ ಹಿಂದೀ ಭಾಷೆಗೆ ಒಂದು ಸ್ಥಾನವನ್ನು ಕೊಟ್ಟಿದ್ದಾರೆ. ಅನಂತರ 1949ರಲ್ಲಿ ಹೈಸ್ಕೂಲಿನಲ್ಲಿ ಹಿಂದೀ ಭಾಷೆಯು Compulsory subject ಆಗಿರಬೇಕೆಂದು ಸರ್ಕಾರದ ಆಜ್ಞೆಯಾಯಿತು. ಅನಂತರ ಈಚೆಗೆ ಮಾಧ್ಯಮಿಕ ಶಾಲೆಗಳಲ್ಲಿಯೂ ಪ್ರೌಢ ಶಾಲೆಗಳಲ್ಲಿಯೂ ಹಿಂದೀ ಒಂದು ಐಚ್ಛಿಕ ಭಾಷೆಯಾಗಿದೆ. ಇತ್ತೀಚೆಗೆ ಸರ್ಕಾರದವರು ಹಿಂದೀ ಭಾಷೆಗೆ ಒಬ್ಬರು ಅಸಿಸ್ಟೆಂಟ್ ಪ್ರೊಫೆಸರ ಹುದ್ದೆಯನ್ನು ಕೂಡ ಕಲ್ಪಿಸಿದ್ದಾರೆ. ಈ ಹಿಂದೀ ಭಾಷೆಯ ಪ್ರಶ್ನೆ ವಿದ್ಯಾಸುಧಾರಣಾ ಸಮಿತಿಯಲ್ಲಿ ಬಂದು ಅವರು ಕೂಡ ಹಿಂದೀ ಭಾಷೆಯ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಹಿಂದೀಗೆ ಪ್ರಕೃತ ಸಂದರ್ಭದಲ್ಲಿ ಯಾವ ಸ್ಥಾನವಿರಬೇಕೆಂಬುದನ್ನು ಚರ್ಚೆ ಮಾಡತಕ್ಕ ಅವಕಾಶ ಈ ಮಾನ್ಯ ಸಭೆಗೆ ಶೀಘ್ರದಲ್ಲೇ ಬರಲಿದೆ. ಆದುದರಿಂದ ನಾನು ಹೊಸದಾಗಿ ಏನೂ ಹೇಳಬೇಕಾಗಿಲ್ಲ.

ಶ್ರೀಮಾನ್ ಶಿವಪ್ಪನವರು ಮಾತನಾಡುತ್ತಾ ಇಂಗ್ಲೀಷ್ ಭಾಷೆಯ ಸ್ಥಾನಮಾನವನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಒಂದೇ ಲಿಪಿ ಭಾರತಕ್ಕೆಲ್ಲಾ ಇರಬೇಕಾದದು ಅಗತ್ಯವೆಂಬುದನ್ನೂ ಪ್ರಸ್ತಾಪಿಸಿದ್ದಾರೆ. ಒಂದೇ ಲಿಪಿ ಇದ್ದಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಇಂಗ್ಲೀಷ್ ಭಾಷೆಯ ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ ಇದು ಅಂತರ ರಾಷ್ಟ್ರೀಯ ಭಾಷೆ. ಇದನ್ನು ಅಷ್ಟು ಸುಲಭವಾಗಿ ಅಲ್ಲಗಳೆಯುವಹಾಗಿಲ್ಲ. ಇಂಗ್ಲೀಷ್ ಭಾಷೆಗೆ ಈಗಿರತಕ್ಕ ಸ್ಥಾನವನ್ನೇ ಇನ್ನು ಮುಂದೆ ಕೊಡದೇಯಿದ್ದರೂ ಕೂಡ ಇಂಗ್ಲೀಷ್ ಭಾಷೆಗೆ ಸರಿಯಾದ ಸ್ಥಾನವಿರಬೇಕಾದುದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಜಗತ್ತಿನಲ್ಲಿರತಕ್ಕ ಅನೇಕ ಶಾಸ್ತ್ರಗಳೂ ವೈಜ್ಞಾನಿಕ ವಿಷಯಗಳೂ ಇಂಗ್ಲೀಷ್ ಭಾಷೆಯಲ್ಲಿ ಅಡಕವಾಗಿವೆ. ಆದುದರಿಂದ ತಕ್ಷಣ ಇಂಗ್ಲೀಷ್ ಭಾಷೆಯನ್ನು ನಾವು ನಮ್ಮ ದೇಶದಿಂದಲೇ ಓಡಿಸುವುದು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯ.

ಒಟ್ಟಿನಲ್ಲಿ ನಾನು ಮೊದಲೇ ಅರಿಕೆ ಮಾಡಿಕೊಂಡಂತೆ ಈ ವಿಷಯವನ್ನು ಚರ್ಚೆ ಮಾಡುವ ಅವಕಾಶ ಸಭೆಗೆ ಇರುವುದರಿಂದ ಈಗ ಹೆಚ್ಚು ಮಾತನಾಡುವ ಅಗತ್ಯವಿಲ್ಲ. ಈ ವಿವರಣೆಯನ್ನು ಕೊಟ್ಟನಂತರ ಮಾನ್ಯ ಸದಸ್ಯರು ಅವರ ನಿರ್ಣಯವನ್ನು ವಾಪಸು ಪಡೆಯುತ್ತಾರೆಂದು ನಂಬಿದ್ದೇನೆ.

Sri G. SIVAPPA.—I seek the leave of the House to withdraw my Resolution.

The Resolution was, by leave, withdrawn.

No. 3. Schemes to increase the capacity of Major and Minor Tanks.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ) ನನ್ನ ನಿರ್ಣಯ ಹೀಗಿದೆ, ಅದನ್ನು ಮಂಡಿಸುತ್ತೇನೆ.'

"That this Assembly is of the opinion that a sum of one crore of rupees be set apart for increasing the capacity of the Major and Minor tanks which are now existing and that out of the total sum so provided a sum of twenty lakhs of rupees be spent annually.

ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಅನೇಕ ಮೇಜರ್ ಮತ್ತು ಮೈನರ್ ಕೆರೆಗಳು ಬಹಳ ನಾದುರಸ್ತಾಗಿವೆ. ಬಹಳ ಹಿಂದಿನಿಂದಲೂ ಕೆರೆಗಳಲ್ಲಿ ಹೂಳು ತುಂಬಿಕೊಂಡು ಮಳೆಗಾಲದಲ್ಲಿ ನೀರುಬಂದರೂ ಬೆಳೆಯಾಗದೆ ತೊಂದರೆಯಾಗುತ್ತಿರುವುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತೇ ಇದೆ. ಮುಖ್ಯವಾಗಿ ನೆಲಮಂಗಲ, ದೊಡ್ಡಬಳ್ಳಾಪುರ ಮತ್ತು ಮಾಗಡಿ ಈ ತಾಲ್ಲೂಕುಗಳಲ್ಲಿ ನಾನು ಪ್ರವಾಸ ಮಾಡಿದ ಕಾಲದಲ್ಲಿ ನೋಡಿದ್ದೇನೆ. ಈ ಮೂರು ತಾಲ್ಲೂಕುಗಳಲ್ಲಿ ಕೆರೆಗಳು ಬಹಳನಾದುರಸ್ತಾಗಿ ನೀರಿಲ್ಲದೆ, ಮಳೆಯೂ ಕಡಮೆಯಾಗಿರುವುದರಿಂದ ಈ ಆಹಾರಾಭಾವ ಕಾಲದಲ್ಲಿ ಬಹಳ ತೊಂದರೆ

(ಶ್ರೀ ಡಿ. ಎಂ. ಗೋವಿಂದರಾಜುಲು)

ಯಾಗಿದೆ. ಈ ಕೆರೆಗಳ ದುರಸ್ತಿಗೆ ಮೊದಲನೆಯ ಪ್ರಾಶಸ್ತ್ಯ ಸರ್ಕಾರದವರು ಕೊಡಬೇಕಾದುದು ಅಗತ್ಯ. ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುವುದಕ್ಕೆ ಹಣ ಖರ್ಚು ಮಾಡುವುದಕ್ಕಿಂತ ಈ ಕೆರೆಗಳ ಹೂಳು ತೆಗೆಸುವುದಕ್ಕೆ ಮತ್ತು ದುರಸ್ತಿಗೆ ಪ್ರಾಮುಖ್ಯತೆ ಕೊಟ್ಟು ಕೆಲಸ ಮಾಡಿಸಿದರೆ ಅದರಿಂದ ಆಹಾರಾಭಾವ ಕಡಮೆಯಾಗುತ್ತದೆಂಬುದರಲ್ಲಿ ಯಾವ ಅನುಮಾನವೂ ಇರುವುದಿಲ್ಲ.

ಈಗ ಸುಮಾರು ನಾಲ್ಕೈದು ವರ್ಷಗಳಿಂದೀಚೆಗೆ ಸಂಸ್ಥಾನದ ಕೆಲವು ಭಾಗಗಳಲ್ಲಿ ಮಳೆ ಕೂಡ ಬಹಳ ಕಡಮೆ ಬೀಳುತ್ತಿದೆ. ಇದರಿಂದ ಕೆರೆಗಳು ಒಂದೆರಡು ಸಾರಿ ಮಳೆ ಬಿದ್ದಾಗ ತುಂಬಿ ಜಾಗ್ರತೆ ಒಣಗಿಹೋಗುತ್ತವೆ. ಈ ಕೆರೆಗಳನ್ನು 'ಡೀಸಿಲ್ಟ್' ಮಾಡುವುದರಿಂದ ಹೆಚ್ಚು ನೀರು ತುಂಬಿ ರೈತರು ಭತ್ತದ ಬೆಳೆ ಮಾಡಲು ತುಂಬ ಅನುಕೂಲವಾಗುತ್ತದೆ. ಆದುದರಿಂದ ಮುಖ್ಯವಾಗಿ ನಮ್ಮ ಸಂಸ್ಥಾನದ ಮೇಜರ್ ಮತ್ತು ಮೈನರ್ ಕೆರೆಗಳ ಹೂಳು ತೆಗೆಸುವುದಕ್ಕೆ ಗಮನ ಕೊಡುತ್ತಾರೆಂದು ನಂಬಿ ಈ ನಿರ್ಣಯವನ್ನು ಮಂಡಿಸುತ್ತೇನೆ.

Mr. SPEAKER.—Resolution moved :

> "That this Assembly is of the opinion that a sum of one crore of rupees be set apart for increasing the capacity of the major and the minor tanks which are now existing and that out of the total sum so provided a sum of twenty lakhs of rupees be spent annually."

I think there is no need for a debate. In fact there was question No. 201 just today. The amount provided for these schemes is more than what the resolution requires. There can be no two opinions about this resolution. The Hon'ble Minister will reply.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—

ಸ್ವಾಮಿ, ಈ ಕೆರೆಗಳನ್ನು ದುರಸ್ತಿ ಮಾಡಿಸತಕ್ಕ ವಿಚಾರದಲ್ಲಿ ಸರ್ಕಾರದವರು ಮೊದಲಿನಿಂದಲೂ ಕೂಡ ಬಹಳ ತೀವ್ರಾಸಕ್ತಿಯನ್ನು ತೋರಿಸುತ್ತಲೇ ಬಂದಿದ್ದಾರೆ. ಹೆಚ್ಚು ಹೆಚ್ಚು ನೀರಾವರಿ ಕಾಂಗಾರಿಗಳನ್ನು ಕೈಕೊಂಡು ಅನೇಕ ಹೊಸಹೊಸ ಕೆರೆಗಳನ್ನು ಕಟ್ಟಿಸಿದ್ದಾರೆ. ಇದರ ಜೊತೆಗೆ ಕೆರೆಗಳ ದುರಸ್ತಿಗಾಗಿ ಹೆಚ್ಚು ಹೆಚ್ಚು ಹಣವನ್ನು ಪ್ರತಿವರ್ಷವೂ ಸರ್ಕಾರದವರು ಒದಗಿಸುತ್ತಲೇ ಬಂದಿದ್ದಾರೆ. ಆದರೆ ನಾನೀಗ ಹೆಚ್ಚಿಗೆ ವಿವರಗಳನ್ನು ಕೊಡತಕ್ಕ ಗೋಜಿಗೆ ಹೋಗುವುದಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಅವರು ನೋಡಿದರೆ ಆಗ ಸರ್ಕಾರದವರು ಈ ಬಾಬುಗಳಿಗೆಲ್ಲಾ ಎಷ್ಟೆಷ್ಟು ಹಣವನ್ನೊದಗಿಸಿರುತ್ತಾರೆಂಬುದು ಅವರಿಗೆ ವೇದ್ಯವಾಗುತ್ತದೆ. ಈಗ ಈ ನಿರ್ಣಯದ ಮಾನ್ಯಸದಸ್ಯರು ಏನೇನು ವಿಚಾರಗಳನ್ನು ತಿಳಿಸಿದ್ದಾರೋ ಅವಕ್ಕಿಂತಲೂ ಹೆಚ್ಚಾಗಿ ಸರ್ಕಾರದವರು ಮಾಗಡಿ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಕೆರೆಗಳ ಕಾಂಗಾರಿಯನ್ನು ಕೈಕೊಂಡಿದ್ದಾರೆ. ಆದರೆ ಆವರ ನೆಲಮಂಗಲ ತಾಲ್ಲೂಕು ವಿಚಾರವಾಗಿ ವಿವರಗಳನ್ನು ಈ ದಿವಸ ಕೊಡುವುದಕ್ಕೆ ಸಾಧ್ಯವಿಲ್ಲ, ಅನಂತರ ಬೇಕಾದರೆ ಅವುಗಳನ್ನು ಕೊಡಬಹುದು.

Mr. SPEAKER.—Page 10 of todays' Questions and Answers.

ಶ್ರೀ ಕಡಿದಾಳ್ ಮಂಜಪ್ಪ.—ಬಡ್ಜೆಟ್ಟಿನಲ್ಲಿ ಬರುವ ವರ್ಷಕ್ಕೆ ತೆಗೆದುಕೊಳ್ಳಬೇಕಾದ ಕೆಲಸಗಳಿಗಾಗಿ ಕೆಲವು ಹಣವನ್ನು ಮೀಸಲು ಇಡಲಾಗಿದೆ. ಮಾಗಡಿ ತಾಲ್ಲೂಕಿನಲ್ಲಿ ಕಾವೇರಿ ಕಾವರ್ ಕೆರೆಯ ದುರಸ್ತಿಗಾಗಿ 12 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ನಾರಸಂದ್ರದ ಕೆರೆಯ ದುರಸ್ತಿಗಾಗಿ ಮತ್ತು to improve its capacity 10 ಸಾವಿರ ರೂಪಾಯಿಗಳನ್ನು ಬಡ್ಜೆಟಿನಲ್ಲಿ ಒದಗಿಸಿದ್ದೇವೆ. ಮಾಲೂರು ದೊಡ್ಡಕೆರೆಯ ರೆಸ್ಟೋರೇಷನ್ನಿಗಾಗಿ 10 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಇದರ ಜೊತೆಗೆ ಮಾಯಸಂದ ಕೆರೆಯ ದುರಸ್ತಿಗಾಗಿ 3 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಬೆಳಗುಬದ ಹತ್ತಿರ ಒಂದು ದೊಡ್ಡ ಕೆರೆಯನ್ನು ಕಟ್ಟಿಸಲು ಬಡ್ಜೆಟ್ಟಿನಲ್ಲಿ 50 ಸಾವಿರ ರೂಪಾಯಿಗಳನ್ನೊದಗಿಸಲಾಗಿದೆ. ಶ್ರೀ ದೇವರಾಜ ಅರಸಿನವರಿಗೆ ಪ್ರೀತಿಪಾತ್ರವಾಗಿರುವಂಥ ಗುಂಡಂಗೆರೆ ಹತ್ತಿರ ಒಂದು ದೊಡ್ಡ ಕೆರೆಯನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇನ್ನೂ ಅನೇಕ ಸಣ್ಣಪುಟ್ಟ ಕೆಲಸ ಕಾರ್ಯಗಳಿಗೋಸ್ಕರವಾಗಿ ಬಡ್ಜೆಟ್ಟಿನಲ್ಲಿ ಲಂಪ್‌ಸಂ ಆಗಿ ಹಣವನ್ನು ಕೊಡಲಾಗಿದೆ. ಹೀಗೆ ಈ ಕೆರೆಗಳ ಮತ್ತು ನೀರಾವರಿ ಕಾಂಗಾರಿಗಳ ಬಗ್ಗೆ ಎಲ್ಲ ಮಾನ್ಯಸದಸ್ಯರುಗಳಿಗೂ ಎಷ್ಟು ಆಸಕ್ತಿಯಿದೆಯೋ ಅದಕ್ಕಿಂತಲೂ ಇನ್ನೂ ಹೆಚ್ಚಿನ ಆಸಕ್ತಿ ಸರ್ಕಾರಕ್ಕೆ ಇದೆ. ನಾನು ಇಷ್ಟೆಲ್ಲಾ ಅಂಕಿ ಅಂಶಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದಿರುವುದರಿಂದಲೂ ಮತ್ತು ಸರ್ಕಾರದವರಿಗೂ ಸಹ ಈ ಬಾಬಿನ ಮೇಲೆ ಹೆಚ್ಚಿನ ಆಸಕ್ತಿ ಇರುತ್ತದೆಯೆಂಬ ಒಂದು ಭರವಸೆ ಕೊಟ್ಟಿರುವುದರಿಂದಲೂ ಅವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಭರವಸೆಯ ಮೇರೆಗೆ ನಾನು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The Resolution was, by leave, withdrawn.

No. 4.—Enhancement of the pay of Police Daffedars and Constables by Rs. ten per month.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ನನ್ನ ನಿರ್ಣಯವು ಈ ರೀತಿಯಾಗಿದೆ: ಅದನ್ನು ಮಂಡಿಸುತ್ತೇನೆ.

> "ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಕಾನ್ಸ್ಟೇಬಲ್‌ಗಳಿಗೂ ಮತ್ತು ದಫೇದಾರರುಗಳಿಗೂ ಈಗ ಕೊಡುತ್ತಿರುವ ನಂಬಳಕ್ಕಿಂತ

ಹತ್ತು ರೂಪಾಯಿ ಸಂಬಳ ಜಾಸ್ತಿ ಕೊಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ "

ಸ್ವಾಮಿ ಈಗ ಹೇಳಬೇಕಾಗಿದ್ದರೆ ನಮ್ಮ ಇಡೀ ಹಿಂದೂಸ್ಥಾನದಲ್ಲೇ ನಮ್ಮ ಮೈಸೂರು ಪೋಲೀಸ್ ಮಾಡತಕ್ಕ ಸೇವೆಯ ಬಗ್ಗೆ ಎಲ್ಲರೂ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಇಡೀ ಹಿಂದೂಸ್ಥಾನವೇ ಏಕೆ, ಇಡೀ ಪ್ರಪಂಚದಲ್ಲೇ ಅನೇಕರು ನಮ್ಮ ಮೈಸೂರು ಪೋಲೀಸ್ ಸೇವೆಯನ್ನು ಹೊಗಳಿದ್ದಾರೆ. ಅಂಥ ಪೋಲೀಸಿನವರಿಗೆ ತಾವು ಈಗ ಎಷ್ಟು ಸಂಬಳ ಕೊಡುತ್ತೀರಿ ? ತಾವು ಅವರಿಗೆ ಕೊಡತಕ್ಕ ಸಂಬಳ ಅಲೋಯನ್ಸು ಎಲ್ಲವೂ ಸೇರಿ 30-35 ರೂಪಾಯಿಗಳಾಗುತ್ತವೆ. ಪೋಲೀಸ್ ದಫೇದಾರರುಗಳಿಗೆ 55-60 ರೂಪಾಯಿಗಳಾಗುತ್ತವೆ. ಆದರೆ ಬೊಂಬಾಯಿ, ಮದ್ರಾಸ್, ಕಲ್ಕತ್ತಾ, ಹೈದರಾಬಾದ್ ಮತ್ತು ಡೆಲ್ಲಿ ಈ ಪ್ರಾಂತ್ಯಗಳಲ್ಲಿ ಪೋಲೀಸಿನವರಿಗೆ ಕೊಡುತ್ತಿರುವ ಸಂಬಳಕ್ಕೂ ಇಲ್ಲಿ ತಾವು ನಮ್ಮ ಮೈಸೂರು ಪೋಲೀಸಿನವರಿಗೆ ಕೊಡತಕ್ಕ ಸಂಬಳಗಳಿಗೂ ಹೋಲಿಕೆ ಹಾಕಿ ನೋಡಿದರೆ ನಮ್ಮ ಪೋಲೀಸಿನವರಿಗೆ ತಾವು ಕೊಡುತ್ತಿರುವ ಸಂಬಳ ಬಹಳ ಕಮ್ಮಿ. ಇವರು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದು ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತೇ ಇದೆ. ಸ್ವಾತಂತ್ರ್ಯವನ್ನು ನಮ್ಮ ದೇಶಕ್ಕೆ ಪಡೆಯತಕ್ಕ ಕಾಲದಲ್ಲಿ ಇವರೆಲ್ಲಾ ಬಹಳ ಕಷ್ಟಪಟ್ಟಿದ್ದಾರೆ. ಆ ವಿಚಾರ ನನಗೆ ಗೊತ್ತಿದೆ. ಇನ್ನು ಅನೇಕರಿಗೂ ಗೊತ್ತಿದೆ. ನಮಗೆ ಸ್ವಾತಂತ್ರ್ಯ ಕೊಡಬೇಕೆಂದು ನಾವು ಬ್ರಿಟಿಷರೊಡನೆ ಹೋರಾಟ ನಡೆಸುತ್ತಿದ್ದಾಗ ಈ ಪೋಲೀಸಿನವರು ಬಹಳ ಅಂಡರ್ ಗ್ರೌಂಡ್ ಆಕ್ಟಿವಿಟೀಸ್‌ಗಳನ್ನು ಮಾಡಿ ನಮ್ಮ ಸ್ವಾತಂತ್ರ್ಯದ ಬಗ್ಗೆ ಬಹಳವಾಗಿ ದುಡಿದಿದ್ದಾರೆ.

ತತ್ರಾಪಿ ಪೋಲೀಸಿನವರಿಗೆ ಕಷ್ಟ ಜಾಸ್ತಿ, ಎಲ್ಲರೂ ಸಾಲಗಾರರಾಗಿದ್ದಾರೆ. ಇವರಿಗೆ ಮಕ್ಕಳು ಜಾಸ್ತಿ. ಈ ನಾನ್ ಗೆಜೆಟೆಡ್ ನೌಕರರುಗಳಿಗೂ ಮತ್ತು ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೂ ಮಕ್ಕಳು ಜಾಸ್ತಿ. ಒಬ್ಬೊಬ್ಬರಿಗೂ ಒಂದೊಂದು ಡಜನ್ ಮೇಲೆ ಮಕ್ಕಳಿರುತ್ತಾರೆ. ಇಷ್ಟಕ್ಕೆ ಕಡಮೆ ಇಲ್ಲವೆಂದ ನನಗೆ ಅನುಭವದಿಂದ ಕಂಡುಬಂದಿದೆಯೆಂದು ಹೇಳುತ್ತೇನೆ. ಪ್ರತಿಯೊಬ್ಬ ಪಿ. ಸಿ ಗೂ 8-10 ಜನ ಮಕ್ಕಳಿರುವುದರಿಂದ ಅವರೆಲ್ಲರಿಗೂ ವಿದ್ಯಾಭ್ಯಾಸ ಮಾಡಿಸಲು ಬಹಳ ತೊಂದರೆಯಿರುತ್ತದೆ. ಅವರ ಮಕ್ಕಳುಗಳಿಗೆ ತಾವು ಧಾರಾಳವಾಗಿ ಫ್ರೀಷಿಪ್ಪುಗಳನ್ನೂ ಮತ್ತು ಸ್ಕಾಲರ್ ಷಿಪ್ಪುಗಳನ್ನೂ ಕೊಡುತ್ತಿಲ್ಲ. ಅವರಿಗೆ ವಾಸಕ್ಕೆ ಮನೆಗಳನ್ನು ಕೊಟ್ಟಿಲ್ಲ. ಅವರಿಗೆ ಉಚಿತ ವೈದ್ಯ ಸಹಾಯಗಳನ್ನು ಕೊಡುತ್ತಿಲ್ಲ ಹೀಗೆ ಅವರಿಗೆ ಯಾವ ಒಂದು ಅನುಕೂಲವನ್ನೂ ತಾವು ಕೊಟ್ಟಿರುವುದಿಲ್ಲ. ದೇಶದಲ್ಲಿ ಎಲ್ಲಿ ಒಂದು ದರೋಡೆ, ಖೂನಿ ಕಳವು ಇತ್ಯಾದಿಗಳು ನಡೆದರೂ ಅಲ್ಲಿಗೆ ಮೊದಲು ಬರುವಂತೆ ಪೋಲೀಸಿನವರಿಗೆ ನಾವೆಲ್ಲರೂ ಫೋನ್ ಮಾಡುತ್ತೇವೆ ಹೀಗೆ ಅವರು ನಮಗೆ ಒಂದು ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಬಂದೇ ಬರಬೇಕಾಗಿದೆ. ಇತ್ತೀಚೆಗೆ ತಾವು ಪೋಲೀಸಿನವರನ್ನು ರಿಟ್ರೆಂಚ್ ಬೇರೆ ಮಾಡುತ್ತಿದ್ದೀರಿ. ಇನ್ನು ಕೆಲವರು ಕೆಲಸದಿಂದ ನಿವೃತ್ತಿ ಆಗುತ್ತಿದ್ದಾರೆ. ತಾವು ಹೊಸದಾಗಿ ಪೋಲೀಸಿನವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ ಕನಿಷ್ಠ ಪಕ್ಷ ತಾವು ಅವರಿಗೆ 100 ರೂಪಾಯಿಗಳ ಸಂಬಳವನ್ನಾದರೂ ಕೊಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಹಾಗೆ ಅವರಿಗೆ ನೂರು ರೂಪಾಯಿ ಸಂಬಳ ಕೊಡುವುದು ಪೂರಾ ಜಾಸ್ತಿಯಾಗುತ್ತದೆಂದು ಹೇಳುವುದಾದರೆ ತಾವು ಈಗ ಅವರಿಗೆ ಕೊಡುತ್ತಿರುವ ಸಂಬಳದ ಜೊತೆಗೆ ಕನಿಷ್ಠ ಪಕ್ಷ 10 ರೂಪಾಯಿಗಳನ್ನಾದರೂ ಹೆಚ್ಚಿಗೆ ಸೇರಿಸಿ ಕೊಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿವರ್ಯರಲ್ಲಿಯೂ ಮತ್ತು ಈ ಸಭೆಯ ಎಲ್ಲ ಮಾನ್ಯ ಸದಸ್ಯರಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ತಾವು ಈಗ ಮಿಲಿಟರಿಗೆ ಸೇರಿ ಯುದ್ಧಕ್ಕೆ ಹೋಗಿ ಬಂದ ಶಿಪಾಯಿಗಳಿಗೆಲ್ಲಾ ಜಮೀನು ಇತ್ಯಾದಿಗಳನ್ನು ಕೊಟ್ಟು ಅನುಕೂಲಪಡಿಸುತ್ತಿದ್ದೀರಿ. ಯುದ್ಧಕ್ಕೆ ಹೋದ ಮಿಲಿಟರಿಯವರೆಲ್ಲಾ ಸಾಯುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ದೇಶದಿಂದ ಹಾಗೆ ಯುದ್ಧಭೂಮಿಗೆ ಹೋದ ಅನೇಕ ಮಿಲಿಟರಿ ಶಿಪಾಯಿಗಳು ಈಗ ವಾಪಸ್ಸು ಬಂದಿದ್ದಾರೆ. ಆದರೆ ದೇಶದೊಳಗೂ ಕೂಡ ಎಷ್ಟೋ ಷ್ಟೋ ವೇಳೆಗಳಲ್ಲಿ ಗುಂಡಿನ ಪ್ರಕರಣಗಳು ನಡೆಯುತ್ತಿರುತ್ತವೆ. ಆಗ ಪೋಲೀಸಿನವರೂ ಸಹ ಇಂಥ ಅನಾಹುತಗಳಿಗೆ ಸಿಕ್ಕಿ ಎಷ್ಟೋ ಜನರು ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ ಈ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೂ ಕೂಡ ಅವರು ಸರ್ವಿಸ್ಸಿನಿಂದ ರಿಟೈರ್ ಆದಮೇಲೆ ಅವರಿಗೆ ತಾವು ಕನಿಷ್ಠ ಪಕ್ಷ 5 ಎಕರೆ ಜಮಾನನ್ನಾದರೂ ಒಂದೊಂದು ಸಂಸಾರಕ್ಕೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಇಷ್ಟು ಉಪಕಾರವನ್ನಾದರೂ ಮಾಡಿದರೆ ಅವರು ಒಂದು ಗುಡಿಸಿಲನ್ನಾದರೂ ಕಟ್ಟಿಕೊಂಡು ಹೊಟ್ಟೆಗಿಷ್ಟು ಗಂಜಿ ಕುಡಿಯುವುದಕ್ಕಾದರೂ ಒಂದು ಮಾರ್ಗವಾಗುತ್ತದೆ. ಆದರೆ ತಾವು ಈ ದಿವಸ ಅವರಿಗೆ ಕೊಡುತ್ತಿರುವ ಸಂಬಳ ಏತಕ್ಕೂ ಸಾಲದೆ ಅವರೆಲ್ಲ ಬಹಳ ತೊಂದರೆ ಪಡುತ್ತಿದ್ದಾರೆ. ತಾವು ಅವರಲ್ಲಿ ಅನೇಕರಿಗೆ ವಾಸದ ಮನೆಗಳನ್ನೇ ಕೊಡದಿರುವುದರಿಂದ ಅವರು ಮನೆ ಬಾಡಿಗೆಕೊಟ್ಟು ರೇಷನ್ನು ತೆಗೆದುಕೊಳ್ಳಲು ದುಡ್ಡಿಲ್ಲದೆ ಕೊರಗುತ್ತಿದ್ದಂಥ ಸನ್ನಿವೇಶಗಳನ್ನು ನೋಡಿ ನನಗೆ ಮನಸ್ಸು ಕರಗಿ ಹೋದುದರಿಂದ ನಾನು ಈ ದಿವಸ ತಮ್ಮಲ್ಲಿ ಇಷ್ಟೆಲ್ಲವನ್ನೂ ಹೇಳಿಕೊಳ್ಳುತ್ತಿದ್ದೇನೆ. ಎಲ್ಲಿಯಾದರೂ ಒಂದು ಜಗಳ ಗಲಾಟೆ ಇತ್ಯಾದಿಗಳು ನಡೆದರೆ ಆಗ ಲಾಠಿ ಛಾರ್ಜು ಮಾಡುವಾಗ ಕಲ್ಲೇಟುಗಳು ಬಿದ್ದು ಎಷ್ಟೋ ಜನ ಪೋಲೀಸಿನವರಿಗೆ ತುಂಬ ತೊಂದರೆಗಳಾಗಿರುತ್ತವೆ. ಆಫೀಸಿನಲ್ಲಿ ಕುಳಿತು ಕೆಲಸ ಮಾಡತಕ್ಕ ಪೋಲೀಸ ಅಧಿಕಾರಿಗಳಿಗೆ ತಿಂಗಳಿಗೆ 800-900 ರೂ. ಸಂಬಳ ಕೊಡುತ್ತಿದ್ದೀರಿ. ತಾವು ಈ ವಿಚಾರಗಳನ್ನೆಲ್ಲಾ ಸ್ವಲ್ಪ ಆಲೋಚನೆ ಮಾಡಿ ನೋಡಬೇಕು. ಇದೆಲ್ಲಾ ಬಹಳ ಕನಿಕರ ಪಡಬೇಕಾಗಿರುವಂಥ ಪ್ರಸಂಗ. ತಾವು ಇಂಥ ಪ್ರಸಂಗಗಳನ್ನು ಸ್ವಲ್ಪ ಸಾವಧಾನದಿಂದ ಆಲೋಚನೆ ಮಾಡಿ ನೋಡಬೇಕಾಗಿದೆ. ಕೇಂದ್ರ ಸರ್ಕಾರದಲ್ಲಿ ಒಬ್ಬ ಝಾಡಮಾಲಿಗೂ ಕೂಡ ತಿಂಗಳಿಗೆ 9 ರೂಪಾಯಿ ಸಂಬಳ ಕೊಡುತ್ತಿರುವಾಗ ತಾವು ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ಗೆ ತಿಂಗಳಿಗೆ ಅಷ್ಟು ಸಂಬಳವನ್ನಾದರೂ ಕೊಡದಿದ್ದರೆ ಯಾವ ನ್ಯಾಯ ! ತಾವು ಮೈಸೂರು ಪೋಲೀಸಿನಲ್ಲಿ ಕೆಲಸ ಮಾಡತಕ್ಕ ಪಿ. ಸಿ. ಗಳಿಗೆ ತಿಂಗಳು ಒಂದಕ್ಕೆ 25-30 ರೂಪಾಯಿ ಸಂಬಳ ಕೊಡುತ್ತಿದ್ದೀರಿ. ಇದೇನು ಧರ್ಮ ! ಇದು ಯಾವ ನ್ಯಾಯ !

ಬೊಂಬಾಯಿ ಪ್ರಾವಿನ್ಸಿನಲ್ಲಿ ಸ್ತ್ರೀ ಪೋಲೀಸ್ ಪಡೆಯನ್ನು ನೇಮಕ ಮಾಡಿಕೊಂಡಿದ್ದಾರೆ. ತಾವು ಇಲ್ಲಿ ಅಂಥ ಪದ್ಧತಿಯನ್ನು ಜಾರಿಗೆ ತಂದಿಲ್ಲ ಹಾಗೆ ಸ್ತ್ರೀ ಪೋಲೀಸರನ್ನು ನೇಮಕ ಮಾಡದಿರುವುದು ಸರಿ

(ಶ್ರೀ ವಿ. ಆರ್. ನಾಯುಡು.)

ಯಲ್ಲ. ಸ್ತ್ರೀಯರನ್ನು ಅರೆಸ್ಟ್ ಮಾಡಬೇಕಾದರೆ ಅಥವಾ ಅವರನ್ನು ರಿಮಾಂಡಿನಲ್ಲಿಟ್ಟಾಗ ಅವರ ಉಸ್ತುವಾರಿ ನೋಡಿಕೊಳ್ಳಬೇಕಾದರೆ ಗಂಡು ಪೋಲೀಸರಿದ್ದರೆ ತೊಂದರೆಯಾಗುತ್ತದೆ. ಇಂಥ ವಿಚಾರಗಳಿಗೆಲ್ಲಾ ಸ್ತ್ರೀ ಪೋಲೀಸರಿದ್ದರೆ ಬಹಳ ಅನುಕೂಲವಾಗುತ್ತದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ವಿದ್ಯಾವಂತರಾದಂಥ ಹೆಣ್ಣು ಮಕ್ಕಳು ಅನೇಕರಿರುತ್ತಾರೆ. ಆದುದರಿಂದ ಅವರನ್ನು ಸ್ತ್ರೀ ಪೋಲೀಸ್ ಪಡೆಗೆ ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲೇ ಇರುವ ನಮ್ಮ ಅಕ್ಕತಂಗಿಯರೂ ಕೂಡ ಇದಕ್ಕೆ ಬೆಂಬಲ ಕೊಡುತ್ತಾರೆಂದು ನಂಬಿದ್ದೇನೆ. ಆದರೆ ನನಗೆ ಸಾಕಷ್ಟು ಕಾಲಾವಕಾಶವಿದ್ದಿದ್ದರೆ ಈ ಇಡೀ ದಿವಸವೆಲ್ಲಾ ಕೊಟ್ಟಿದ್ದರೂ ಇದೇ ವಿಚಾರವಾಗಿ ಇನ್ನೂ ಅನೇಕ ವಿಷಯಗಳನ್ನು ತಿಳಿಸುತ್ತಿದ್ದೆನು.

ಈ ದಫೇದಾರರಿಗೆ ತಾವು ಕೊಡುತ್ತಿರುವ ಸಂಬಳ ಸಹ ತೀರಾ ಕಡಮೆಯಾಗಿದೆ. ನಮ್ಮ ಮೈಸೂರು ಪೋಲೀಸನ್ನು ಇಡೀ ಹಿಂದೂಸ್ಥಾನದಲ್ಲೇ Star No. one ಎಂದು ಹೇಳಿದರೂ ಹೇಳಬಹುದು. ಸಿ. ಐ. ಡಿ. ಇಲಾಖೆಯಲ್ಲೂ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ಸ್ವಾತಂತ್ರ್ಯಕ್ಕಾಗಿ ಬಹಳ ದುಡಿದಿದ್ದಾರೆ. ಆಗ ಅವರು ನಮ್ಮನ್ನೇನೋ ನೆಪಮಾತ್ರಕ್ಕೆ ಅರೆಸ್ಟ್ ಮಾಡುತ್ತಿದ್ದರು. ಆದರೆ ನಮಗೆ ಯಾವ ಯಾವ ರೀತಿಯಲ್ಲಿ ಏನೇನು ಸಹಾಯ ಮಾಡಿದ್ದಾರೆಂಬ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ಆದುದರಿಂದ ನಾವು ಈ ದಿವಸ ಅವರಿಗೆ ಇಷ್ಟು ಉಪಕಾರಮಾಡಿದರೂ ಸಾಲದೆಂದು ಹೇಳುತ್ತೇನೆ. ಬೊಂಬಾಯಿಯಲ್ಲಿ ಈ ಪೋಲೀಸಿನವರಿಗೆ ಉಚಿತವಾಗಿ ವಿದ್ಯಾ ಸೌಕರ್ಯ, ವೈದ್ಯ ಸೌಕರ್ಯ, ಫ್ರೀಕ್ವಾರ್ಟರ್ಸ್ ಒದಗಿಸಿದ್ದಾರೆ. ತಾವೂ ಸಹ ಇಲ್ಲಿ ಪೋಲೀಸಿನವರಿಗೆ ಅದೇ ಸೌಕರ್ಯ ಮತ್ತು ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳುತ್ತೇನೆ. ಆದರೆ ತಾವು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಿಳಿಸುವುದಕ್ಕೆ ಮುನ್ನ ತಾವು ನನಗೆ ಸಂಪೂರ್ಣವಾದ ಅನುಕೂಲ ಮಾಡಿಕೊಡುತ್ತೀರೆಂಬ ನಂಬಿಕೆ ಮತ್ತು ಭರವಸೆ ಸಹ ನನಗಿದೆ. ತಾವು ಅವರಿಗೆ ಮತ್ತೆ ಯಾವ ಹೆಚ್ಚಿನ ಅನುಕೂಲಗಳನ್ನು ಕೊಡದೆ ಇದ್ದರೂ ಚಿಂತೆಯಿಲ್ಲ, ಕಡೆಗೆ ಒಬ್ಬೊಬ್ಬರಿಗೆ 5 ಎಕರೆ ಜಮೀನನ್ನು ಕೊಡುವುದಲ್ಲದೆ ಈಗ ಬರುತ್ತಿರುವ ಸಂಬಳಕ್ಕಿಂತ ಮಾಹೇಯಾನ 10 ರೂಪಾಯಿಗಳು ಜಾಸ್ತಿಯಾಗಿ ಪೋಲೀಸ್ ಕಾನ್ಸ್ಟೇಬಲ್ಸ್ ಮತ್ತು ದಫೇದಾರರಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿಯೂ ಮತ್ತು ಮಾನ್ಯ ಸದಸ್ಯರೆಲ್ಲರಲ್ಲಿಯೂ ಮತ್ತು ಸರ್ಕಾರದವರಲ್ಲಿಯೂ ಪ್ರಾರ್ಥನೆ ಮಾಡಿಕೊಂಡು ನನ್ನ ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that Police Constables and Daffedars in the State should be paid ten rupees more than the pay they are getting now."

2 P.M.

Sri KADIDAL MANJAPPA (Minister for Revenue and Public Works).—In our State there are 11,765 Police Constables and Daffedars put together. If the Resolution is to be implemented, the extra commitment will be to the extent of Rs. 14½ lakhs. No doubt, the Government have realised the pitiable position in which these low-paid officials are placed, but we are helpless in the matter. You wanted to know what pay they were getting in the year 1947. (A Voice: In other States?) I cannot readily give you the pay that they are getting in other States. In 1947 their grade pay was revised. Of course, I do not say that it is sufficient. The question entirely depends upon the financial condition of the State. My friend, Sri Naidu, referred to the pay the officials of the Central Government are given and the minimum salary given. I have already submitted on a previous occasion, that there should not be any difference between the grade pay of the State's Officers or the officials and the officers or officials of the Central Government. But the question has to be tackled by the Central Government. Personally I am of the view that there should not be too much disparity between the low-paid officials and the high-paid officers. Personally I am of the view that the maximum salary that an officer is paid anywhere in India should not exceed Rs. 1,000. (Hear, hear!) (A Voice: But why are you paying more than that?) That is my personal opinion, I said. Again, this question has to be tackled by the Centre and the minimum salary has to be fixed also. We must pay them a living salary; I also agree with you. This is a very complicated and difficult question, the solution of which is not easy. It may take some years before the entire question is solved to the satisfaction of the officials. At present, the Mysore Government is in a helpless condition, however much they may sympathise with the lot of the low-paid Police Constables and Daffedars. The subject is engaging the serious attention of the Government. If circumstances prove to be favourable

next year, we will consider the question sympathetically.

With the explanation and the assurance given on behalf of the Government, I am sure the Hon'ble Member will withdraw his resolution.

Sri V. R. NAIDU.—I seek the permission of the House to withdraw my resolution.

The Resolution was, by leave, withdrawn.

No. 6.—Steps to start an Agricultural Finance Corporation.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ನನ್ನ ನಿರ್ಣಯ ಈರೀತಿಯಿದೆ :

"This Assembly is of opinion that immediate steps be taken to start an Agricultural Finance Corporation with a view to make credit facilities available to the agricultural class."

ಅದನ್ನು ಮಂಡಿಸುತ್ತೇನೆ.

ಸ್ವಾಮಿ, ನಮ್ಮ ದೇಶದ ವ್ಯವಸಾಯಗಾರರ ಪರಿಸ್ಥಿತಿ ಈಗ ಯಾವರೀತಿ ಇದೆ ಯೆಂಬುದನ್ನು ಸ್ವಲ್ಪ ಮಟ್ಟಿಗೆ ನಾವು ಯೋಚನೆಮಾಡಿದರೆ ಈಗ ನಾನು ತಂದಿರತಕ್ಕ ನಿರ್ಣಯದ ಅವಶ್ಯಕತೆ ಎಷ್ಟಿದೆಯೆಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಾಗುತ್ತದೆ. ಗ್ರಾಮಾಂತರಗಳಲ್ಲಿ ಶೇಕಡ 80 ಜನರಿಗೆ ಮೇಲ್ಪಟ್ಟು ಜನ ರೈತಾಪಿ ಜನರಾಗಿರತಕ್ಕ ಈ ದೇಶದಲ್ಲಿ ರೈತರ ಆರ್ಥಿಕಸ್ಥಿತಿ ಎಷ್ಟು ಅಧೋಗತಿಗೆ ಇಳಿದಿದೆಯೆಂಬುದನ್ನು ಯೋಚನೆಮಾಡಿದರೆ ನಿಜವಾಗಿಯೂ ಬಹಳ ವ್ಯಸನವಾಗುತ್ತದೆ. ಅವರಿಗೆ ಅರೆಹೊಟ್ಟೆಗೂ ಕೂಡ ಆಗದೆ, ಬಟ್ಟೆಯೇ ಇಲ್ಲವೆ ಇರುವ ಅವರ ಕಷ್ಟಸ್ಥಿತಿಯಲ್ಲಿ ಅವನು ತನ್ನ ಉದ್ಯೋಗವನ್ನೂ ವ್ಯವಸಾಯವನ್ನೂ ಮುಂದುವರಿಸಲಿಕ್ಕೆ ಸಾಧ್ಯವಿದೆಯೇ ಎಂಬುದನ್ನು ಯೋಚನೆಮಾಡುವುದಾದರೆ ನಮಗೆ ಆಶ್ಚರ್ಯವೂ ವ್ಯಸನವೂ ಏಕಕಾಲದಲ್ಲಿ ಉಂಟಾಗುತ್ತದೆ. ನಿಜವಾಗಿಯೂ ದೇಶದ ಬೆನ್ನುಮೂಳೆಯೆಂದು ಹೇಳತಕ್ಕ ರೈತನ ಸ್ಥಿತಿ ಕೇವಲ ಅಧೋಗತಿಗೆ ಇಳಿದಿದೆ. ಒಳ್ಳೆಯ ಸಕಾಲದಲ್ಲಿ ಅವನ ಎತ್ತೇನಾದರೂ ಕುಂಟಿತೆಂದರೆ ಅಥವಾ ಅವನ ಮಕ್ಕಳು ಮರಿಗಳಿಗೆ ಲಗ್ನ ಮಾಡಬೇಕಾಗಿ ಬಂತೆಂದರೆ, ಅವನಿಗೆ ಆರ್ಥಿಕ ಬೆಂಬಲ ಸಿಕ್ಕುವುದು ಕಷ್ಟ. ದಿಕ್ಕುಕಾಣದೆ ಯಾವುದೋ ಸಾಹುಕಾರನ ಮನೆಯ ಬಾಗಿಲಿಗೆ ಹೋಗುವ ಪರಿಸ್ಥಿತಿ ಬರುತ್ತದೆ. ಅವನ ವ್ಯವಸಾಯ ಕಾರ್ಯಗಳಿಗೆ ಬೇಕಾಗುವ ಗೊಬ್ಬರ, ಬೀಜ ಮುಂತಾದುವುಗಳನ್ನು ಹೊಂದಿಸಿಕೊಳ್ಳುವುದರಲ್ಲೂ ಅವನಿಗೆ ಹಣ ಕಾಸಿನ ಅವಶ್ಯಕತೆ ಇದೆ. ಇಂಥ ಪ್ರತಿಯೊಂದು ಕೆಲಸಗಳಿಗೂ ಅವನು ಹಣವನ್ನು ಟ್ರೆಜರಿಯಲ್ಲಿಟ್ಟುಕೊಂಡು ಬೇಕಾದಾಗ ಉಪಯೋಗಿಸಿಕೊಳ್ಳೋಣವೆಂದರೆ, ಅವನಿಗೆಂದೂ ಜೀವನಕ್ಕೆ ಸಾಕಾಗುವಷ್ಟು ಕೂಡ ಬರುತ್ತಿರುವುದಿಲ್ಲ. ಹೊಟ್ಟೆಗೇ ಸಾಕಾದಷ್ಟಿಲ್ಲದಿರುವಾಗ ಇನ್ನು ಈ ವ್ಯವಸಾಯದ ಕೆಲಸಕಾರ್ಯಗಳಿಗೆ ಆಗಿಂದಾಗ್ಗೆ ಹೊಂದಿಸಿಕೊಳ್ಳುವುದೆಂತು ! ಇದನ್ನು ಮನಗಂಡು ಸಾರ್ವಜನಿಕ ಸಂಸ್ಥೆಗಳು ಕೆಲವು ಮುಂದೆಬಂದು ರೈತನ ಆರ್ಥಿಕೋನ್ನತಿಯನ್ನು ಸಾಧಿಸಬೇಕೆಂದು ಸಹಕಾರ ಸಂಘಗಳೆಂಬ ಹೆಸರಿನಲ್ಲಿ ಕ್ರೆಡಿಟ್ ಸೊಸೈಟಿಗಳಾಗಿ ಕೆಲಸಮಾಡುತ್ತಿವೆ ಇವುಗಳ ಸಂಖ್ಯೆ 2,600 ರಷ್ಟಿದ್ದರೂ 16,000ಕ್ಕೆ ಮೇಲ್ಪಟ್ಟು ಹಳ್ಳಿಗಳನ್ನೊಳಗೊಂಡಿರುವ ನಮ್ಮ ಸಂಸ್ಥಾನದಲ್ಲಿ ಇವು ರೈತರ ನಿತ್ಯಗಟ್ಟಲೆ ಬೇಡಿಕೆಗಳನ್ನು ಪೂರೈಸಲಿಕ್ಕೆ ಎಷ್ಟುಮಾತ್ರವೂ ಶಕ್ತವಾಗಲಾರವೆಂದು ಹೇಳಿದರೆ ತಪ್ಪಲ್ಲ. ಅಲ್ಲದೆ ದಾರುಣಸ್ಥಿತಿಯಲ್ಲಿರತಕ್ಕ ಆ ಬಡ ರೈತನಿಗೆ ಈ ಸೊಸೈಟಿಗಳಿಂದ ಸಾಕಷ್ಟು ಮಟ್ಟಿಗೆ ನಿಜವಾಗಿಯೂ ಹಣ ಸಹಾಯ ಸಿಕ್ಕುತ್ತಿಲ್ಲ. ಯಾರು ಬಲಾಢ್ಯರೋ, ಸಮಾಜದಲ್ಲಿ ಮುಂದಾಳಾಗಿ ಓಡಾಡುತ್ತಿರುತ್ತಾರೋ ಅವರಿಗೆ ಸಿಕ್ಕುತ್ತಿದೆಯೇ ಹೊರತು ಆರ್ಥಿಕ ದುಸ್ಥಿತಿಯಲ್ಲಿರತಕ್ಕ ಬಡರೈತನಿಗೆ ವಾಸ್ತವವಾಗಿ ಸಹಾಯ ದೊರೆಯುತ್ತಿಲ್ಲ. ಇಷ್ಟೇ ಅಲ್ಲದೆ ಅವನು ತಾನು ಬೆಳೆದ ಫಸಲನ್ನು ಇಟ್ಟುಕೊಂಡು ಸಕಾಲದಲ್ಲಿ ಮಾರಾಟಮಾಡಿ ಒಳ್ಳೆಯ ಬೆಲೆ ಸಂಪಾದನೆಮಾಡುವ ಯೋಚನೆ ಮಾಡಿದರೆ ಅದಕ್ಕೂ ಕೂಡ ಅವಕಾಶವಿಲ್ಲದ ಹಾಗಾಗಿದೆ. ಈ ಸೊಸೈಟಿಗಳಲ್ಲಿ ಸಾಲ ಸಿಗದಕಾರಣ, ಅವನು ಯಾವುದೋ ಸಾಹುಕಾರನಲ್ಲಿ ಸಾಲತಂದು, ಮನೆಗೆ ಇನ್ನೂ ದವಸವನ್ನು ತರುವುದಕ್ಕೆ ಮುಂಚೆಯೇ ಆ ಸಾಹುಕಾರ ಬಂದು ತನ್ನ ಅಂಗಡಿಗೆ ಅವನ ದವಸವನ್ನು ಅಳೆಸಿಕೊಂಡು ಹೋಗುತ್ತಾನೆ. ಇಂಥ ಕಷ್ಟಗಳಿಂದ ಅವನನ್ನು ಪಾರುಮಾಡಿ ರೈತನನ್ನು ಉದ್ಧಾರ ಮಾಡಬೇಕಾದರೆ ನಾನು ಈ ನಿರ್ಣಯದಲ್ಲಿ ಹೇಳಿರುವಂತೆ ಒಂದು ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನನ್ನು ಸ್ಥಾಪನೆ ಮಾಡಬೇಕು. ಅನೇಕ ಸಾಹುಕಾರರು ಈಗಲೂ ಶೇಕಡ 24 ರೂಪಾಯಿಗಳಂತೆ ಬಡ್ಡಿ ತೆಗೆದುಕೊಳ್ಳುತ್ತಿದ್ದಾರೆ. Income-tax ಬಂದಮೇಲೆ ಜಮೀನುಗಳನ್ನು ಕ್ರಯಕ್ಕೆಮಾಡಿಸಿಕೊಂಡು ಹಣವನ್ನು ಕೊಡುವ ಸಂದರ್ಭಗಳೇ ಹೆಚ್ಚಾಗಿವೆ. ಇದನ್ನೆಲ್ಲಾ ನೋಡಿದರೆ ರೈತನ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಈ ಕಷ್ಟಗಳನ್ನು ನೀಗುವಕಾಲ ಬಂದಿದೆ. ಪ್ರಜಾಸರ್ಕಾರವು ರೈತರ ಆರ್ಥಿಕೋನ್ನತಿಗೆ ದುಡಿಯತಕ್ಕ ಇಂಥ ಫೈನಾನ್ಸ್ ಕಾರ್ಪೊರೇಷನ್ನಿನ ಅವಶ್ಯಕತೆ ಈಗ ಎಷ್ಟಿದೆಯೆಂಬುದನ್ನು ಮಾನ್ಯ ಮಂತ್ರಿಗಳು ಚೆನ್ನಾಗಿ ಮನಗಂಡಿದ್ದಾರೆಂದು ತಿಳಿದಿದ್ದೇನೆ. ಅದಕ್ಕೋಸ್ಕರವೇ ಈಗಾಗಲೇ ಸಾಕಾದಷ್ಟು ವ್ಯವಹಾರಕೂಡ ನಡೆದಿದೆಯೆಂದು ಕೇಳಿದ್ದೇನೆ. ಆದಷ್ಟು ತ್ವರಿತವಾಗಿ ಜಾರಿಗೆ ತರಬೇಕೆಂಬುದೇ ನಮ್ಮ ಪ್ರಾರ್ಥನೆ. ಇದರಿಂದ ಸರ್ಕಾರದವರಿಗೆ ಯಾವ ಹಣಕಾಸಿನ ಹೊರೆಯೂ ಬರುವುದಿಲ್ಲ. ಕೇಂದ್ರಸರ್ಕಾರದಿಂದಲೋ ಅಥವಾ ರಿಜರ್ವ್ ಬ್ಯಾಂಕಿನಿಂದಲೋ ಹಣ ತಂದು ಸಕಾಲದಲ್ಲಿ Short term ಸಾಲಗಳನ್ನು ಒದಗಿಸುತ್ತಾಹೋದರೆ, ಸರ್ಕಾರದವರು ರೈತರಿಗೆ ಇನ್ನೇನು ಉಪಕಾರವನ್ನು ಮಾಡದೆ ಇದ್ದರೂ ಚಿಂತೆಯಿಲ್ಲ, ಅವನು ತನ್ನ ಜೀವನವನ್ನು ಸಾಗಿಸಿಕೊಂಡು ದೇಶದ ಆರ್ಥಿಕೋನ್ನತಿಗೆ ಸಹಾಯಕನಾಗುತ್ತಾನೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಈ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬಿ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Resolution moved.

"That this Assembly is of opinion that immediate steps be taken to start an Agricultural Finance Corporation with a view to make credit facilities available to the agricultural class."

ಶ್ರೀ ಎಚ್. ಸಿದ್ಧವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ನಿರ್ಣಯದಲ್ಲಿ ಅಡಕವಾಗಿರತಕ್ಕ ಅಂಶ ಸ್ವಾಗತಾರ್ಹವಾದದ್ದು. ನಮ್ಮ ದೇಶದ ವ್ಯವಸಾಯಗಾರರಿಗೆ ಬೇಕಾದ ಅಲ್ಪಾವಧಿ ಸಾಲಗಳನ್ನು ಒದಗಿಸಬೇಕಾದದ್ದು ಮತ್ತು ದೀರ್ಘಾವಧಿ ಸಾಲಗಳಿಗೆ ಅವಕಾಶ ಕಲ್ಪಿಸಿಕೊಡಬೇಕಾದದ್ದು ಅತ್ಯಾವಶ್ಯಕವೆಂದು ಸರ್ಕಾರದವರು ಚೆನ್ನಾಗಿ ಮನಗಂಡಿದ್ದಾರೆ. ಈ ದೃಷ್ಟಿಯಿಂದಲೇ ರಿಜರ್ವ್ ಬ್ಯಾಂಕಿನಿಂದ ವ್ಯವಸಾಯಗಾರರ ಉಪಯೋಗಕ್ಕಾಗಿ ಸಾಲಗಳನ್ನು ತೆಗೆದುಕೊಳ್ಳಬೇಕೆಂದು ಅವರು ಮನಸ್ಸು ಮಾಡಿದಾಗ ಅಗ್ರಿಕಲ್ಚರಲ್ ಕಾರ್ಪೊರೇಷನ್ ಎಂಬ ಸಂಸ್ಥೆಯನ್ನು ಸ್ಥಾಪನೆಮಾಡಿ ಹಣವನ್ನು ತೆಗೆದುಕೊಂಡು ಅದರ ಮೂಲಕ ಹಂಚುವುದು ಸೂಕ್ತವೇ ಎಂಬ ಅಂಶವನ್ನೂ ಸಹ ಸರ್ಕಾರದವರು ಯೋಚನೆ ಮಾಡಿದ್ದಾರೆ; ಮತ್ತು ಬೇರೆಕಡೆ, ಇತರ ಪ್ರಾಂತಗಳಲ್ಲಿ ಈರೀತಿಯಾಗಿ ಯಾವುದಾದರೂ ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ ಎಂಬ ಸಂಸ್ಥೆಗಳು ಸ್ಥಾಪನೆಯಾಗಿವೆಯೇ ಎಂಬ ಅಂಶವನ್ನೂ ಸಹ ಪರೀಕ್ಷೆಮಾಡಲಾಯಿತು. ಈ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿನವರು ನಮಗೆ ಕೊಟ್ಟ ತಿಳುವಳಿಕೆಯ ಪ್ರಕಾರ, ಈಗಾಗಲೇ ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಮತ್ತು ಇತರ ಸಂಸ್ಥಾನಗಳಲ್ಲಿ ವ್ಯವಸಾಯಗಾರರಿಗೆ ಬೇಕಾದ ಸಾಲಗಳನ್ನು ಅಪೆಕ್ಸ್ ಬ್ಯಾಂಕಿನಿಂದ, ಕೋ-ಆಪರೇಟಿವ್ ಸಂಸ್ಥೆಯಿಂದ, ಸಹಕಾರ ಸಂಘಗಳ ಸಂಸ್ಥೆಯಿಂದ ಕೊಡುವ ವ್ಯವಸ್ಥೆಯಿದೆ. ಆ ಸ್ಕೀಮು ಚೆನ್ನಾಗಿ ಕೆಲಸಮಾಡುತ್ತಿದೆ. ಮುಖ್ಯವಾಗಿ ವ್ಯವಸಾಯಗಾರರಿಗೆ ಬೇಕಾದಂಥ ಈ ಸಾಲಗಳನ್ನು ಸಹಕಾರ ಸಂಸ್ಥೆಗಳು ಮಾಡತಕ್ಕದ್ದು ಸೂಕ್ತ ಮತ್ತು ಈ ಒಂದು ಏರ್ಪಾಡು ಸಹಕಾರ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದಲ್ಲದೆ ದೇಶದಲ್ಲಿ ಒಂದು ರೀತಿಯಲ್ಲಿ ವ್ಯವಸ್ಥೆಯಿಂದ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಗೊತ್ತಾಗಿದೆ. ಈ ರೀತಿ ರಿಜರ್ವ್ ಬ್ಯಾಂಕಿನವರು, ತಮ್ಮ ಅನುಭವದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಈ ಕೆಲಸ ಚೆನ್ನಾಗಿ ನಡೆಯುತ್ತಿದೆ, ನೀವೂ ಇದೇ ರೀತಿ ಜಾರಿಗೆತರಬೇಕೆಂದು ಸಲಹೆ ಕೊಟ್ಟಮೇಲೆ, ನಾವು ಅಪೆಕ್ಸ್ ಬ್ಯಾಂಕಿನ ಮುಖಾಂತರ ವ್ಯವಸಾಯಗಾರರು ತಮಗೆ ಬೇಕಾದ ಸಾಲಗಳನ್ನು ಪಡೆಯುವ ವ್ಯವಸ್ಥೆ ಮಾಡಿ, ಆ ದಿಕ್ಕಿನಲ್ಲಿ ಈಗಾಗಲೇ ಬಹಳದೂರ ಕಾರ್ಯಕ್ರಮ ನಡೆದಿದೆ. ವ್ಯವಸಾಯಗಾರರೆಲ್ಲಾ ಒಂದು ವ್ಯವಸ್ಥೆಗೆ ಬರುವ ದೃಷ್ಟಿಯಲ್ಲಿ ಮತ್ತು ವ್ಯವಸಾಯಗಾರರು ತಮಗೆ ಬೇಕಾದ ಸಾಲಗಳನ್ನು ಅಪೆಕ್ಸ್ ಬ್ಯಾಂಕಿನಿಂದ ತೆಗೆದುಕೊಳ್ಳಬೇಕಾದರೆ ಏನೇನು ಮಾರ್ಪಾಟುಗಳಾಗಬೇಕೆಂಬುದನ್ನು ಸಹ ಸರ್ಕಾರದವರು ಯೋಚನೆ ಮಾಡಿದ್ದಾರೆ. ಅಪೆಕ್ಸ್ ಬ್ಯಾಂಕಿನ ರಚನೆ ಯಾವ ರೀತಿ ಇರಬೇಕು, ಕ್ರೆಡಿಟ್ ಹಂಚಿಕೆ ಯಾವರೀತಿ ಆಗಬೇಕು, ಪ್ರೈಮರಿ ಸೊಸೈಟಿಗಳ ರಚನೆ ಹೇಗಿರಬೇಕು, ಯಾವ ಯಾವ ಸೊಸೈಟಿಗಳನ್ನು ಈ ಸ್ಕೀಮಿನಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆಯೂ ಕಾರ್ಯಕ್ರಮ ನಡೆದಿದೆ ಆದ್ದರಿಂದ ಇದು ಫೈನಾನ್ಸ್ ಕಾರ್ಪೊರೇಷನ್ ಎಂಬ ಹೆಸರಿನ ಸಂಸ್ಥೆಯಲ್ಲದಿದ್ದರೂ, ಯಾವ ಉದ್ದೇಶದಿಂದ ಫೈನಾನ್ಸ್ ಕಾರ್ಪೊರೇಷನ್ ಇರಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೋ ಆ ಉದ್ದೇಶವನ್ನೇ ಸಫಲಗೊಳಿಸುವ ಕಾರ್ಯದಲ್ಲಿ ಈಗಾಗಲೇ ಬಹಳ ದೂರ ಮುಂದುವರಿದಿರುವುದರಿಂದ, ಅದು ಕಾರ್ಯಾಚರಣೆಗೆ ಬರುವವರೆಗೂ ಮಾನ್ಯ ಸದಸ್ಯರು ಸ್ವಲ್ಪ ಕಾದು ನೋಡಬೇಕು. ಈ ಪ್ರಕಾರ ಅವರೇನು ಅಭಿಪ್ರಾಯಪಟ್ಟಿದ್ದಾರೋ ಅದು ಈಗ ಸದ್ಯದಲ್ಲೇ ಒಂದು ರೀತಿಯಲ್ಲಿ ಜಾರಿಗೆ ಬರಲಿರುವುದರಿಂದ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri G. BASAPPA.—I seek the leave of the House to withdraw the Resolution.

The Resolution was, by leave, withdrawn.

No. 7.—Relief measures to be undertaken in Arsikere and Channarayapatna Taluks.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ: ಅದನ್ನು ಮಂಡಿಸುತ್ತೇನೆ.

"This Assembly is of opinion that in view of the great hardship caused to the raiyats by the failure of adequate timely rains for the past four to five years in Arsikere and Channarayapatna Taluks, the dry assessments for this year be completely remitted, famine relief measures be undertaken, the rates of fodder be reduced and the supply of food grains be increased."

ಸ್ವಾಮಿ ನಾನು ಈ ದಿವಸ ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು, ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ನೋಡಿದರೆ, ಬಹಳ ತಡವಾಗಿ ತಂದಿದ್ದೇನೆಂದು ನನ್ನ ಮನಸ್ಸಿಗೆನ್ನಿಸುತ್ತದೆ. ಎರಡು ಮೂರು ವರ್ಷಗಳ ಹಿಂದೆಯೇ ತರಬೇಕಾಗಿದ್ದ ಈ ನಿರ್ಣಯವನ್ನು ತಂದು ನಮ್ಮ ತಾಲ್ಲೂಕಿಗೆ ಯಾವ ಒಂದು ಪರಿಹಾರವನ್ನು ನೀಡಬೇಕೆಂದು ಈ ಹೊತ್ತು ಪ್ರಾರ್ಥನೆ ಮಾಡಿಕೊಳ್ಳುತ್ತೇನೋ ಅದನ್ನು ಆಗಲೇ ಮಾಡಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ. ಈ ದೃಷ್ಟಿಯಿಂದ ನಮ್ಮ ತಾಲ್ಲೂಕಿನ ಜನರು ನಿರ್ಭಾಗ್ಯರೆಂದು ಹೇಳಿದರೆ ತಪ್ಪಾಗಲಾರದು. ಹೀಗೆ ತಡವಾದುದಕ್ಕೆ ಕಾರಣವೇನೆಂದರೆ, ಹಿಂದಿನ ಅಸೆಂಬ್ಲಿಯಲ್ಲಿ ನಮ್ಮ ತಾಲ್ಲೂಕಿನ ಪ್ರತಿನಿಧಿಗಳಿಲ್ಲದಿದ್ದುದೇ ಎಂಬುದು ವ್ಯಕ್ತವಾಗುತ್ತದೆ. ನಮ್ಮ ತಾಲ್ಲೂಕಿನ ಜನರಿಗೆ ಈಗ ಒದಗಿರುವ ಕಷ್ಟ ಸನ್ನಿವೇಶವನ್ನು ಸರ್ಕಾರದವರು ನಿವಾರಿಸಬೇಕೆಂದು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಎಷ್ಟುಮಟ್ಟಿಗೆ ಕ್ಷಾಮಪರಿಸ್ಥಿತಿ ಇದೆ ಎಂಬುದನ್ನು ಮಂತ್ರಿಗಳೇ ಎರಡು ಮೂರು ದಿನಗಳ ಹಿಂದೆ ಮಾತನಾಡುತ್ತಾ ಹೇಳಿದರು. ಕೋಲಾರದ ಜಿಲ್ಲೆಯಲ್ಲಿರತಕ್ಕ ಕಷ್ಟದಷ್ಟೇ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿದೆ ಎಂದು ಹೇಳಿದ ಅವರ ಮಾತನ್ನು ಕೇಳಿ ಬಹಳ ಸಂತೋಷವಾಯಿತು. ನಿಜವಾಗಿ ಅವರು ದೇಶದ ಎಲ್ಲಾ ಕಡೆಯ ಪರಿಸ್ಥಿತಿಯನ್ನೂ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಿಜವಾಗಿ ಇಂಥ ಮಂತ್ರಿಗಳನ್ನು ಹೊಂದಿರುವ ನಾವೇ ಭಾಗ್ಯವಂತರೆನಿಸುತ್ತದೆ.

ಸ್ವಾಮಿ, ನಮ್ಮ ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳ ಅನೇಕ ಕಡೆಗಳಲ್ಲಿ ರೈತರು ಹೊಟ್ಟೆಗಿಲ್ಲದೆ ಸೊಪ್ಪು ಸೆದೆಗಳನ್ನು ತಿಂದಿರುವುದನ್ನು ಅನೇಕ ವೇಳೆ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅರಸೀಕೆರೆ ತಾಲ್ಲೂಕಿನಲ್ಲಿ ನೆಲಗಡಲೆಕಾಯನ್ನು ವಿಶೇಷವಾಗಿ ಬೆಳೆಯುತ್ತಾರೆ. ಈಗ ಅವೂ ಕೂಡ ಇಲ್ಲದೆ, ಹಿಂದೆ ನಲವತ್ತು ವರ್ಷಗಳ ಹಿಂದೆ ದೊಡ್ಡ ಬರ ಬಂದು ಹೇಗೆ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದರೋ ಹಾಗೆಯೇ ಈಗಲೂ ಹಾಗೆಯೇ ಕಷ್ಟಪಡುತ್ತಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಅಲ್ಲಿ ಜನರಿಗೆ ಕೂಲಿ ಕೂಡ ಸಿಕ್ಕದೆ, ಧಾನ್ಯವಿಲ್ಲದೆ ಅವರು ಹೊರಗೆ ಮಲೆನಾಡು ಪ್ರದೇಶಗಳಿಗೆ ಹೋಗಿ ಕೂಲಿ ಮಾಡಿ ಅಲ್ಲಿ ಕೊಟ್ಟ ಕಾಳನ್ನು ತಂದು ಮಕ್ಕಳು ಮರಿಗಳಿಗೆ ಕೊಟ್ಟು ಸಾಕುತ್ತಿದ್ದಾರೆ. ಹಿಂದೆ ಸರ್ಕಾರದವರು ಒದಗಿಸಿದ ದಪ್ಪ ಜೋಳವನ್ನು ಹೊರ ದೇಶಗಳಲ್ಲಿ ದನಗಳು ಕೂಡ ತಿನ್ನುವುದಿಲ್ಲ—ಆ ಜೋಳವನ್ನು ಆ ದೇಶಗಳಲ್ಲಿ ಹಂದಿಗಳಿಗೆ ಹಾಕುತ್ತಾರೆಂದು ಹೇಳುತ್ತಾರೆ—ಇಂಥ ಜೋಳವನ್ನು ನಮ್ಮ ತಾಲ್ಲೂಕಿಗೆ ಒದಗಿಸಿದಾಗ ಜನರು ನನಗೆ ತನಗೆ ಎಂದು ತೆಗೆದುಕೊಂಡು ತಿಂದರು ಎಂದರೆ, ಆ ದೃಶ್ಯವನ್ನು ನೋಡಿದರೆ ಯಾರಿಗಾದರೂ ಕಣ್ಣಲ್ಲಿ ನೀರು ಹರಿಯುತ್ತಿತ್ತು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಂಥ ಪರಿಸ್ಥಿತಿ ಅಲ್ಲಿರುವಾಗ ಖುಷ್ಕಿ ಕಂದಾಯವನ್ನು ವಜಾ ಮಾಡಿಕೊಡಿ ಎಂದು ಕೇಳಿರುವುದು ನಿಜವಾಗಿಯೂ ಅಂಥ ದೊಡ್ಡ ಬೇಡಿಕೆಯಲ್ಲ, ಬಹಳ ಸಣ್ಣ ಬೇಡಿಕೆಯೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ದನಗಳಿಗೆ ಹುಲ್ಲು ಒದಗಿಸುವ ವಿಚಾರದಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಹೋದಸಾರಿ ನಮ್ಮ ಮಂತ್ರಿಗಳು ನಮ್ಮ ಕಷ್ಟ ಪರಿಸ್ಥಿತಿಯನ್ನು ಕಂಡು ಆದಷ್ಟು ಹುಲ್ಲನ್ನೊದಗಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಇದಕ್ಕಾಗಿ ನಮ್ಮ ತಾಲ್ಲೂಕಿನ ಜನರ ಪರವಾಗಿ ಅವರಿಗೆ ವಂದನೆಗಳನ್ನರ್ಪಿಸುತ್ತೇನೆ. ಈಚೆಗೆ ದನಗಳ ಮೇವಿಗೆ ತುಂಬ ಕಷ್ಟವಾಗಿರುವಾಗ ಒಂಭತ್ತು ವ್ಯಾಗನ್ ಬಂತೆಂದು ಅಮಲ್ದಾರರು ಹೇಳಿದರು. ಇದಕ್ಕೆ ಚಿರಋಣಿಯಾಗಿ ಜನತೆಯ ಪರವಾಗಿ ವಂದನೆಗಳನ್ನರ್ಪಿಸುತ್ತೇನೆ.

ಕುಡಿಯುವ ನೀರಿನ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಬಹಳ ಕೆಟ್ಟಿತ್ತು. ಪದೇ ಪದೇ ಈ ವಿಷಯದಲ್ಲಿ ಜನರಿಂದ ಪ್ರಾರ್ಥನೆ ಬಂದದ್ದರಿಂದ ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹಾಸನ ಜಿಲ್ಲೆಯಲ್ಲಿ ಪ್ರವಾಸ ಬಂದ ಸಂದರ್ಭದಲ್ಲಿ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ನೀರಿಗೆ ಬಹಳ ಕಷ್ಟವಾಗಿದೆ ಎಂದು ಜನರು ಹೇಳಿಕೊಂಡಾಗ, ನಮ್ಮ ಹಾಸನ ಜಿಲ್ಲೆಗೆ ಎರಡು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದು ಸ್ತೋತ್ರಾರ್ಹವಾದ ವಿಚಾರ. ಇದಕ್ಕಾಗಿ ಮುಖ್ಯ ಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಈ ಮಧ್ಯೆ ಇದೊಂದು ವಿಚಾರ ಹೇಳಬೇಕಾಗಿದೆ. ಕ್ಷಾಮ ಪರಿಹಾರ ಕಾರ್ಯಗಳು ನಮ್ಮ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಅಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಮೊನ್ನೆ ನಾವು ಕೇಳಿದ ಪ್ರಶ್ನೆಗೆ ಉತ್ತರವನ್ನು ನೋಡಿದರೆ, ಸರ್ಕಾರದವರು ಕೊಟ್ಟ ಲಕ್ಷಾಂತರ ರೂಪಾಯಿಗಳಲ್ಲಿ ನಾಲ್ಕೈದು ಸಾವಿರ ಮಾತ್ರ ಖರ್ಚಾಗಿದೆ ಎಂದು ಅರ್ಥವಾಗುತ್ತದೆ. ಮಾನ್ಯ ಮಂತ್ರಿಗಳೂ ಕೂಡ ಈ ವಿಚಾರಕ್ಕೆ ಹೆಚ್ಚು ಗಮನಕೊಟ್ಟು, ಕ್ಷಾಮಪರಿಹಾರ ಕಾರ್ಯಗಳನ್ನು ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಹೆಚ್ಚಾಗಿ ತೆಗೆದುಕೊಂಡು ಮಾಡಿಸುವುದರ ಮೂಲಕ ನಮ್ಮ ತಾಲ್ಲೂಕಿನ ಜನರಿಗೆ ಅನುಕೂಲಮಾಡಿಕೊಡಬೇಕೆಂದು ಅರಿಕೆ ಮಾಡುತ್ತೇನೆ. ಮಾನ್ಯ ಮಂತ್ರಿಗಳಿಗೆ ನಮ್ಮ ತಾಲ್ಲೂಕಿನಮೇಲೆ ತುಂಬ ಆಸಕ್ತಿಯಿದೆ. ಈ ಲೋಪದೋಷಗಳೆಲ್ಲವೆಯೆಂದರೆ, ಇಂಜನಿಯರಿಂಗ್ ಇಲಾಖೆಯವರು ಆದಷ್ಟು ಮುತವರ್ಜಿ ತೆಗೆದುಕೊಂಡು ಕೆಲಸ ಮಾಡುತ್ತಿಲ್ಲವಾದದ್ದರಿಂದ ಎಂದು ಖಂಡಿತವಾಗಿ ಹೇಳುತ್ತೇನೆ. ಯಾವಯಾವಕಡೆ ಏನೇನು ಕೆಲಸವಾಗಬೇಕೆಂದು ನೋಡಿ, ಆ ಕೆಲಸವನ್ನು ಮಾಡಿಸಿಕೊಡಿ ಎಂದು ಜನರು ಸರ್ಕಾರಕ್ಕೆ ಒತ್ತಾಯಮಾಡಿದರೂ ಕೂಡ, ಆ ಇಲಾಖೆಯವರು ಮನಸ್ಸಿಗೆ ತೆಗೆದುಕೊಳ್ಳದೆ ಉದಾಸೀನ ಭಾವವನ್ನು ತೋರಿಸುತ್ತಿರುವುದನ್ನು ನೋಡಿದರೆ ಆಶ್ಚರ್ಯವೂ ವ್ಯಸನವೂ ಆಗುತ್ತದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ತುರ್ತು ಕಾರ್ಯಕ್ರಮ ತೆಗೆದುಕೊಳ್ಳುವಂತೆ ಕಟ್ಟುನಿಟ್ಟಾದ ಅಪ್ಪಣೆಯನ್ನು ದಯಪಾಲಿಸಬೇಕೆಂದು ಮಾನ್ಯ ರೆವೆನ್ಯೂ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಸ್ವಾಮಿ, ದನಗಳಿಗಾಗಿ ಹುಲ್ಲನ್ನೇನೋ ಸರ್ಕಾರದವರು ಉದಾರವಾಗಿ ಒದಗಿಸುತ್ತಿದ್ದಾರೆ. ಆದರೆ ಈಗಿರತಕ್ಕ ದರ ಜಾಸ್ತಿಯಾಗಿ ಅನೇಕ ರೈತರಿಗೆ ಅದನ್ನು ಕೊಳ್ಳುವುದಕ್ಕೆ ತೊಂದರೆಯಾಗಿದೆ. ಆದಕಾರಣ ಆದಷ್ಟು ದರವನ್ನು ಕಡಮೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಅಲ್ಲದೆ ಈ ವರ್ಷ ಆದಷ್ಟು ಹೆಚ್ಚು ಹುಲ್ಲನ್ನು ಒದಗಿಸದೇ ಹೋದರೆ ಅನೇಕ ರಾಸುಗಳು ಉಳಿಯುವುದಿಲ್ಲ. ಹೋದವರ್ಷ ಕೂಡ ರಾಸುಗಳು ಸತ್ತಿರುವುದು ಸರ್ಕಾರದವರಿಗೂ ಗೊತ್ತಿದೆ. ಹೋದವರ್ಷವೂ ಈ ವರ್ಷವೂ ಮಳೆಯಾಗದೆ ತೊಂದರೆಯಾಗಿರುವುದರಿಂದ, ಈ ವರ್ಷ ಹುಲ್ಲನ್ನು ಹೆಚ್ಚಾಗಿ ಸರಬರಾಯಿ ಮಾಡುವುದಲ್ಲದೆ ಬೆಲೆಯನ್ನೂ ಕಡಮೆಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಧಾನ್ಯಗಳನ್ನು ಹೆಚ್ಚಾಗಿ ಸರಬರಾಯಿ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಸರ್ಕಾರದವರು ದೊಡ್ಡಮನಸ್ಸುಮಾಡಿ ಕಂಟ್ರೋಲ್ ತೆಗೆದುಹಾಕಿದರೆ ಸರ್ಕಾರಕ್ಕೆ ಕಷ್ಟ ಕಡಮೆಯಾಗುತ್ತದೆಯೋ ಏನೋ ಅನ್ನಿಸುತ್ತದೆ. ಈ ಕಂಟ್ರೋಲನ್ನು ಎಲ್ಲಿಯವರೆಗೆ ಇಟ್ಟಿರುತ್ತಾರೋ ಅಲ್ಲಿಯವರೆಗೆ ಜನರು ಪಡಬಾರದ ಕಷ್ಟಪಡಬೇಕಾಗುತ್ತದೆ. ಜನರಿಗೂ ತೊಂದರೆ, ಸರ್ಕಾರಕ್ಕೂ ತೊಂದರೆ. ಇಂಥ ಕಷ್ಟಕ್ಕೆ ನಾವು ಸಿಕ್ಕುವುದೂ ಬೇಡ, ಸರ್ಕಾರದವರು ಸಿಕ್ಕುವುದೂ ಬೇಡ. ಕಂಟ್ರೋಲ್ ತೆಗೆದುಹಾಕಿ ಸಾಮಾನ್ಯ ಪರಿಸ್ಥಿತಿ ಬಂದರೆ ನಿಜವಾಗಿ ನಮ್ಮ ತಾಲ್ಲೂಕುಗಳಲ್ಲಿ ಜನತೆಗೆ ಅನುಕೂಲ ಹೆಚ್ಚು. ಎಲ್ಲಿ ಧಾನ್ಯ ಸಿಕ್ಕುತ್ತದೆಯೋ ಅಲ್ಲಿಗೆ ಹೋಗಿ ಕಷ್ಟಪಟ್ಟಾದರೂ ತೆಗೆದುಕೊಂಡು ಬರುತ್ತಾರೆ. ಈ ಸಾರಿ ರಾಗಿ ಜೋಳದಮೇಲಿನ ಕಂಟ್ರೋಲ್ ತೆಗೆದಮೇಲೆ ಚನ್ನಗಿರಿಗೆ ಹೋಗಿ ಅನೇಕ ಜನರೂ ವ್ಯಾಪಾರಸ್ಥರೂ ತಂದು ವ್ಯಾಪಾರಮಾಡುತ್ತಿದ್ದಾರೆ. ಇಂಥ ಸುಖ

(ಶ್ರೀ ಬಿ. ಚಿಕ್ಕಣ್ಣ)

ಮಾಯವಾದ ವಾತಾವರಣವನ್ನು ನೋಡಿ ನಾವೆಲ್ಲರೂ ಆನಂದಪಡುವುದಕ್ಕೆ ಬದಲು ಕಂಟ್ರೋಲನ್ನಿಟ್ಟುಕೊಂಡು ಜನರೂ ಸರ್ಕಾರದವರೂ ಕಷ್ಟಕ್ಕೊಳಗಾಗುವುದು ಸೂಕ್ತವಲ್ಲ. ತಕ್ಷಣ ಎಲ್ಲ ಕಡೆಯಲ್ಲೂ ಕಂಟ್ರೋಲನ್ನು ತೆಗೆಯಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ಇಷ್ಟು ಹೇಳಿ ಈ ಸಭೆಯ ಮುಂದೆ ಇಟ್ಟಿರುವ ಈ ನಿರ್ಣಯದಲ್ಲಿ ಕೋರಿರುವಂತೆ ಈ ವರ್ಷದ ಖುಷ್ಕಿ ಕಂದಾಯವನ್ನು ಪೂರ್ತಿಯಾಗಿ ವಜಾಮಾಡಿಸಿ ಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Resolution moved :

"That this Assembly is of the opinion that in view of great hardship caused to the raiyats by the failure of adequate timely rains for the past four to five years in Arsikere and Channarayapatna Taluks, the dry assessments for this year be completely remitted, famine relief measures be undertaken, the rates of fodder be reduced and the supply of food grains be increased."

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಶ್ರೀ ಚಿಕ್ಕಣ್ಣನವರು ಈ ನಿರ್ಣಯದಲ್ಲಿ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಈ ಸಾಲಿನ ಖುಷ್ಕಿಕಂದಾಯವನ್ನು ಮಾಫಿಮಾಡಬೇಕೆಂದೂ ಕ್ಷಾಮಪರಿಹಾರಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ ಸೂಚಿಸಿದ್ದಾರೆ. ನಾನು ಅನೇಕ ಸಂದರ್ಭಗಳಲ್ಲಿ ತಿಳಿಸಿದ ಹಾಗೆ, ಕಂದಾಯವನ್ನು ಮಾಫಿ ಮಾಡುವ ವಿಚಾರದಲ್ಲಿ ಸರ್ಕಾರದವರು ಸಹಾನುಭೂತಿಯುತವಾದ ದೃಷ್ಟಿಯನ್ನಿಟ್ಟುಕೊಂಡಿದ್ದಾರೆ. ಎಲ್ಲೆಲ್ಲಿ ಸ್ಥಳೀಯ ಅಧಿಕಾರಿಗಳು ಕಂದಾಯ ಮಾಫಿ ಮಾಡಬೇಕೆಂದು ಶಿಫಾರಸುಗಳನ್ನು ಕಳುಹಿಸುತ್ತಾರೋ ಆ ಎಲ್ಲಾ ಸಂದರ್ಭಗಳಲ್ಲಿಯೂ ಸರ್ಕಾರದವರು ಕಂದಾಯವನ್ನು ಮಾಫಿ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಕಂದಾಯವನ್ನು ಮಾಫಿ ಮಾಡಬೇಕೆಂಬ ವಿಚಾರದಲ್ಲಿ ಸೂಕ್ತ ಶಿಫಾರಸು ಕಳುಹಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸರ್ಕಾರದವರು ಬರೆದಿದ್ದಾರೆ. ಅವರಿಂದ ವರದಿ ಬಂದೊಡನೆ ಕಂದಾಯವನ್ನು ಮಾಫಿಮಾಡತಕ್ಕ ಅವಶ್ಯಕತೆ ಇದ್ದಲ್ಲೆಲ್ಲಾ ಮಾಫಿಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ.

ಕ್ಷಾಮ ಪರಿಹಾರದ ವಿಚಾರದಲ್ಲಿ ಸರ್ಕಾರದವರು ಬೇಕಾದಷ್ಟು ಹಣವನ್ನು ಹಾಸನ ಜಿಲ್ಲೆಗೆ ಒದಗಿಸಿದ್ದಾರೆ. ಸುಮಾರು ಒಂದು ತಿಂಗಳ ಕೆಳಗೆ ಅಭಾವ ಪ್ರದೇಶದಲ್ಲಿ ಕ್ಷಾಮಪರಿಹಾರ ನೀಡುವುದಕ್ಕೂ ಕೆರೆಗಳ ಜೀರ್ಣೋದ್ಧಾರ ಮಾಡುವುದಕ್ಕೂ ಆರು ಲಕ್ಷ ರೂಪಾಯಿಗಳನ್ನು ಹಾಸನ ಜಿಲ್ಲೆಗೆ ಕೊಡಲಾಗಿದೆ. ಕೊಟ್ಟಿರುವ ಹಣ ಖರ್ಚಾಗಿಲ್ಲ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕೆಲಸಕಾರ್ಯ ತೃಪ್ತಿಕರವಾಗಿ ಮಾಡಿಲ್ಲವೆಂಬ ಅಂಶವನ್ನು ಮಾನ್ಯ ಸದಸ್ಯರು ಸರ್ಕಾರದ ಮತ್ತು ಸಭೆಯ ಗಮನಕ್ಕೆ ತಂದಿದ್ದಾರೆ. ಸರ್ಕಾರದವರು ಹಣವನ್ನೊದಗಿಸಿರುವುದು ಖರ್ಚುಮಾಡುವುದಕ್ಕೆ. ಒಂದುವೇಳೆ ನಮ್ಮ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೆಲಸ ನಡೆಯದೇ ಇದ್ದರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರದವರು ಸಿದ್ಧರಾಗಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಕ್ಷಾಮಪರಿಹಾರದ ಬಗ್ಗೆ ಸರ್ಕಾರದವರು ಹೆಚ್ಚು ಶ್ರಮವಹಿಸಿದ್ದಾರೆ. ಇನ್ನೂ ಮುಂದುವರಿದು ಹೇಳುವುದಾದರೆ ಮೈಸೂರು ಸಂಸ್ಥಾನದಲ್ಲಿ ಕ್ಷಾಮಪರಿಹಾರಕ್ಕೆ ಕೈಕೊಂಡ ಕಾರ್ಯ ಬಹಳ ಪ್ರಶಂಸನೀಯವೆಂದು ಹೇಳಬಹುದು. ನಾವು ಮಾಡಿದ ಕೆಲಸವನ್ನು ನಾವೇ ಹೊಗಳಿಕೊಳ್ಳಲು ಇಷ್ಟವಿಲ್ಲದಿದ್ದರೂ ಕೂಡ ಬಾಕಿ ಪ್ರಾಂತಗಳಲ್ಲಿ ಮಾಡಿದ ಕೆಲಸಕ್ಕಿಂತಲೂ ಇಲ್ಲಿ ಬಹಳ ಉತ್ತಮವಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ನಾವು ಮಾಡಿದ್ದೇವೆಂದು ಧೈರ್ಯವಾಗಿ ಹೇಳಬಲ್ಲೆ. ಇನ್ನೂ ಬರುವ ಸಾಲಿನಲ್ಲಿ ಕ್ಷಾಮಪರಿಹಾರ ಕಾರ್ಯಗಳು ಹೆಚ್ಚಾಗಿ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ನಡೆಯಬೇಕಾಗಿದ್ದರೆ ಸರ್ಕಾರದವರು ಕೈಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಈ ಭರವಸೆಯ ಆಧಾರದ ಮೇಲೆ ಮಾನ್ಯ ಸದಸ್ಯರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri B. CHIKKANNA.—I seek leave of the House to withdraw the Resolution.

The Resolution was, by leave, withdrawn.

2-30 P.M.

Mr. SPEAKER.—The next resolution (No. 8) stands in the name of Sri G. Papanna. Resolution Nos. 50 and 68 are also similar. They need not be moved for the simple reason that members have said enough on the subject and Government have promised to bring in another Bill in the next session. When the Bill was under discussion much has been said about these things. Is there any necessity for moving these resolutions?

(The concerned Members did not press for moving their resolutions.)

Mr. SPEAKER.—Resolution No. 9.

No. 9.—Supply of power to irrigation wells in Sira Taluk.

*ಶ್ರೀ ಬಿ. ಎಸ್. ರಾಮೇಗೌಡ (ಸೀರ್ಯ).—ಸ್ವಾಮಿ, ನನ್ನ ನಿರ್ಣಯವು ಈ ರೀತಿ ಇದೆ: ಅದನ್ನು ಮಂಡಿಸುತ್ತೇನೆ.

"ಸೀರ್ಯ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಬಾವಿಗಳಿಂದ 'ಪಂಪು' ಯಂತ್ರಗಳ ಮೂಲಕ ನೀರನ್ನೆತ್ತಿ ನೀರಾವರಿ ಸಾಗುವಳಿ ಮಾಡುವುದಕ್ಕಾಗಿ ಅಲ್ಲಿರತಕ್ಕಂಥ ಬಾವಿಗಳಿಗೆ ಕೂಡಲೇ

ವಿದ್ಯುಚ್ಛಕ್ತಿಯನ್ನು ಒದಗಿಸಲು ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ''

ಸ್ವಾಮಿ, ನಮ್ಮ ಸೀರ್ಯ ತಾಲ್ಲೂಕನ್ನು ಬಹಳ ವರ್ಷಗಳಿಂದಲೂ ಅಂದರೆ ಸುಮಾರು 50-60 ವರ್ಷಗಳಿಂದಲೂ ಕ್ಷಾಮಪೀಡಿತ ಪ್ರದೇಶವೆಂದು ಪರಿಗಣಿಸಲಾಗಿದೆ. ಈ ಒಂದು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಎಲ್ಲಿನೋಡಿದರೂ ಕೆಲವು ಬಾವಿಗಳಿಂದ ನೀರನ್ನು ಎತ್ತಿ ಅದರ ಮುಖಾಂತರ ವ್ಯವಸಾಯ ಮಾಡಬೇಕಾಗಿದೆ. ಇದು ಹೊರತು ಆ ಪ್ರದೇಶವಲ್ಲಿ ಯಾವ ಒಂದು ದೊಡ್ಡ ನದಿಯಾಗಲಿ, ಸದಾ ನೀರು ಹರಿಯುವಂಥ ಹಳ್ಳಗಳಾಗಲಿ ಇರುವುದಿಲ್ಲ. ಹೀಗೆ ಯಾವ ಒಂದು ನೀರಿನ ಸೌಕರ್ಯವೂ ಇಲ್ಲದೆಹೋಗಿ ಅಲ್ಲಿ ವ್ಯವಸಾಯದ ಬದುಕು ನಡೆಯುವುದೇ ತುಂಬ ದುರ್ಲಭವಾಗಿದೆ. ಈ ಎಲ್ಲ ಕಾರಣಗಳಿಂದಲೂ ಅಲ್ಲಿ ಕ್ಷಾಮದ ಪರಿಸ್ಥಿತಿ ಎಷ್ಟರ ಮಟ್ಟಿಗೆ ಪ್ರಬಲವಾಗಿರುತ್ತದೆಯೆಂಬ ಅಂಶವನ್ನು ಕಣ್ಣಾರೆ ನೋಡಲು ಪ್ರಪಂಚದ ನಾನಾ ದೇಶಗಳ ದೊಡ್ಡ ದೊಡ್ಡ ಮುಖಂಡರುಗಳೆಲ್ಲರೂ ಇಲ್ಲಿ ಪ್ರವಾಸ ಬಂದು ನೋಡಿಕೊಂಡು ಹೋಗಿದ್ದಾರೆ. ಈ ವಿಷಯ ಅನೇಕರಿಗೆ ತಿಳಿದಿರತಕ್ಕದ್ದೇ ಆಗಿದೆ. ಇಂಡಿಯಾ ದೇಶದ ಮಾನ್ಯ ಪ್ರಧಾನ ಸಚಿವರೂ, ನಮ್ಮ ಶ್ರೀಮನ್ಮಹಾರಾಜರವರೂ ಮತ್ತು ಇನ್ನೂ ಇತರ ಅನೇಕ ಜನ ಹೊರಗಡೆಯ ಮುಖಂಡರುಗಳೂ ಸಹ ಇಲ್ಲಿಗೆ ಬಂದು ಆ ಪ್ರದೇಶದ ಜನರು ಪಡುತ್ತಿದ್ದಂಥ ವ್ಯಥೆಯನ್ನು ನೋಡಿ, ಅಲ್ಲಿನ ಜನರಿಗೆ ಪ್ರತಿಯೊಂದು ಸೌಲಭ್ಯಗಳನ್ನೂ ಸರ್ಕಾರದವರು ನೀಡತಕ್ಕದ್ದೊಂದೇ ಅಲ್ಲದೆ ಅಲ್ಲಿನ ಕ್ಷಾಮವನ್ನೂ ಸಂಪೂರ್ಣವಾಗಿ ನಿವಾರಣೆ ಮಾಡಬೇಕಾಗಿದ್ದರೆ ಅಲ್ಲಿ ಖಾಯಂ ಆಗಿ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬುದರ ಬಗ್ಗೆ ಹಾಗೆ ಬಂದಿದ್ದಂಥ ಮಹಾಮಹನೀಯರೆಲ್ಲರೂ ಸಲಹೆಗಳನ್ನು ಕೂಡ ಮಾಡಿರುತ್ತಾರೆಂದು ಹೇಳಿದರೆ ತಪ್ಪಾಗಲಾರದು. ಇತ್ತೀಚೆಗೆ ಶ್ರೀ ಎಸ್. ವಿ. ರಾಮಮೂರ್ತಿ ಸಮಿತಿಯವರೂ ಕೂಡ ಇಲ್ಲಿಗೆ 6-7 ತಿಂಗಳುಗಳ ಕೆಳಗೆ ಬಂದು ಪ್ರವಾಸಮಾಡಿಕೊಂಡು ಹೋಗಿದ್ದಾರೆ. ಆ ಸಮಿತಿಯವರು ಆ ತಾಲ್ಲೂಕಿನಲ್ಲೆಲ್ಲಾ ಪ್ರವಾಸಮಾಡಿ ಆ ಪ್ರದೇಶದಲ್ಲಿ ಕ್ಷಾಮಪರಿಸ್ಥಿತಿಯನ್ನು ತಡೆಗಟ್ಟಬೇಕಾಗಿದ್ದರೆ ಇರತಕ್ಕ ಹಾದಿಗಳು ಯಾವು ಯಾವವು ಇರುತ್ತವೆಯೋ ಅವುಗಳೆಲ್ಲವನ್ನೂ ವಿಮರ್ಶೆಮಾಡಿದ ನಂತರ ಇರತಕ್ಕಂಥ ಸುಲಭೋಪಾಯವಾದ ಮಾರ್ಗ ಒಂದೇ ಒಂದು ಎಂದು ಹೇಳಿದ್ದಾರೆ. ಅದು ಯಾವುದೆಂದರೆ, ವ್ಯವಸಾಯಕ್ಕೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನೂ ಪಂಪ್‌ಗಳನ್ನೂ ಒದಗಿಸುವುದು. ಇದೊಂದು ವಿನಾ ಮತ್ತೆ ಯಾವ ದಾರಿಯೂ ಅಲ್ಲಿ ಕ್ಷಾಮ ನಿರ್ಮೂಲನಕ್ಕೆ ಅನುಕೂಲವಾದುದು ಇಲ್ಲವೆಂದು ಅವರು ಸಲಹೆ ನೀಡಿರತಕ್ಕದ್ದು ನಮ್ಮ ಸರ್ಕಾರದವರ ಗಮನದಲ್ಲಿಯೂ ಇದೆಯೆಂದರೆ ಇದೇನೂ ಒಂದು ಉತ್ಪ್ರೇಕ್ಷೆಯಾಗಲಾರದು. ಈ ಎಲ್ಲ ದೃಷ್ಟಿಗಳಿಂದಲೂ ರೈತರಿಗೆ ಎಷ್ಟು ತೀವ್ರವಾಗಿ ಈ ವಿದ್ಯುಚ್ಛಕ್ತಿಯ ಮತ್ತು ಪಂಪುಗಳ ಆವಶ್ಯಕತೆ ಇರುತ್ತದೆಯೆಂಬುದನ್ನು ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು, ಆ ಪ್ರದೇಶದಲ್ಲಿರತಕ್ಕ ಬಾವಿಗಳಿಗೆಲ್ಲಾ ಜಾಗ್ರತೆಯಾಗಿ ಆ ಅನುಕೂಲತೆಗಳನ್ನು ಒದಗಿಸಿಕೊಟ್ಟು ರೈತರುಗಳಿಗೆ ಇರತಕ್ಕ ತೊಂದರೆಗಳನ್ನು ನಿವಾರಣೆಮಾಡಬೇಕೆಂದು ನಾನೀಗ ಈ ನಿರ್ಣಯದ ಮೂಲಕ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಲು ನಿಂತಿದ್ದೇನೆ. ಅಲ್ಲಿಯ ಜನರ ಜೀವನದ ಪರಿಸ್ಥಿತಿ ತುಂಬ ಹದಗೆಟ್ಟುಹೋಗಿದೆ, ಅವರ ಆರ್ಥಿಕ ಹೀನಸ್ಥಿತಿಯನ್ನಂತೂ ಹೇಳತೀರದಾಗಿದೆ. ಈ ದಿವಸ ಒಬ್ಬ ರೈತನಾಗಿರತಕ್ಕವನು ಬಾವಿಯಿಂದ ನೀರನ್ನೆತ್ತಿ ವ್ಯವಸಾಯಮಾಡಬೇಕಾಗಿದ್ದರೆ ಆತನಿಗೆ ಸಹಸ್ರಾರು ರೂಪಾಯಿಗಳ ಲಾಗೋಡಿರುತ್ತವೆ. ಸರಿಯಾದ ಒಂದು ಜೊತೆ ಎತ್ತುಗಳನ್ನು ಕೊಂಡುಕೊಳ್ಳಲಿಕ್ಕೂ ಸಹ ಅವನಿಗೆ ಯತ್ನವಿಲ್ಲದಂತಾಗಿದೆ. ಸಾವಿರಾರು ರೂಪಾಯಿಗಳನ್ನು ಕೂಡದೆ ಸರಿಯಾದ ಒಂದು ಜೊತೆ ಎತ್ತುಗಳನ್ನು ತರುವುದಕ್ಕಾಗುವುದಿಲ್ಲ. ಹೀಗೆ ಸಾವಿರಾರು ರೂಪಾಯಿಗಳನ್ನು ತೆತ್ತು ಎತ್ತುಗಳನ್ನು ಕೊಳ್ಳುವ ಶಕ್ತಿಯಾದರೂ ಎಷ್ಟು ಜನಗಳಿಗಿದೆ? ಈ ದಿವಸ ಅವರಿಗೆ ಇರತಕ್ಕ ಆರ್ಥಿಕ ಸ್ಥಿತಿಯ ಮುಗ್ಗಟ್ಟಿನಲ್ಲಿ ಹೀಗೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ವ್ಯವಸಾಯ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಅವರು ಇಲ್ಲದೆ ಇರುವುದರಿಂದ, ಆ ರೈತರ ಕಷ್ಟ ಏನಾಗಿರಬಹುದು, ಅಲ್ಲಿಯ ವ್ಯವಸಾಯವಾದರೂ ಎಷ್ಟು ಕಷ್ಟಕ್ಕೆ ಬಂದಿದೆಯೆಂಬುದನ್ನು ಸರ್ಕಾರದವರು ಬಹಳ ತೀವ್ರವಾಗಿ ಮತ್ತು ಆಳವಾಗಿ ಆಲೋಚನೆಮಾಡಿ ಅಲ್ಲಿನ ರೈತರಿಗೆ ವಿದ್ಯುಚ್ಛಕ್ತಿ ಪಂಪುಗಳನ್ನು ಆದಷ್ಟು ಶೀಘ್ರವಾಗಿ ಒದಗಿಸಿಕೊಟ್ಟು ಈ ವರ್ಷವೇ ಸಹಾಯಮಾಡಬೇಕೆಂದು ಸರ್ಕಾರದವರಲ್ಲಿ ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಾಗಲೇ ಆ ತಾಲ್ಲೂಕಿನಲ್ಲಿ ಆಗಿರತಕ್ಕಂಥ ಅಂದಾಜುಗಳನ್ನೆಲ್ಲಾ ಬೇಗ ಮಂಜೂರುಮಾಡಿ, ಅಲ್ಲದೇ ಕೆಲಸ ಅರ್ಧಂಬರ್ಧ ಆಗಿರತಕ್ಕಂಥವುಗಳನ್ನು ಬೇಗ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಲು ನಾನೀ ನಿರ್ಣಯವನ್ನು ತಂದಿದ್ದೇನೆ. ಆದರೆ ಮಾನ್ಯ ಮಂತ್ರಿಗಳು ಸಾಮಾನ್ಯ ರೀತಿಯಲ್ಲಿ ಎಲ್ಲ ಸಂದರ್ಭಗಳಲ್ಲಿಯೂ ವ್ಯವಸಾಯಕ್ಕೆ ಉತ್ತೇಜನ ನೀಡುತ್ತಲೇ ಬಂದಿದ್ದೇವೆಂದು ಹೇಳಬಹುದು. ಪ್ರತಿಯೊಬ್ಬರಿಗೂ ವಿದ್ಯುಚ್ಛಕ್ತಿ ಬೇಕೇ ಬೇಕು; ಆದರೆ ಅದರಲ್ಲೂ ಯಾರಿಗೆ ಹೆಚ್ಚಿನ ಆವಶ್ಯಕತೆಯಿದೆ, ಯಾರಿಗೆ ಕಮ್ಮಿ ಆವಶ್ಯಕತೆಯಿದೆ ಎಂಬುದನ್ನೂ, ಯಾವ ಪ್ರದೇಶದಲ್ಲಿ ರೈತರ ಸ್ಥಿತಿ ತೀರ ಚಿಂತಾಜನಕವಾಗಿರುತ್ತದೆಯೆಂಬುದನ್ನೂ ಸ್ವಲ್ಪ ಗಮನಕ್ಕೆ ತೆಗೆದುಕೊಂಡು ಕೆಲಸಮಾಡಬೇಕಾಗಿದೆ. ಹೀಗೆ ತಾವು ಇಡೀ ಸಂಸ್ಥಾನವನ್ನೇ ಪರಿಶೀಲನೆಮಾಡಿ ನೋಡಿದರೆ ತಮಗೆ ತುಂಬ ತುರುತಾಗಿ ಮೊದಲು ಎಲ್ಲಿಗೆ ಇದರ ಆವಶ್ಯಕತೆಯಿದೆ ಎಂದು ಹುಡುಕಿದರೆ ಅಂಥ ಸ್ಥಳಗಳಲ್ಲಿ ನಮ್ಮ ಸೀರ್ಯಾ ತಾಲ್ಲೂಕೇ ಮೊದಲನೆಯದಾಗಿರುತ್ತದೆ. ಈ ಎಲ್ಲ ಕಾರಣಗಳಿಂದಲೂ ತಾವು ನಮ್ಮ ಪ್ರದೇಶದ ರೈತರಿಗೆ ಆದಷ್ಟು ಬೇಗ ವಿದ್ಯುಚ್ಛಕ್ತಿ, ಪಂಪುಗಳನ್ನು ಒದಗಿಸಿಕೊಟ್ಟು ರೈತರನ್ನು ಉದ್ಧಾರಮಾಡುತ್ತೀರೆಂದು ನಂಬಿ ಸರ್ಕಾರದವರಲ್ಲಿ ಪ್ರಾರ್ಥನೆಮಾಡಿ ನಾನು ಈ ನಿರ್ಣಯವನ್ನು ಈಗ ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that immediate steps be taken for supply of electricity to wells for lift irrigation to rural areas in Sira Taluk."

(Sri B. V. Narayana Reddy rose.)

Mr. SPEAKER.—With the consent of the House I have adopted a procedure—the mover will speak and the

(MR. SPEAKER.)

Minister concerned will reply. If I give you a chance now, I will have to do so in the case of other resolutions also.

(The Hon'ble Member resumed his seat.)

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಸ್ವಾಮಿ, ಶಿರಾ ತಾಲ್ಲೂಕಿನಲ್ಲಿ ಅನೇಕ ಕಡೆ ಬಾವಿಗಳ ಆಳ ಬಹಳ ಹೆಚ್ಚಾಗಿರುತ್ತೆಂಬ ಅಂಶ ಸರ್ಕಾರದವರಿಗೂ ಗೊತ್ತಿದೆ. ಆ ತಾಲ್ಲೂಕಿನಲ್ಲಿ ಬಾವಿಗಳೂ ಸಹ ಹೆಚ್ಚು ಸಂಖ್ಯೆಯಲ್ಲಿರ ತಕ್ಕದ್ದೂ ಸರ್ಕಾರದವರಿಗೆ ಗೊತ್ತಿದೆ. ಆ ತಾಲ್ಲೂಕಿಗೆ ಹೆಚ್ಚಾಗಿ ಇರಿಗೇಷನ್ ಪಂಪ್‌ಸೆಟ್ಟುಗಳನ್ನೂ ಮತ್ತು ವಿದ್ಯುಚ್ಛಕ್ತಿಯನ್ನೂ ಒದಗಿಸತಕ್ಕದ್ದು ಅತ್ಯಾವಶ್ಯಕ ವೆಂಬುದನ್ನೂ ಸಹ ಸರ್ಕಾರದವರು ಸಂಪೂರ್ಣವಾಗಿ ಮನಗಂಡಿದ್ದಾರೆ. ಇದುವರೆಗಾಗಲೆ ಅಲ್ಲಿಗೆ ಅನೇಕ ಪಂಪ್‌ಸೆಟ್ಟುಗಳನ್ನು ಒದಗಿಸಲಾಗಿದ್ದು ಅಲ್ಲಿ 31 ಪಂಪ್ ಸೆಟ್ಟುಗಳು ಹಾಲಿ ಕೆಲಸಮಾಡುತ್ತಿವೆ. 134 ಪಂಪ್ ಸೆಟ್ಟುಗಳನ್ನು ಅಲ್ಲಿಗೆ ಹಾಕಿಸುವುದಕ್ಕೆ ಕೆಲಸವಾಗಲೇ ನಡೆಯುತ್ತಿದೆ. ಸುಮಾರು 81 ಪಂಪ್‌ಸೆಟ್ಟುಗಳನ್ನು ಹಾಕುವುದಕ್ಕೆ ಈಗಾಗಲೇ ಯೋಜನೆ ತಯಾರಾಗಿ ಆ ಇಲಾಖೆಯವರ ಪರಿಶೀಲನೆಯಲ್ಲಿದೆ. ಸರ್ಕಾರದವರು ತೀವ್ರಾಸಕ್ತಿಯಿಂದ ಈ ಸಮಸ್ಯೆಗಳನ್ನೆಲ್ಲಾ ಬಹಳ ಚುರುಕಾಗಿ ಪರಿಶೀಲಿಸುತ್ತಿದ್ದಾರೆ. ಅಲ್ಲಿನ ಅಧಿಕಾರಿ ಗಳು ಹೆಚ್ಚಿನ ನಿಗಾಕೊಟ್ಟು ಬೇಗ ಕೆಲಸ ನಡೆಸುವಂತೆ ಮಾಡಲು ಅವರಿಗೆ ಎಲ್ಲ ತಿಳಿವಳಿಕೆಗಳನ್ನು ಕೊಡ ಲಾಗಿರುತ್ತೆಂಬ ಭರವಸೆಯನ್ನೂ ಸಹ ನಾನೀಗ ಮಾನ್ಯ ಸದಸ್ಯರಿಗೆ ಕೊಡಬಲ್ಲೆ. ಆದರೆ ಕೆಲವು ಸಂದರ್ಭ ಗಳಲ್ಲಿ ಎಸ್ಟಿಮೇಟುಗಳು ಬೇಗ ಸ್ಯಾಂಕ್ಷನ್ ಆದರೂ ತಾವಾಗಿಯೇ ರೈತರು ಮುಂದೆ ಬರುತ್ತಿಲ್ಲ. ಮತ್ತೆ ಕೆಲವು ಸಂದರ್ಭಗಳಲ್ಲಿ ಸಾಮಾನುಗಳ ಸೌಕರ್ಯ ವಿರುವುದಿಲ್ಲ.. ಮುಚ್ಚಳಿಕೆ ಇತ್ಯಾದಿಗಳನ್ನು ಬರೆಸಿ ಕೊಳ್ಳಲು ಸ್ವಲ್ಪ ನಿಧಾನವಾಗುತ್ತದೆ. ಆದರೆ ಅಧಿಕಾರಿ ಗಳಿಂದ ಏನಾದರೂ ಅಲಸ್ಯವಾಗುತ್ತಿದೆಯೆಂಬ ಸಂದರ್ಭಗಳಿದ್ದರೆ, ಅಂಥದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸಲಾಗುತ್ತದೆ. ಈ ಭರ ವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯ ವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿ ದ್ದೇನೆ.

Sri B. N. RAME GOWDA.—I seek the leave of the House to withdraw my Resolution.

The Resolution was, by leave, withdrawn.

No. 10.—Remission of interest levied on water rate in respect of Atchkats under Marconahalli Reservoir.

* ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರ್ ದುರ್ಗ).—ಸ್ವಾಮಿ, ನನ್ನ ನಿರ್ಣಯವು ಈ ರೀತಿ ಯಾಗಿದೆ—ಅದನ್ನು ಮಂಡಿಸುತ್ತೇನೆ.

"ಕುಣಿಗಲ್ ತಾಲ್ಲೂಕು ಮಾರ್ಕೋನಹಳ್ಳಿ ಜಲಾಶಯದ ಅಚ್ಚುಕಟ್ಟಿಗೆ ಸೇರಿದ ರೈತರಿಂದ ವಸೂಲಾಗುತ್ತಿರುವ ನೀರು ಸರದಿ ತೆರಿಗೆಯ (ವಾಟರ್‌ರೇಟ್) ಮೇಲೆ ವಿಧಾಯಕವಾಗಿರುವ ಬಡ್ಡಿಯನ್ನು ವಜಾಮಾಡಬೇಕೆಂದು ಈ ಸಭೆ ಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಈ ಪ್ರಶ್ನೆಯು ಬಹಳ ದಿವಸಗಳಿಂದಲೂ ಸರ್ಕಾರದವರ ಮುಂದಿದೆ. ಸುಮಾರು ಇಲ್ಲಿಗೆ 12 ವರ್ಷಗಳಿಂದ ಮಾರ್ಕೋನಹಳ್ಳಿ ಜಲಾಶಯದ ಹಿಂದೆ ಲಕ್ಷಾಂತರ ರೂಪಾಯಿಗಳ ನೀರು ಸರದಿಯ ಮೊಬ ಲಗು ಬಾಕಿಯಾಗಿ ನಿಂತುಹೋಗಿದೆ. ಬಾಕೀದಾರರನ್ನು ಬಾಕಿಕೊಡಬೇಕೆಂದು ಸರ್ಕಾರದವರು ಒತ್ತಾಯ ಪಡಿಸುತ್ತಲೇ ಬಂದಿದ್ದಾರೆ. ಆದರೆ ಅಲ್ಲಿಯ ರೈತರು ತಮ್ಮ ಕೈಲಾದ ಮಟ್ಟಿಗೂ ಆ ಬಾಕಿಯನ್ನು ಕೊಡು ತ್ತಲೇ ಬಂದಿದ್ದಾರೆ. ಆದರೆ ಆ ರೈತರೆಲ್ಲರೂ ಸರ್ಕಾರ ದವರನ್ನು ಬಹಳ ಒತ್ತಾಯಮಾಡಿ ಅವರು ಕೊಡ ಬೇಕಾಗಿರತಕ್ಕ ಬಾಕಿ ಮೊಬಲಗಿನ ಮೇಲೆ ವಿಧಿಸಿರುವ ಬಡ್ಡಿಯನ್ನು ದಯವಿಟ್ಟು ವಜಾಮಾಡಿ, ನಾವು ಸರ್ಕಾ ರಕ್ಕೆ ವಾಪತಿ ಮಾಡಬೇಕಾದ ಬಾಕಿಯನ್ನೆಲ್ಲಾ ಕ್ರಮ ವಾಗಿ ತೀರುವಳಿ ಮಾಡಿಕೊಂಡು ಬರುತ್ತೇವೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತಲೇ ಬಂದಿ ದ್ದಾರೆ. ಈಗ ಮಾನ್ಯ ಅಧ್ಯಕ್ಷರಾಗಿರತಕ್ಕ ತಾವು, ಮಂತ್ರಿಗಳಾಗಿದ್ದ ಕಾಲದಲ್ಲಿ ಅದನ್ನು ಪರಿಶೀಲನೆ ಮಾಡುವುದಾಗಿ ಅಪ್ಪಣೆ ಕೊಡಿಸಿದ್ದಿರಿ. ಆದರೆ ಆ ವಿಚಾರ ಇದುವರೆಗೂ ಇನ್ನೂ ಫೈಸಲಾಗದೆ ಹಾಗೆಯೇ ನಿಂತಿರುತ್ತದೆ.

Mr. SPEAKER.—Reduction in the rate of contribution from Rs. 175 to Rs. 125 has been sanctioned.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಕಾಂಟ್ರಿ ಬ್ಯೂಷನ್ ವಿಷಯ ಇಲ್ಲಿ ಈಗ ಈ ನಿರ್ಣಯದಲ್ಲಿ ಇಲ್ಲದೆ ಇದ್ದರೂ ಪುನಃ ಈ ವಿಚಾರವಾಗಿ ಒಂದೆರಡಂಶ ವನ್ನು ತಿಳಿಸುತ್ತೇನೆ. ಪ್ರಜಾಪ್ರಭುತ್ವ ಸರ್ಕಾರವು 1947ರಲ್ಲಿ ಸ್ಥಾಪನೆಯಾದಾಗ ಆ ರೈತರೆಲ್ಲರೂ ಸರ್ಕಾರಕ್ಕೆ ಅರ್ಜಿಯೊಂದನ್ನು ಸಲ್ಲಿಸಿ 175 ರೂಪಾಯಿಗಳಿರತಕ್ಕ ಕಾಂಟ್ರಿಬ್ಯೂಷನ್ ಮೊಬಲಗನ್ನು 125ರೂಪಾಯಿಗಳಿಗೆ ಇಳಿಸಿಕೊಡಬೇಕೆಂದು ಪ್ರಾರ್ಥಿಸಿ ಕೊಂಡಿದ್ದರು. ಆ ಬಗ್ಗೆ ತಾವೇನೋ ಅವರಿಗೆ ಬಹಳ ಉಪಕಾರ ಆಗ ಮಾಡಿದಿರಿ. ಅದಕ್ಕಾಗಿ ಅವರೆಲ್ಲರೂ ತಮ್ಮನ್ನು ಸ್ಮರಿಸುತ್ತಿದ್ದಾರೆ. ಹಾಗೆ ತಾವು ನಮಗೆ ಮಾಡಿರತಕ್ಕಂಥ ಉಪಕಾರವನ್ನು ನಾವೆಂದಿಗೂ ಮರೆಯುವುದಿಲ್ಲ. ಅದಕ್ಕಾಗಿ ನಾವೆಲ್ಲರೂ ತಮಗೆ ಕೃತಜ್ಞರಾಗಿದ್ದೇವೆ ಆದರೆ ಅದೇ ರೀತಿ ಸರ್ಕಾರ ದವರು ಇದನ್ನೂ ಸ್ವಲ್ಪ ಸಾವಧಾನದಿಂದ ಆಲೋಚನೆ ಮಾಡಬೇಕಾದಂಥ ವಿಷಯ ಇದು. ಸಾಧಾರಣ ವಾಗಿ ರೈತರೇ ಆಗಲಿ ಅಥವಾ ಬೇರೆ ಯಾರೇ ಆಗಲಿ ಕೊಟ್ಟ ಸಾಲಕ್ಕೆ ತಗಾದೆ ಕೊಡದೆ ಹೋದರೆ ಆ ಸಾಲ ವಸೂಲಾಗುವುದಿಲ್ಲವೆಂಬ ಅಂಶ ನಮಗೆಲ್ಲ ರಿಗೂ ಗೊತ್ತಿರುವಂಥ ವಿಚಾರವೇ ಆಗಿದೆ. ಹೀಗೆ ಸರ್ಕಾರದವರ ಒತ್ತಾಯ ಕೊಂಚ ಸಡಿಲವಾದುದ ರಿಂದಲೂ ಮತ್ತು, ದಿನಸಿಧಾರಣೆಗಳು ಬಿದ್ದುಹೋದದ್ದ ರಿಂದಲೂ, ಈ ವಾಟರ್‌ರೇಟ್ ಬಾಕಿ ನಿಂತುಕೊಳ್ಳಲು ಕಾರಣವಾಯಿತು. ಹೀಗೆ ಜನರಿಗೆ ದುಡ್ಡಿನ ವರಮಾನ ಮತ್ತು ಹಣ ಸಂಪಾದನೆ ಶಕ್ತಿ ಕುಗ್ಗಿಹೋದುದರಿಂದ ಈ ಮೊಬಲಗು ಬಾಕಿ ನಿಲ್ಲಲು ಕಾರಣವಾಯಿತು.

ಆದರೆ ಇದರ ಜೊತೆಗೆ ಇನ್ನೂ ಹಲವಾರು ಕಾರಣ ಗಳಿರುತ್ತವೆ. ಆ ಅಚ್ಚುಕಟ್ಟಿನಲ್ಲಿ ಎಲ್ಲ ಜಮೀನುಗಳಿಗೂ

ಸರಿಯಾಗಿ ಇನ್ನೂ ಕಾಲುವೆಗಳನ್ನೇ ಮಾಡಿರುವುದಿಲ್ಲ. ಕೆಲವು ಜಮೀನುಗಳಲ್ಲಿ ರಸ್ತೆ ಮತ್ತು ಕಾಲುವೆಗಳನ್ನು ಮಾಡಲು ಅನೇಕ ಜಮೀನುಗಳನ್ನು ಅಕ್ವಯರ್ ಮಾಡಿಕೊಳ್ಳಲಾಗಿದೆ. ಯಾವ ಯಾವ ರೈತನಿಗೆ ಖಚಿತವಾಗಿ ಎಷ್ಟೆಷ್ಟು ತರೀಜಮೀನಿರುತ್ತದೆಯೆಂಬ ವಿಚಾರ ಯಾರೊಬ್ಬರಿಗೂ ಸರಿಯಾಗಿ ಇಲ್ಲಿಯವರೆಗೂ ಗೊತ್ತೇ ಇಲ್ಲ. ಹಾಗೆ ಎಲ್ಲಾ ಕಳೆದುಹೋಗಿ ಉಳಿಯತಕ್ಕ ಜಮೀನೆಷ್ಟು, ಅದರ ಬಗ್ಗೆ ಎಷ್ಟು ಕಂದಾಯ ವಸೂಲಿಯಾಗಿದೆ, ಎಷ್ಟು ಕಾಂಟ್ರಿಬ್ಯೂಷನ್ ಮೊಬಲಗು ವಸೂಲಾಗಿದೆ ಮತ್ತು ಎಷ್ಟು ನೀರು ಸರದಿ ಮೊಬಲಗು ವಸೂಲಾಗಿದೆ, ಇನ್ನೆಷ್ಟು ಬಾಕಿ ನಿಂತಿರುತ್ತದೆ ಎಂಬ ತಪಶೀಲ್ ವಿವರಗಳಿಗೆಲ್ಲಾ ಅನುಕೂಲವಾದಂಥ ಒಂದು ಡಿ.ಸಿ.ಬಿ. ಲೆಕ್ಕಗಳ ಪಟ್ಟಿಯೊಂದನ್ನು ಇಲ್ಲಿಯವರೆಗೂ ತಯಾರಿಸಿಟ್ಟಿಲ್ಲ. ವಿಶ್ವೇಶ್ವರಯ್ಯನಾಲಾ ಏರಿಯಾದಲ್ಲಿ ಕೂಡ ಇದೇ ರೀತಿ ಮಾಡಲಾಗಿದೆ. ಇತ್ತೀಚೆಗೇನೋ ಅಲ್ಲಿಗೆ ವಿಶೇಷ ಸಿಬ್ಬಂದಿಯನ್ನು ಕೊಟ್ಟು ಲೆಕ್ಕಗಳನ್ನು ತನಿಖೆ ಮಾಡಿಸುತ್ತಾ ಇದ್ದಾರೆ. ಆದರೆ ನಮ್ಮ ಪ್ರದೇಶದಲ್ಲಿ ಕೆಲವು ರೈತರಿಂದ ಎಲ್ಲ ಬಾಕಿಗಳೂ ವಸೂಲಾಗಿವೆ, ಕೆಲವರಿಂದ ವಸೂಲಾಗಬೇಕಾದದ್ದೂ ಇದೆ, ಇನ್ನು ಕೆಲವರಿಂದ ಈ ಬಡ್ಡಿ ಮೊದಲಗನ್ನೂ ಸಹ ವಸೂಲ್ಮಾಡಿದ್ದಾರೆ. ಮತ್ತೆ ಕೆಲವು ಕಡೆ ಈ ಬಡ್ಡಿಯನ್ನು ವಸೂಲ್ಮಾಡದೆ ಹಾಗೆ ಬರಿ ವಾಟರ್‌ರೇಟನ್ನೇ ವಸೂಲ್ಮಾಡಿದ್ದಾರೆ. ಹೀಗೆಲ್ಲಾ ಆಗಿ ಯಾರು ಸರಿಯಾಗಿ ಪಾವತಿ ಮಾಡಿದ್ದಾರೆ, ಯಾರು ಮಾಡಿಲ್ಲ ಎಂಬುದೇ ತಿಳಿಯದಂತಾಗಿದೆ. ಈ ನಾನಾ ಕಾರಣಗಳಿಂದ ಕೊಡುವುದಕ್ಕೆ ರೈತರಿಗೆ ಬಹಳ ತೊಂದರೆಯಾಗಿದೆ.

ನಮ್ಮ ರೆವೆನ್ಯೂ ಮಂತ್ರಿಗಳು ಮೊನ್ನೆ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ, ವಾಟರ್‌ರೇಟಿನ ಬಾಕಿ ಕೊಡುವುದಾದರೆ ಬಡ್ಡಿ ವಸೂಲಿ ಮಾಡುವುದನ್ನು ನಿಲ್ಲಿಸುತ್ತೇವೆ ಎಂದು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲಿಸುತ್ತೇವೆ ಎಂದು ನಾನು ಹೇಳಿದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಾಕಿಯನ್ನು ಕೊಡುವುದಾದರೂ ಒಂದೇ ವರ್ಷದಲ್ಲಿ ಕೊಡುವುದು ಕಷ್ಟ. ಲಕ್ಷಾಂತರ ರೂಪಾಯಿಗಳ ಬಾಕಿಯಿರುವುದರಿಂದ ಮೂರು ವರ್ಷಗಳ ಅವಧಿಯನ್ನಾದರೂ ಕೊಟ್ಟರೆ ರೈತರು ಬಾಕಿಯನ್ನೆಲ್ಲಾ ಕೊಡುವುದಕ್ಕೆ ಸಿದ್ಧರಾಗಿದ್ದಾರೆಂದು ಹೇಳಬಲ್ಲೆ. ಆ ರೀತಿ ಅವಕಾಶ ಕೊಟ್ಟು ಸಹಾಯಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ, 6 ಲಕ್ಷ ರೂಪಾಯಿಗಳ ಬಾಕಿ ಇರುವಲ್ಲಿ ವಾಟರ್‌ರೇಟಿಗೆ ಬಡ್ಡಿ ಬೆಳೆಯುತ್ತಾ ಹೋದರೆ, ಅವರು ಕೊಡುವ ಹಣವೆಲ್ಲಾ ಬಡ್ಡಿಗೇ ವಜಾ ಆಗುವ ಪರಿಸ್ಥಿತಿ ಬರುತ್ತದೆ.

ಈ ಕಾರಣ, ಬಡ್ಡಿಯಿಲ್ಲದೆ ವಾಟರ್‌ರೇಟು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಸರ್ಕಾರದವರು ದಯವಿಟ್ಟು ಇದಕ್ಕೆ ನಿಗಾಕೊಡಬೇಕೆಂದು ಹೇಳುತ್ತೇನೆ.

Mr. SPEAKER.—Resolution moved :

"That this Assembly is of opinion that the interest levied on the water rate that is being collected from the atchkatdars under the Marconahalli Reservoir in Kunigal Taluk be abolished."

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ನಿರ್ಣಯದಲ್ಲಿ ಅಡಕವಾಗಿರತಕ್ಕ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಹಿಂದಿನಿಂದಲೂ ಮನವಿಗಳು ಬರುತ್ತಲೇ ಇವೆ. ಸುಮಾರು,—ನನ್ನ ನೆನಪು ಸರಿಯಾಗಿದ್ದರೆ—ಮಾರ್ಕೋನಹಳ್ಳಿ ಅಚ್ಚುಕಟ್ಟಿನಲ್ಲಿ 8 ಲಕ್ಷ ರೂಪಾಯಿಗಳವರೆಗೂ ಬಾಕಿಬರಬೇಕಾಗಿದೆಯೆಂದು ನನ್ನ ಭಾವನೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಮೂರು ವರ್ಷಗಳಾದರೂ ಕಾಲಕೊಟ್ಟು ಅಲ್ಲಿಯವರೆಗೆ ಬಡ್ಡಿ ಮಾಫಿಮಾಡಬೇಕೆಂದು ಅವರ ಭಾಷಣದಲ್ಲಿ ತಿಳಿಸಿದ್ದಾರೆ. ಒಂದು ಅಂಶವನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕು. ಅವರು ಹೇಳಿದಂತೆ ಸಲೀಸಾಗಿ ಕೊಟ್ಟುಕೊಂಡು ಬಂದರೆ ಅವರಿಗೇನಾದರೂ ರಿಯಾಯಿತಿಯನ್ನು ಕೊಡುವುದಕ್ಕೆ ಸಾಧ್ಯವೇ ಎಂಬುದು ಸ್ವಲ್ಪ ಯೋಚನೆಮಾಡಿ ಹೇಳಬೇಕಾದ ಅಂಶ. ಏಕೆಂದರೆ ಇದರಿಂದ defaulter ಗಳಿಗೆ ಒಂದು ರೀತಿಯಲ್ಲಿ ಉತ್ತೇಜನ ಕೊಟ್ಟಂತಾಗುವುದೆಂದು ನನ್ನ ಭಾವನೆ. ಆದರೂ ಸರ್ಕಾರದವರು ಒಂದು ಸಹಾನುಭೂತಿಯ ಭಾವನೆಯಿಂದ ಒಂದು ವರ್ಷದೊಳಗಾಗಿ ಎಲ್ಲಾ ಬಾಕಿಗಳನ್ನೂ ಕೊಟ್ಟರೆ ಬಡ್ಡಿ ರಿಯಾಯಿತಿ ಮಾಡುವುದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಹಿಂದೆ ಒಂದು ವಿಧದಲ್ಲಿ ಹೇಳಿದಾರೆ. ಪುನಃ ಅದನ್ನೇ ಈಗ ಅವರು ಪ್ರಸ್ತಾಪಿಸಿದ್ದಾರೆ. ಆದರೆ ಈ ವಿಷಯ ಹಣಕಾಸಿನ ಸಚಿವರಿಗೆ ಸಂಬಂಧಪಟ್ಟಿರುವುದರಿಂದ, ಬಡ್ಡಿಯ ಅಂಶ ಎಷ್ಟು ಲಕ್ಷ ರೂಪಾಯಿಗಳಾಗುತ್ತದೆಂದು ಗೊತ್ತುಮಾಡಿಕೊಳ್ಳದೆ ತಕ್ಷಣ ಉತ್ತರ ಹೇಳುವುದಕ್ಕಾಗುವುದಿಲ್ಲ. ಸದ್ಯಕ್ಕೆ ಇಷ್ಟು ಹೇಳಬಹುದು. ಜಾಗ್ರತೆ ಒಂದು ವರ್ಷದೊಳಗಾಗಿ ಕೊಟ್ಟರೆ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವವರಾಗಿದ್ದಾರೆ. ಮೂರು ವರ್ಷ ಕಾಲಾವಧಿ ಕೊಡುವುದನ್ನು ಯೋಚನೆ ಮಾಡಿ ಹೇಳಬೇಕಾಗುತ್ತದೆ. ಅಂತೂ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಬಹುದು.

Sri N. HUCHMASTHY GOWDA.—I seek leave to wthdraw the Resolution.

The Resolution was, by leave, withdrawn.

No. 12.—Opening an Occupational Institute in Tumkur.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲ್).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ.—

"This Assembly is of the opinion that an Occupational Institute be opened at Tumkur from the year 1953-54 itself in addition to the existing first grade college."

ಅದನ್ನು ಮಂಡಿಸುತ್ತೇನೆ.

ಅಧ್ಯಕ್ಷರೇ, ಈ ನಿರ್ಣಯದಲ್ಲಿ ಅಡಕವಾಗಿರತಕ್ಕ ವಿಷಯದಲ್ಲಿ ಅದರ ಆವಶ್ಯಕತೆ ಎಷ್ಟಿದೆಯೆಂಬುದನ್ನು ನಾನು ಒತ್ತಿಹೇಳಬೇಕಾಗಿಲ್ಲ. ಸಂಸ್ಥಾನದಲ್ಲಿ ಈಗ 8-9

(ಶ್ರೀ ಟಿ. ಎಮ್. ಮೂಡಲಗಿರಿಗೌಡ.)

ಔದ್ಯೋಗಿಕ ಶಾಲೆಗಳಿವೆ ಬೆಂಗಳೂರಿನಲ್ಲಿರುವ ಇಂಜಿನಿಯರಿಂಗ್ ಕಾಲೇಜು, ಚಾಮರಾಜೇಂದ್ರ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್, ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಇವುಗಳ ಜೊತೆಗೆ ದಾವಣಗೆರೆ, ಕೋಲಾರ, ಹಾಸನ, ಶಿವಮೊಗ್ಗ ಈ ಕಡೆಗಳೆಲ್ಲಾ ಔದ್ಯೋಗಿಕ ಶಾಲೆಗಳಿವೆ. ಈಗೇನೋ ಸಾಮಾನ್ಯವಾಗಿ ಎಲ್ಲ ಜಿಲ್ಲೆಗಳಲ್ಲೂ ಇಂಟರ್‌ಮೀಡಿಯಟ್ ಕಾಲೇಜುಗಳು ಹಾಗೂ ಡಿಗ್ರಿ ಕೋರ್ಸುಗಳು ಇದ್ದರೂ ಕೂಡ ಎಸ್. ಎಸ್. ಎಲ್. ಸಿ. ಯಿಂದ ಪಾಸಾದ ವಿದ್ಯಾರ್ಥಿಗಳಲ್ಲಿ ಎಷ್ಟು ಜನ ಇಂಟರ್‌ಮೀಡಿಯಟ್ ಮತ್ತು ಇತರ ಡಿಗ್ರಿ ಕೋರ್ಸುಗಳಿಗೆ ಹೋಗತಕ್ಕ ಯೋಗ್ಯತೆಯುಳ್ಳವರಾಗಿದ್ದಾರೆ! ಹಾಗೂ ಅನುಕೂಲತೆಯುಳ್ಳವರಾಗಿದ್ದಾರೆ ಎಂಬುದನ್ನು ಸರ್ಕಾರದವರು ಬಹಳ ತೀವ್ರವಾಗಿ ಆಲೋಚನೆಮಾಡಬೇಕಾಗಿದೆ. ಇವೊತ್ತಿನದಿವಸ ನಾವು ಜನಗಳಿಗೆ ಜೀವನವನ್ನು ಒದಗಿಸಿಕೊಡಬೇಕಾದ ಸಂದರ್ಭ ಒದಗಿರುವಾಗ, ಯಾವ ರೀತಿಯಲ್ಲಿ ನಾವು ಅವರಿಗೆ ಜೀವನಮಾರ್ಗವನ್ನು ಕಲ್ಪಿಸಿಕೊಡಬೇಕು, ಅವರಿಗೆ ಯಾವ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬುದನ್ನು ಯೋಚನೆಮಾಡುವಾಗ ಔದ್ಯೋಗಿಕ ಶಾಲೆಗಳನ್ನು ತೆರೆಯುವುದು ಎಷ್ಟು ಪ್ರಾಮುಖ್ಯ ಮತ್ತು ಆವಶ್ಯಕವೆಂಬುದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಈಗ ಸುಮಾರು ವರ್ಷೇ ವರ್ಷೇ ಸರಾಸರಿ 30-32 ಸಾವಿರ ಜನರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ. ಅವರಲ್ಲಿ $\frac{1}{3}$ ಭಾಗ ತೇರ್ಗಡೆಯಾಗುತ್ತಾರೆಂದರೂ, ಹೀಗೆ ತೇರ್ಗಡೆಯಾದವರಲ್ಲಿಯೂ 5% ನಷ್ಟು ಜನರಿಗೂ ಕೂಡ ಕಾಲೇಜಿಗೆ ಹೋಗುವುದಕ್ಕೆ ಅನುಕೂಲಗಳಿರುವುದಿಲ್ಲ ಮತ್ತು ಅದಕ್ಕೆ ಸರಿಯಾದ ಸನ್ನಿವೇಶವೂ ದೊರೆಯುವುದಿಲ್ಲ. ಹೀಗಿರುವಾಗ ಬಾಕಿ ವಿದ್ಯಾರ್ಥಿಗಳ ಗತಿಯೇನು? ಅವರು ತಮ್ಮ ಸ್ವಸ್ಥಾನಗಳಿಗೆ ಹೋದರೆ ಅಲ್ಲಿ ಅವರಿಗೆ ಜೀವನಕ್ಕಿರುವ ಅನುಕೂಲತೆಗಳಾದರೂ ಏನೂ? ಈಗಾಗಲೇ ಎಷ್ಟೋ ಕಡೆ ನಾಲ್ಕು ಎಕರೆ ಜಮೀನಿದ್ದರೆ, ಅದನ್ನು ಒಂದೊಂದು ಎಕರೆಯಾಗಿ ಹಂಚಿಕೊಂಡು ತುಂಡು ತುಂಡುಗಳಾಗಿ ವಿಂಗಡಿಸಿಕೊಂಡಿರುತ್ತಾರೆ. ಇಂಥ ಸಂದರ್ಭಗಳಲ್ಲಿ ದುಡಿಯತಕ್ಕ ಮಕ್ಕಳುಗಳು ಕೂಡ ಮನೆಗೆ ಬಂದು ಸೇರಿದರೆ ಅವರು ಯಾವ ರೀತಿ ಜೀವನಮಾರ್ಗವನ್ನವಲಂಬಿಸಹಕು; ಅವರ ಸ್ಥಿತಿಗತಿಗಳೇನು ಎಂಬುದನ್ನು ನೋಡಬೇಕು. ಹೀಗಾಗಿ ಅವರಿಗೆ ತಮ್ಮ ಊರಿಗೆ ಹೋದರ ಕೆಲಸವಿರುವುದಿಲ್ಲ ಕಾಲೇಜಿಗೆ ಹೋಗುವುದಕ್ಕೆ ಯೋಗ್ಯತೆಯಿರುವುದಿಲ್ಲ. ಇಂಥ ಸಂದರ್ಭ ಒದಗಿರುವ ಕಾಲದಲ್ಲಿ ಸರ್ಕಾರದವರು ಈ ರೀತಿಯಾಗಿ ಔದ್ಯೋಗಿಕ ಶಾಲೆಗಳನ್ನು ತೆರೆದು ಅವರುಗಳು ತಮ್ಮ ಸ್ವಶಕ್ತಿಯಿಂದ ಜೀವನ ಕಲ್ಪಿಸಿಕೊಳ್ಳುವುದಕ್ಕೆ ಒಂದು ಮಾರ್ಗ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ನಮ್ಮ ತುಮಕೂರು ಜಿಲ್ಲೆಯವರಿಗೆ ಇತ್ತ ಬೆಂಗಳೂರಿಗೆ ಹೋಗಬೇಕು ಇಲ್ಲವೇ ಅತ್ತ ದಾವಣಗೆರೆಗೆ ಹೋಗಬೇಕು. ತುಮಕೂರಿನವರು ಬೆಂಗಳೂರಿಗೆ ಬಂದು ಇಲ್ಲ ಇಂಜಿನಿಯರಿಂಗ್ ಸ್ಕೂಲಿನಲ್ಲಾಗಲಿ, ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟಿನಲ್ಲಾಗಲಿ ಒಂದು ಸ್ಥಾನ ಪಡೆದು ವಿದ್ಯಾಭ್ಯಾಸಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆ; ಅದರಲ್ಲೂ ಈಗ ಬೆಂಗಳೂರಿನಲ್ಲಿರತಕ್ಕ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸ್ಥಳವಸತಿ ಅವನಿಗೆಲ್ಲಿ ಸುಲಭವಾಗಿ ಸಿಕ್ಕುತ್ತದೆ! ಹೀಗಿದ್ದು ವಿದ್ಯಾರ್ಥಿಯು ಯಾವುದೋ ಒಂದು ಆಶೆಯಿಂದ ಮೊದಲು ಒಂದು ಶಾಲೆಯಲ್ಲಿ ಸೇರಿದರೂ ಬಂದ 6-8 ತಿಂಗಳಲ್ಲೇ ವಿದ್ಯಾಭ್ಯಾಸಮಾಡುವುದಕ್ಕೆ ಸಾಧ್ಯವಿಲ್ಲದೆ ವಾಪಸು ಹೋಗಬೇಕಾದ ಪರಿಸ್ಥಿತಿ ಅನೇಕ ಸಂದರ್ಭಗಳಲ್ಲಿ ಇರುತ್ತದೆ. ಆದ್ದರಿಂದ ಎಲ್ಲಾ ಜಿಲ್ಲೆಯ ಹೆಡ್‌ಕ್ವಾರ್ಟರುಗಳಲ್ಲಿಯೂ ಔದ್ಯೋಗಿಕ ಶಾಲೆಗಳನ್ನು ತೆರೆಯುವುದು ಅವಶ್ಯಕ. ಯೋಗ್ಯತೆಯಿರುವ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲಿ. ಹಾಗೆ ಹೋಗಲು ಸಾಧ್ಯವಿಲ್ಲದೆ ಇರುವವರಿಗೆ ಜೀವನ ನಡೆಸುವ ಶಕ್ತಿಯನ್ನು ಬೇರೆ ರೀತಿಯಲ್ಲಿ ಕೊಡಬೇಕಾದದ್ದು ನಮ್ಮ ಕರ್ತವ್ಯ. ಹೀಗಿರುವಾಗ ತುಮಕೂರಿನಂತಹ ಪಟ್ಟಣದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಸನ್ನಿವೇಶ ಬಹಳ ಚೆನ್ನಾಗಿದೆ. ಅಂಥ ಸ್ಥಳದಲ್ಲಿ ಇದುವರೆಗೂ ಸರ್ಕಾರದವರು ಔದ್ಯೋಗಿಕ ಶಾಲೆಯೊಂದನ್ನು ತೆರೆಯುವುದಕ್ಕೆ ಏಕೆ ಯೋಚನೆ ಮಾಡಲಿಲ್ಲವೋ ನನಗಂತೂ ಅರ್ಥವಾಗುವುದಿಲ್ಲ. ಇದರ ಆವಶ್ಯಕತೆ ಬಹಳವಾಗಿದೆ ತುಮಕೂರಿನಲ್ಲಿ ಈಗೊಂದು ಫಸ್ಟ್‌ಗ್ರೇಡ್ ಕಾಲೇಜಿದೆ. ಈ ವರ್ಷ 400-500 ಮಂದಿ ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ. ಅವರಲ್ಲಿ 30% ನಷ್ಟು ಪಾಸಾಗುತ್ತಾರೆಂದಿಟ್ಟುಕೊಂಡರೂ, ಉಳಿದವರು ಹಾಗೂ ಎಸ್. ಎಸ್. ಎಲ್. ಸಿ ಯಲ್ಲಿ ಪಾಸಾಗುವ ಅನೇಕ ಮಂದಿ ಬಡ ವಿದ್ಯಾರ್ಥಿಗಳು ಮುಂದೆ ವಿದ್ಯಾಭ್ಯಾಸಮಾಡಲು ದಾರಿ ಕಾಣದೆ ವಿದ್ಯಾಭ್ಯಾಸವನ್ನು ಅಲ್ಲಿಗೇ ಕೈಬಿಡಬೇಕಾಗುತ್ತದೆ. ಒಂದು ವೇಳೆ ಅವರೆಲ್ಲರೂ ಕಾಲೇಜಿಗೇ ಹೋದರೆಂದರೂ ಮುಂದೇನು ಅವರು ಮಾಡಬೇಕೆಂಬುದನ್ನು ನೀವೇ ಯೋಚನೆ ಮಾಡಬೇಕಾಗಿಬರುತ್ತದೆ. ಈ ದೃಷ್ಟಿಯಿಂದಲೂ ವೃತ್ತಿ ಶಿಕ್ಷಣಶಾಲೆಗಳಿಗೆ ಹೆಚ್ಚಿನ ಹಣವನ್ನು ಕೊಟ್ಟು ಈಗಿನಿಂದಲೇ ಪ್ರೋತ್ಸಾಹಕೊಡುವುದರಿಂದ ಉದ್ಯೋಗದ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ. ಈ ವಿಚಾರದಲ್ಲಿ ತುಮಕೂರಿನಲ್ಲಿ ಎಷ್ಟು ಅವಶ್ಯಕತೆಯಿದೆ ಯೆಂಬುದನ್ನು ಸರ್ಕಾರದವರು ಅರಿತಿದ್ದಾರೆ. ಆದ್ದರಿಂದಲೇ ಈ ಸಾಲಿನಿಂದಲೇ ತುಮಕೂರಿನಲ್ಲಿ ಪ್ರಾರಂಭಮಾಡಬೇಕೆಂದು ಈ ನಿರ್ಣಯದಲ್ಲಿ ಹೇಳಿದೆ. ಸರ್ಕಾರದವರು ಮನಸ್ಸು ಮಾಡಿದರೆ ಇದು ಅಷ್ಟು ಕಷ್ಟವಾಗಲಾರದು. ಆದ್ದರಿಂದ ಸರ್ಕಾರದವರು ನಮಗೆ ಭರವಸೆಯನ್ನು ಕೊಡಬೇಕು. ಬಹಳ ದಿವಸಗಳಿಂದ ತುಮಕೂರಿನವರು ತಮ್ಮನ್ನು ಕೇಳುತ್ತಿದ್ದಾರೆ. ಇದುವರೆಗೂ ನೆರವೇರಿಲ್ಲ. ಈಗ ನೆರವೇರಿಸಬಹುದಾದ ಸನ್ನಿವೇಶಗಳು ಬಂದಿದೆ. ಸರ್ಕಾರದವರು ಸಹಾನುಭೂತಿಯಿಂದ ಇದನ್ನು ಯೋಚನೆ ಮಾಡಬೇಕೆಂದು ಹೇಳಿ ಸರ್ಕಾರದವರನ್ನು ಒತ್ತಾಯಮಾಡುತ್ತೇನೆ.

Mr. SPEAKER.—Resolution moved :

"That this Assembly is of the opinion that an Occupational Institute be opened at Tumkur from the year 1953-54 itself in addition to the existing first grade colleges."

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ರಾಮ ಮತ್ತು ಶಾಖೆಗಳ ಮಂತ್ರಿಗಳು).—ಸಂಸ್ಥಾನದಲ್ಲಿ ಈಗಾಗಲೇ, 5 ವೃತ್ತಿ ಶಿಕ್ಷಣಶಾಲೆಗಳಿವೆ; ಬೆಂಗಳೂರಿನಲ್ಲಿ ಒಂದು, ದಾವಣಗೆರೆಯಲ್ಲಿ ಒಂದು, ಹಾಸನದಲ್ಲಿ ಒಂದು, ಚಿಂತಾಮಣಿಯಲ್ಲಿ ಒಂದು, ಭದ್ರಾವತಿಯಲ್ಲಿ ಒಂದು. ಇದೂ ಅಲ್ಲದೇ ಮೈಸೂರಿನಲ್ಲಿಯೂ ಒಂದು ಶಾಲೆಯನ್ನು ಪ್ರಾರಂಭಿಸಬೇಕೆಂದು ಮಾಡಿದ್ದೇವೆ. ಕಟ್ಟಡ ಕೂಡ ಪೂರೈಸುವುದರಲ್ಲಿದೆ.

ವೃತ್ತಿಶಿಕ್ಷಣ ಶಾಲೆಗಳನ್ನು ಜಾಸ್ತಿಮಾಡಬೇಕಾದದ್ದು ಅಗತ್ಯವೆಂದು ಒಪ್ಪುತ್ತೇನೆ. ಆದರೆ ಸರ್ಕಾರದವರು ಒಂದುಕಡೆ ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು, ಇನ್ನೊಂದು ಕಡೆ ಇವುಗಳಿಂದಾಗುವ ಪ್ರಯೋಜನವನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಭದ್ರಾವತಿಯಲ್ಲಿರುವ ಈ ಶಾಲೆಯ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಮೊದಲನೆಯ ವರ್ಷ ಎಲ್ಲರಿಗೂ ಅರ್ಜಿಹಾಕಿಕೊಳ್ಳಬೇಕೆಂದು ಗೆಜೆಟ್ಟಿನಲ್ಲಿ ಕರೆದಾಗ ಡಿಪ್ಲೊಮ ಭಾಗಕ್ಕೆ 25 ಸ್ಥಾನಗಳಿಗೂ ಸರ್ಟಿಫಿಕೇಟ್ ಶಾಲಾಭಾಗಕ್ಕೆ 25 ಸ್ಥಾನಗಳಿಗೂ ಅವಕಾಶಮಾಡಿತ್ತು. ಸರ್ಟಿಫಿಕೇಟ್ ಕೋರ್ಸ್ ಎಂದರೆ ಕೈಯಲ್ಲಿ ಕಷ್ಟಪಟ್ಟು ಕೆಲಸಮಾಡುವ ವೃತ್ತಿಯನ್ನು ಕಲಿಯತಕ್ಕವರು; ಡಿಪ್ಲೊಮಾ ಕೋರ್ಸ್ ಎಂದರೆ ಸರ್ಟಿಫಿಕೇಟ್ ತೆಗೆದುಕೊಂಡು ಸ್ಯೂಟ್ ಹಾಕಿಕೊಂಡು ಜೇಬಿನಲ್ಲಿ ಕೈಯಿಟ್ಟುಕೊಂಡು ಸೂಪರ್‌ವೈಸ್ ಮಾಡಿಕೊಂಡು ತಿರುಗುವವರು. ಅರ್ಜಿಗಳು ಬಂದಿದ್ದನ್ನು ನೋಡಿದ್ದರಲ್ಲಿ ಡಿಪ್ಲೊಮಾ ಕೋರ್ಸಿಗೆ 25 ಸ್ಥಾನಗಳಿಗೆ 300 ಅರ್ಜಿಗಳೂ, ಸರ್ಟಿಫಿಕೇಟ್ ಕೋರ್ಸಿಗೆ 25 ಸ್ಥಾನಗಳಿಗೆ 3 ಅರ್ಜಿಗಳೂ ಬಂದಿದ್ದುವು. ಇದನ್ನು ನೋಡಿ ಪುನಃ ಒಮ್ಮೆ ಗೆಜೆಟ್ಟಿನಲ್ಲಿ ಪ್ರಕಟಿಸಿ ಸರ್ಟಿಫಿಕೇಟ್ ಕೋರ್ಸಿನಲ್ಲಿ ತೇರ್ಗಡೆ ಹೊಂದಿದವರಿಗೆ ಸರ್ಕಾರಿ ಕಾರ್ಖಾನೆಗಳಲ್ಲಿ ಕೆಲಸಕೊಡುತ್ತೇವೆಂಬ ಭರವಸೆಯನ್ನೂ ಕೊಟ್ಟೆವು. ಆಗಲೂ ಮೂರು ಅರ್ಜಿಗಳಿಗಿಂತ ಜಾಸ್ತಿ ಬರಲಿಲ್ಲ. ಈರೀತಿ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಯಾರೂ ಬರುವುದಿಲ್ಲ. ಅದ್ದರಿಂದ ಜನರ ಮನೋಭಾವ ಬದಲಾವಣೆಯಾದ ಹೊರತು ನೀವು ಎಷ್ಟು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಷನ್‌ಗಳನ್ನು ಮಾಡಿದರೂ ಪ್ರಯೋಜನವಿಲ್ಲ. ಇವೊತ್ತಿಗೂ ಬೇಕಾದರೆ ಮಲೆನಾಡು ಪ್ರದೇಶಗಳಿಗೆ ಹೋಗುವುದಾದರೆ 25,000 ಜನರಿಗೆ ಕೆಲಸ ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ಆ ಕೆಲಸಗಳನ್ನು ಮಾಡುವುದಕ್ಕೆ ಜನರು ಸಿದ್ಧರಾಗಿಲ್ಲ. ರಸ್ತೆ ಕೆಲಸ, ಬಾವಿಯ ಕೆಲಸ ಮುಂತಾದುವು ಎಷ್ಟೋ ಇವೆ, ಆದರೆ ಅಂಥ ಕಷ್ಟದ ಕೆಲಸಗಳು ಜನರಿಗೆ ಬೇಕಿಲ್ಲ. ಅವರಿಗೆ ಯಾವ ಕೆಲಸಬೇಕೆಂದು ಹೇಳಿದರೆ, ಇಜಾರಹಾಕಿಕೊಂಡು, ಹ್ಯಾಟ್‌ಹಾಕಿಕೊಂಡು ಸೂಪರ್‌ವೈಜ್‌ಮಾಡುವ ಕೆಲಸ; ಅದಕ್ಕೆ ತಯಾರಾಗಿದ್ದಾರೆ. ಆದ್ದರಿಂದ ಸದ್ಯಕ್ಕೆ ಈಗಿರುವ ಶಾಲೆಗಳನ್ನೇ ಅಭಿವೃದ್ಧಿಪಡಿಸಿ ಅವುಗಳಿಂದ ಹೆಚ್ಚು ಪ್ರಯೋಜನ ದೇಶಕ್ಕೆ ಉಂಟಾಗುವಂತೆ ಮಾಡಬೇಕಾದದ್ದು ಅವಶ್ಯಕ ಕರ್ತವ್ಯ. ಆಮೇಲೆ ಅವಶ್ಯಕತೆಬಿದ್ದಾಗ ಮತ್ತು ಹಣಕಾಸಿನ ಪರಿಸ್ಥಿತಿ ಉತ್ತಮಗೊಂಡಾಗ ತುಮಕೂರು ಜಿಲ್ಲೆಯಲ್ಲೂ ಮತ್ತು ಮಿಕ್ಕ ಜಿಲ್ಲೆಗಳಲ್ಲೂ ವೃತ್ತಿಶಿಕ್ಷಣಶಾಲೆಗಳನ್ನು ತೆರೆಯುವುದನ್ನು ಯೋಚನೆ ಮಾಡಬಹುದು. ಅಲ್ಲದೆ ತುಮಕೂರಿನ ಮಟ್ಟಿಗೆ ಅದು ಬೆಂಗಳೂರಿಗೆ 40 ಮೈಲಿ ದೂರದಲ್ಲೇ ಇದೆ. ಅಲ್ಲದೆ ಅಲ್ಲಿಯೇ ಒಂದು ಫಸ್ಟ್‌ಗ್ರೇಡ್ ಕಾಲೇಜು ಕೂಡ ಇದೆ. ತುಮಕೂರಿನಿಂದ ಇಲ್ಲಿಗೆ ಬೆಂಗಳೂರಿಗೆ ಬರುವ ವಿದ್ಯಾರ್ಥಿಗಳಿಗೆ ಇಲ್ಲಿನ ಶಾಲೆಗಳಲ್ಲಿ ಓದುವುದಕ್ಕೆ ಅವಕಾಶವಿದೆ. ಸದ್ಯಕ್ಕೆ ಶಾಲೆಗಳನ್ನು ಜಾಸ್ತಿ ಮಾಡಲಿಕ್ಕೆ ಇರುವ ಮುಖ್ಯ ಆತಂಕವೆಂದರೆ ಹಣಕಾಸಿನ ಆತಂಕ. ಹಣಕಾಸಿನ ಪರಿಸ್ಥಿತಿ ಉತ್ತಮವಾದಾಗ ತಮ್ಮ ಪ್ರಶ್ನೆಯನ್ನು ನೋಡೋಣ. ಆದ್ದರಿಂದ ಈಗಿರತಕ್ಕ ಪರಿಸ್ಥಿತಿಯಲ್ಲಿ ತಮ್ಮ ಮನವಿಯನ್ನು ವಾಪಸುತೆಗೆದುಕೊಳ್ಳಬೇಕೆಂದು ಹೇಳುತ್ತೇನೆ—

Sri T. N. MUDALAGIRI GOWDA.—I seek the permission of the House to withdraw my Resolution.

The Resolution was, by leave, withdrawn.

Mr. SPEAKER.—The House will now rise for lunch and meet at 3-30.

The House adjourned for Lunch at Two Minutes past Three of the Clock and reassembled at Thirty Minutes past Three of the Clock.

[Mr. SPEAKER in the Chair.]

Resolution No. 13.—Appointment of a Scheduled Castes Commission in the State.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ ಅನುಸೂಚಿತ ಜಾತಿಗಳು).—

ಸ್ವಾಮಿ, ಅಧ್ಯಕ್ಷರೆ, ನನ್ನ ಈ ನಿರ್ಣಯವನ್ನು ಸಭೆಯ ಮುಂದಿಡಲು ಅಪ್ಪಣೆ ಬೇಡುತ್ತೇನೆ. ನಿರ್ಣಯ ಈ ರೀತಿ ಇದೆ:

"'ಷೆಡ್ಯೂಲ್ಡ್' ಪಂಗಡಗಳವರ ಸಮಸ್ಯೆಗಳನ್ನು ಪರಿಶೀಲಿಸಿ ಭಾರತದ ಸಂವಿಧಾನದ ಮೇರೆಗೆ ಅವಕಾಶ ಕೊಟ್ಟಿರುವ ಕಾಲಪರಿಮಿತಿಯಲ್ಲಿ ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಪರಿಣಾಮಕಾರಿಯಾದ ಮತ್ತು ಕಾರ್ಯತಃ ಸಾಧ್ಯವಾದ ಸಾಧನೋಪಾಯಗಳನ್ನು ಸಲಹೆ ಮಾಡುವುದಕ್ಕಾಗಿ ಮೈಸೂರು ಸಂಸ್ಥಾನದಲ್ಲಿ 'ಷೆಡ್ಯೂಲ್ಡ್' ಪಂಗಡಗಳವರ ಒಂದು 'ಕಮಿಷನ್' ಮಂಡಲಿಯನ್ನು ಏರ್ಪಡಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಈಗಾಗಲೇ ಸುಮಾರು ಹತ್ತಾರು ವರ್ಷಗಳಿಂದ ಹರಿಜನಾಭಿವೃದ್ಧಿಕಾರ್ಯ ಮೈಸೂರು ದೇಶದಲ್ಲಿ ಸಾಗುತ್ತಿದೆ. ಈ ಯೋಜನೆಯಲ್ಲಿರುವ ಕೆಲವು ನಿಮ್ನವರ್ಗದ ಅಭಿವೃದ್ಧಿ ಕಾರ್ಯವನ್ನು ಆಡಳಿತದವರ ಲೋಪದೋಷಗಳಿಂದ ಸರಿಯಾದ ರೀತಿಯಲ್ಲಿ ಕಾರ್ಯಗತಮಾಡಲು ಅವಕಾಶವಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹರಿಜನರ ಆರ್ಥಿಕ, ಸಾಮಾಜಿಕ, ನೈತಿಕ ಮಟ್ಟಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾದ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡಿಲ್ಲ. ಸಂಸ್ಥಾನದಲ್ಲಿ ಸುಮಾರು 19 ಲಕ್ಷ ಪ್ರಜಾಸಂಖ್ಯೆಯಿರುವ ಈ ಜನಾಂಗದ ಅಭಿವೃದ್ಧಿಗೆ ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯಮಾಡಲು ರಾಜ್ಯಾಂಗದ ನಿಯಮದ ಮೇರೆಗೆ ಅನುಕೂಲವಾಗುವಂತೆ ಒಂದು ಕಮಿಷನ್ ನೇಮಿಸಬೇಕೆಂದು ನಾನು ಹೇಳುತ್ತೇನೆ. ಅನೇಕ ರೀತಿಯಲ್ಲಿ ಇವರ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿದೆ. ಈ ಸಭೆಯಲ್ಲಿ ಎಲ್ಲವನ್ನೂ ವಿವರಿಸಲು ಕಾಲಾವಕಾಶವಿಲ್ಲವಾದ್ದರಿಂದ ವಿವರಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ರಾಜ್ಯಾಂಗದಲ್ಲಿ ನಿಯಮಿತವಾಗಿರುವಂತ

(ಶ್ರೀ ಜಿ. ಪುಟ್ಟಸ್ವಾಮಿ.)

ಅವರ ಬಡತನವನ್ನು ನಿವಾರಿಸಿ ಅವರ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದಕ್ಕೆ ಸಲಹೆ ಮಾಡುವುದು ಅವಶ್ಯಕ. ಸಮಾಜದಲ್ಲಿ ಅವರು ಎಷ್ಟು ಮಟ್ಟಿಗೆ ಹಿಂದುಳಿದಿದ್ದಾರೆ, ಶಾಶ್ವತ ಕಟ್ಟಣದ ಹಾಗಿದ್ದಾರೆ, ಇವರುಗಳನ್ನು ಹೇಗೆ ದೇಶೋದ್ಧಾರಕ್ಕೆ ಉಪಯೋಗಿಸಿಕೊಳ್ಳಬೇಕು, ಅವರಿಗೆ ಸರಿಯಾದ ಮಾರ್ಗವನ್ನು ತೋರಿಸಿ ಹೇಗೆ ಅವರ ಅಭಿವೃದ್ಧಿ ಕಾರ್ಯವನ್ನು ನಡೆಸಬೇಕು ಎಂಬ ಬಗ್ಗೆ ಅನೇಕ ರೀತಿಯ ಸಲಹೆಗಳನ್ನು ಮಾಡುವುದಕ್ಕೆ ಈ ಕಮಿಷನ್ ಅನುಕೂಲವಾಗುತ್ತದೆಂದು ಕೇಳುತ್ತೇನೆ. ಅವರಿಗೆ ಈಗಾಗಲೇ ಹೆಂಚುಗಳನ್ನೊದಗಿಸಿ ಮನೆಗಳನ್ನು ಕಟ್ಟುವ ಯೋಜನೆಯನ್ನು ಮಾತ್ರ ಹೆಚ್ಚು ಮಾಡುತ್ತಿದ್ದಾರೆ. ಇದು ಸರ್ಕಾರದ ಶ್ರೀಮದ್ದೃಷ್ಟಿಯಲ್ಲದೆ. ಆದರೂ ಈ ಸೌಲಭ್ಯವನ್ನು ಪ್ರತಿಯೊಬ್ಬ ನಿಮ್ನ ವರ್ಗದವರೂ ಅನುಭವಿಸಲು ಅನುಕೂಲವಾಗಿಲ್ಲ. ಈ ವಿಷಯದಲ್ಲಿ ಈಗಾಗಲೇ ಕೆಲವು ಮಾನ್ಯ ಸದಸ್ಯರು ಕೆಲವು ಅಂಶಗಳನ್ನು ಈ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅನೇಕ ಗ್ರಾಮಗಳಲ್ಲಿ ಈ ಸೌಲಭ್ಯ ದೊರೆಯುತ್ತಿಲ್ಲ. ಇದಕ್ಕೆ ಕಾರಣ ನಿರ್ದಿಷ್ಟವಾದ ಯೋಜನೆಯಿಲ್ಲದಿರುವುದು. ಎಷ್ಟು ಮನೆಗಳಾಗಬೇಕು, ಎಷ್ಟು ತಯಾರಾಗಿವೆ, ಎಷ್ಟು ಗ್ರಾಂಟು ಒದಗಿಸಬೇಕು ಎಂಬ ಬಗ್ಗೆ ಒಂದು ಯೋಜನೆಯಿಲ್ಲದಿರುವುದು ಈ ಕೆಲಸಕ್ಕೆ ತುಂಬ ಕಷ್ಟವಾಗಿದೆ. ಹೀಗೆಯೇ ಇತರ ಕೆಲಸಗಳಿಗೂ ಸರಿಯಾದ ಯೋಜನೆಯನ್ನು ಹಾಕಿಕೊಂಡು ಅಭಿವೃದ್ಧಿ ಸಾಧಿಸಲು ಅನುಕೂಲವಾಗುವಂತೆ ಒಂದು ಕಮಿಷನ್ ನೇಮಕವಾಗಬೇಕು. ಮೈದಾನ ಪ್ರದೇಶದ ನಿಮ್ನ ವರ್ಗದವರ ಸಮಸ್ಯೆಗಳಿಗೂ ಮಲೆನಾಡು ಪ್ರದೇಶದ ನಿಮ್ನ ವರ್ಗದವರ ಸಮಸ್ಯೆಗಳಿಗೂ ಬಹಳ ವ್ಯತ್ಯಾಸವಿದೆ. ಮೈದಾನದಲ್ಲಿರುವವರು ಈಗಾಗಲೇ ಕೆಲವು ಸೌಲಭ್ಯಗಳನ್ನೊದಗಿಸಿಕೊಂಡು, ಸರ್ಕಾರಿ ನೌಕರಿ ಮತ್ತು ಇತರ ಕ್ಷೇತ್ರಗಳಲ್ಲಿ ಅಭಿವೃದ್ಧಿಗೆ ಬರುತ್ತಿದ್ದಾರೆ. ಆದರೆ ಮಲೆನಾಡಿನವರ ಪರಿಸ್ಥಿತಿಯೇ ಬೇರೆಯಾಗಿದೆ. ಇತ್ತೀಚೆಗೆ ಎಚ್ಚೆತ್ತುಕೊಂಡು ವಿದ್ಯಾಭ್ಯಾಸ ಮುಂತಾದ ಸೌಲಭ್ಯಗಳನ್ನನುಭವಿಸಿಕೊಂಡು ಬರುತ್ತಿದ್ದಾರೆ. ಆದದರಿಂದ ಮಲೆನಾಡಿನವರಿಗೇ ಪ್ರತ್ಯೇಕವಾಗಿ ವಿಶೇಷ ಸೌಲಭ್ಯಗಳನ್ನೊದಗಿಸಬೇಕೆಂದು ಹೇಳುತ್ತೇನೆ. ಈ ಸಮಿತಿ ನೇಮಕವಾಗುವುದಾದರೆ, ಈ ಒಂದು ದೃಷ್ಟಿಯನ್ನಿಟ್ಟುಕೊಂಡು ಮಲೆನಾಡು ಹರಿಜನರ ಅಭಿವೃದ್ಧಿಗೆ ವಿಶೇಷ ಸಲಹೆಗಳನ್ನು ಕೊಡಲು, ಸೌಲಭ್ಯಗಳನ್ನೊದಗಿಸಲು ಸಹಾಯವಾಗುತ್ತದೆಂದು ಸೂಚಿಸುತ್ತೇನೆ. ಮಲೆನಾಡಿನಲ್ಲಿರುವ ನಿಮ್ನ ತರಗತಿಯವರ ಸ್ಥಿತಿಗತಿಗಳು 'ಹಿಲ್‌ಟ್ರೈಬ್ಸ್' ಅಥವಾ ಗುಡ್ಡನಾಡಿನ ಜನರಿಗಿಂತಲೂ ಶೋಚನೀಯವಾಗಿವೆ. ಇವರ ಬಗ್ಗೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಇಷ್ಟು ಹೇಳಿ ನಾನು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

> "That this Assembly is of the opinion that a Scheduled Castes Commission be appointed in Mysore State so as to investigate into their problems and to suggest effective and workable ways and means to ameliorate their conditions within the time limit allowed under the Constitution."

The Minister, Sri Kadidal Manjappa.

ಶ್ರೀ ಎಂ. ಮಾದಯ್ಯ.—(ನಂಜನಗೂಡು ಅನುಸೂಚಿತ ಜಾತಿಗಳು).—ಹೀಗೆ ಮಾಡುವುದಾದರೆ, ಚರ್ಚೆಗಳು ಬಹಳ dull ಆಗುತವೆ. ನಾನು ಬೇಕಾದರೆ ಆ ಪದವನ್ನು ವಾಪಸು ತೆಗೆದುಕೊಳ್ಳುತ್ತೇನೆ.

Mr. SPEAKER.—I feel there are some resolutions—I went through them carefully—involving a question of policy. On Sales-Tax there are about five resolutions. On prohibition which involves policy, there are five or six resolutions. Again on the question of linguistic provinces there are five resolutions.. These three categories involve questions of policy. The question of Linguistic Provinces may not be reached even by tomorrow. In regard to the other resolutions, I think it is sufficient if one member speaks on the subject and the Minister concerned replies. That is the procedure that has been followed till now.

ಶ್ರೀ ಎಂ. ಮಾದಯ್ಯ.—ಅಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳಬೇಕೆಂದಿದ್ದೇನೆ. ಚರ್ಚೆಗೆ ಬರುವ ನಿರ್ಣಯಗಳು ಬರಿಯ ಸ್ಥಳೀಯ ವಿಚಾರಕ್ಕೆ ಸಂಬಂಧಪಟ್ಟವಾಗಿದ್ದರೆ, ಸರ್ಕಾರದವರು ಉತ್ತರಕೊಟ್ಟರೆ ಸಾಕು. ಆದರೆ ಹರಿಜನರ ಪ್ರಶ್ನೆ, ನಿಮ್ನ ವರ್ಗದವರಿಗೆ ಸಂಬಂಧಪಟ್ಟ ಪ್ರಶ್ನೆಯಾದರೆ, ಅಂಥಾ ಸಂದರ್ಭದಲ್ಲಿ ಅಧ್ಯಕ್ಷರು ಉದ್ಧಾರವಾಗಿ ಹೆಚ್ಚು ಅವಕಾಶಕೊಡಬೇಕು

I request the Chair to exercise his discretion liberally.

Sri J. MOHAMED IMAM (Jagalur).—I want to make a proposal. The resolutions concerning local grievances, I think, can be withdrawn for the present, as these are matters which have already been dealt with previously in the course of cut motions—for example, Sri Madiah said just now that the Harijan question is very important; of course, it is important but has been discussed sufficiently. My suggestion is: tomorrow we can withdraw all the resolutions which are concerned with local grievances and confine ourselves to one of the improtant resolutions which deals with policy or example—Prohibition or Linguistic

Provinces. Discussion on these will be of a high order and will be more interesting. That is my suggestion.

Mr. SPEAKER.—From resolution No. 13 to No. 25, there is only one, No. 23, which deals with local affairs. All others are of a general nature. Nearly 12 resolutions are over today and good progress has been made. Regarding resolutions of a local nature, one member will do. Regarding the present resolution dealing with the Scheduled Castes Commission, two or three members may speak. It is also of a general nature, but not exceeding two or three members may speak because seven to eight members took part on the same subject under cut motions. Sri Gopal Gowda, have you any suggestions ?

Sri S. GOPALA GOWDA (Sagar-Hosanagar).—I have no suggestions to make, Sir.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಶೆಡ್ಯೂಲ್ಡ್ ಕ್ಯಾಸ್ಟ್ಸ್ ಸಂಬಂಧವಾಗಿ ಒಂದು ಸಮಿತಿ ಏರ್ಪಾಡಾಗಿದೆ. ಆದುದರಿಂದ ಅದಕ್ಕೆ ಸಂಬಂಧಪಟ್ಟದ್ದನ್ನು ಚರ್ಚೆಮಾಡುವ ಆವಶ್ಯಕತೆಯಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಇದು ಬಹಳ ಮುಖ್ಯವಾದ ವಿಚಾರ. ನಮ್ಮ ಅಭಿಪ್ರಾಯಗಳನ್ನು ಕೊಡಬೇಕಾಗಿದೆ.

ಶ್ರೀ ಎಂ. ಮಾದಯ್ಯ.—ನನಗೆ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ಮನಃಪೂರ್ವಕವಾಗಿ ವಂದಿಸಬೇಕಾಗಿದೆ.

Mr. SPEAKER.—No Member need thank the Speaker. I simply carry on the desire and wishes of Members.

*ಶ್ರೀ ಎಂ. ಮಾದಯ್ಯ.—ಸ್ವಾಮಿ, ಇದರ ಆವಶ್ಯಕತೆಯ ವಿಚಾರ ಪದೇ ಪದೇ ಶಾಸನಸಭೆಯ ಮುಂದೆ ಬರುತ್ತಿದೆ. ಏನೋ ಒಂದು ಉತ್ತರವನ್ನು ಹೇಳಿ ಸುಮ್ಮನೆ ಆಗುವುದು ಅಷ್ಟು ಸಾಧುವಲ್ಲ, ಸರಿಯಲ್ಲ ಎಂದು ಹೇಳಬೇಕಾಗಿದೆ. ಒಂದಲ್ಲ ಇನ್ನೊಂದು ರೂಪದಲ್ಲಿ ಒತ್ತಾಯ ಬರುತ್ತಿದ್ದರೂ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡದೇಯಿದ್ದರೆ ಬಹಳ ಸದುದ್ದೇಶದಿಂದ ಏನು ನಿರೀಕ್ಷಣೆ ಮಾಡುತ್ತೇವೋ ಅದು ಆಗದೇ ಹೋಗುತ್ತದೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಸರ್ಕಾರದವರು ಉತ್ತರ ಕೊಡುವಾಗ ನಿಜವಾಗಿಯೂ ಒಳ್ಳೆಯ ಮನಸ್ಸಿನಿಂದ with the best of intentions ಕೊಡುತ್ತಾರೆಂದು ಹೇಳುತ್ತಿದ್ದೆ. ಈಗಲೂ ಅದನ್ನೇ ಹೇಳುತ್ತೇನೆ. ಯಾವ ವಿಷಯದಲ್ಲಿ ಯಾವ ರೀತಿ ಮಾಡಬೇಕೆಂದು ಒಂದು ಮಾರ್ಗವನ್ನು ತೋರಿಸಿದರೆ ಆ ರೀತಿ ಮಾಡುತ್ತಾರೆಂದು ನಂಬಿಕೆಯಿದೆ. ಒಂದು ವಿಷಯವನ್ನು ಯತ್ನವಿಲ್ಲದೆ ಹೇಳಬೇಕಾಗಿದೆ. ಖೋತಾನಿರ್ಣಯ ಚರ್ಚೆಯಾದ ಸಮಯದಲ್ಲಿ ಸರ್ಕಾರದ ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಉತ್ತರಕೊಡುವಾಗ ಒಂದು ಶೈಲಿಯಲ್ಲಿ ಉತ್ತರ ಕೊಟ್ಟರು. ಆ ರೀತಿ ಉತ್ತರ ಕೊಟ್ಟರೆ ನಿಜವಾಗಿಯೂ ನಿರುತ್ಸಾಹವುಂಟಾಗುತ್ತದೆಯೋ ಏನೋ ಅನ್ನಿಸುತ್ತದೆ. ಉದ್ದೇಶ ಚೆನ್ನಾಗಿರಬಹುದು, ಮನಸ್ಸು ಚೆನ್ನಾಗಿರಬಹುದು. ಆದರೆ ಅದನ್ನು ಹೇಳುವಾಗ, ಅದರಲ್ಲಿಯೂ ಇಂಥ ಸಭೆಯಲ್ಲಿ ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ ಅಲ್ಲದೆ ಕೇಳತಕ್ಕ ಸದಸ್ಯರಿಗೆ ನಿರುತ್ಸಾಹವಾಗುವ ರೀತಿಯಲ್ಲಿರಬಾರದು. ಆ ಖೋತಾನಿರ್ಣಯದ ಮೇಲೆ ಮಾತನಾಡುವ ಕಾಲದಲ್ಲಿ, 'ಬೇಕಾದಷ್ಟು ಮಾಡಿದ್ದೇವೆ, ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ' ಎಂದು ಲೋಕಾಭಿರಾಮವಾಗಿ ಮಾತನಾಡಿದರು...

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಸ್ವಪ್ರಯತ್ನವೂ ಇರಬೇಕೆಂದು ಹೇಳಿದೆ, ಅದರಲ್ಲಿ ತಪ್ಪೇನೂ ಇಲ್ಲ. ಸರ್ಕಾರದವರು ಹರಿಜನರಿಗೆ ಮಾಡಿರುವ ಅನುಕೂಲಗಳ ಜೊತೆಗೆ ಅವರು ಸ್ವಪ್ರಯತ್ನವನ್ನೂ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಎಂ. ಮಾದಯ್ಯ.—ಸ್ವಾಮಿ, ಇಂಡಿಯಾ ಸರ್ಕಾರದವರು ಕೆಲವು ದಿವಸಗಳ ಹಿಂದೆ ಭಾರತ ರಾಜ್ಯಾಂಗದ 340ನೆಯ ವಿಧಿಯ ಪ್ರಕಾರ ಒಂದು ಕಮಿಷನ್ ನೇಮಕಮಾಡಿದ್ದಾರೆ. ಆ ಕಮಿಷನ್ನಿನ ಕೆಲಸ ಹಿಂದುಳಿದ ಪಂಗಡದವರ ಮತ್ತು ನಿಮ್ನ ವರ್ಗದವರ ಸಮಾಜದಲ್ಲಿ, ವಿದ್ಯಾಭ್ಯಾಸದಲ್ಲಿ ಹಿಂದುಳಿದಿರುವವರ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಕೇಂದ್ರ ಸರ್ಕಾರಕ್ಕೆ ವರದಿಯನ್ನೊಪ್ಪಿಸುವುದು. ಆ ವರದಿಯನ್ನು ಪಾರ್ಲಿಮೆಂಟಿನಲ್ಲಿ ಕೂಡ ಮಂಡಿಸಿ, ಪಾರ್ಲಿಮೆಂಟಿನ ಸಲಹೆಯನ್ನು ಪಡೆದು ಕೇಂದ್ರ ಸರ್ಕಾರದವರು ಈ ವರ್ಗದ ಜನರ ಅಭಿವೃದ್ಧಿಗೆ ಅನುಕೂಲಗಳನ್ನು ಕಲ್ಪಿಸುವುದಲ್ಲದೆ, ಸಂಸ್ಥಾನಗಳ ಸರ್ಕಾರಗಳು ಎಷ್ಟು ಹಣ ಒದಗಿಸಬೇಕು, ಕೇಂದ್ರ ಸರ್ಕಾರದವರು ಏನು ಕೊಡಬೇಕು ಎಂಬ ವಿಚಾರದಲ್ಲಿಯೂ ವರದಿ ಕೊಡುವುದನ್ನು ನೇಮಿಸಿದ್ದಾರೆ. ಅವರು ಯಾವ ಯಾವ ಸಂಸ್ಥಾನಗಳಲ್ಲಿ ಏನೇನು ಸ್ಥಿತಿಗಳಿರುತ್ತವೆಂಬುದನ್ನು ತಿಳಿಯುವುದಕೋಸ್ಕರವಾಗಿ ಈಗಾಗಲೆ ಪ್ರವಾಸ ಸಹ ಹೊರಟಿರುತ್ತಾರೆಂದು ಪತ್ರಿಕೆಗಳಲ್ಲಿ ಓದಿರುತ್ತೇನೆ, ಹಾಗೆ ಪ್ರವಾಸ ಹೊರಟಿರತಕ್ಕವರು ನಮ್ಮ ಮೈಸೂರು ಸಂಸ್ಥಾನಕ್ಕೂ ಕೂಡ ಖಂಡಿತವಾಗಿ ಬರಬಹುದು, ಹಾಗೆ ಅವರು ಬರುವಷ್ಟರೊಳಗೆ ನಾವು ಯಾವ ರೀತಿ ಮಾಡಬೇಕು, ಯಾವ ಯಾವ ಸ್ಟೇಟ್‌ಮೆಂಟುಗಳನ್ನು ತಯಾರಿಸಿಟ್ಟುಕೊಂಡಿರಬೇಕು ಎಂಬುದನ್ನೆಲ್ಲಾ ಈಗಲೇ ಸಿದ್ಧಮಾಡಿಸಿಕೊಳ್ಳಬೇಕು. ಹಾಗೆ ಅವರು ಬಂದಕೂಡಲೇ ಇಲ್ಲಿಯ ನಿಮ್ನ ತರಗತಿಗಳವರ ಪ್ರಾಬ್ಲೆಂಸ್ ಏನೇನಿರುತ್ತವೆಂಬುದನ್ನು ಅವರಿಗೆ ತಿಳಿಯಪಡಿಸಿ ತನ್ಮೂಲಕ ಅನುಕೂಲ ಹೊಂದಲು ಈಗಾಗಲೆ ಆಂಧ್ರ ಮತ್ತು ಮದರಾಸ್ ಪ್ರಾಂತ್ಯಗಳಲ್ಲಿ ಒಂದೊಂದು ಕಮಿಷನನ್ನು ನಿರ್ಮಿಸಿರುವ ಹಾಗೆ ಇಲ್ಲಿಯೂ ಒಂದು ಅಂಥ ಕಮಿಷನನ್ನು ಸ್ಥಾಪಿಸಿ ಇಲ್ಲಿರುವ ಬ್ಯಾಕ್ ವರ್ಡ್ ಕ್ಲಾಸಿನ ಮತ್ತು ಡಿಪ್ರೆಸ್ಡ್ ಕ್ಲಾಸಿನ ನಿಜವಾದ ಅಂಕಿ ಅಂಶಗಳನ್ನು ಶೇಖರಣೆ ಮಾಡುವುದು ಅಗತ್ಯವೆಂದು ನಾನು ತಿಳಿಸುತ್ತೇನೆ. ಈ ರೀತಿಯಾಗಿ ಮೆಟೀರಿಯಲ್ಸ್‌ಗಳನ್ನು ಇಲ್ಲಿ ಕಲೆಕ್ಟ್ ಮಾಡಿಟ್ಟುಕೊಂಡು ಅವರು ಇಲ್ಲಿ ಹೇಳಿರುವ ಮಾತೆ ಎಂದರೆ.—

"To suggest effective and workable ways and means."

(ಶ್ರೀ ಎಂ. ಮಾದಯ್ಯ)

ಎಲ್ಲವನ್ನೂ ಸಿದ್ಧಪಡಿಸಿಕೊಂಡಿರಬೇಕು. ಈ ಪಾಲಸಿ ಸಮಿತಿಗಳು ವಿಚಾರಗಳನ್ನು ಚರ್ಚೆ ಮಾಡಿ ಅವು ಬರತಕ್ಕಂಥ ತೀರ್ಮಾನಗಳಿಂದಲೇ ಆಗಲಿ ಅಥವಾ ಅವುಗಳು ಸರ್ಕಾರಕ್ಕೆ ಸಲ್ಲಿಸುವಂಥ ಶಿಫಾರ್ಸುಗಳಿಂದಲೇ ಆಗಲಿ ಅಷ್ಟೇನೂ ಉಪಯೋಗ ಇಲ್ಲಿಯವರೆಗೂ ಆಗಿರುವುದಿಲ್ಲ. ಆದರೆ ಈಗ ನೇಮಕ ಮಾಡಲ್ಪಡುವಂಥ ಸಮಿತಿಯು ತನ್ನ ಶಿಫಾರ್ಸುಗಳನ್ನು ಯಾವ ರೀತಿಯಲ್ಲಿ ಮತ್ತು ಹೇಗೆ ಮಾಡಿದರೆ ಅವುಗಳಿಗೆ ಒಂದು ಬೆಲೆಯು ಸರ್ಕಾರದಿಂದ ಬಂದೇ ತೀರಬೇಕೋ ಅಂಥ ಒಂದು effective ಆದರೀತಿಯಲ್ಲಿ ಸಲಹೆಗಳನ್ನು ನೀಡುವಂತಿರಬೇಕು. ಈ ಸಮಿತಿಯವರು ಮಾಡುವಂಥ ಪ್ರತಿಯೊಂದು ಸಲಹೆಗಳೂ ಕಾರ್ಯ ಸಾಧನೆಗೆ ಅನುಕೂಲ ವಾಗುವಂತೆ workable ಆಗಿರಬೇಕು. ಮತ್ತು ಸರ್ಕಾರದವರ ಮೇಲೆ ಒಂದು ಒತ್ತಾಯವನ್ನು ಹಾಕಿ may or may not ಎಂದು ಹೇಳುವುದಕ್ಕೆ ಅವಕಾಶವಿಲ್ಲದಂತೆ ಸರ್ಕಾರದವರ ಮೇಲೆ ಒಂದು ಬೈಂಡಿಂಗ್ ಆಗಿರುವಂತೆಯೂ, ಹಾಗೆ ಮಾಡಲ್ಪಡುವ ಶಿಫಾರ್ಸುಗಳಿಗೆ ಒಂದು ಬೆಲೆ ಸಿಕ್ಕುವಂತೆಯೂ ಇರಬೇಕು. ಈಗ ಮೈಸೂರು ಸಂಸ್ಥಾನದಲ್ಲಿ ಅನೇಕಸಂಸ್ಥೆಗಳಿಗೆ ಒಂದು ಗ್ರಾಂಟ್ ಕೊಡುತ್ತಿರುವಂತೆ ಈ ನಿಮ್ನ ಪಂಗಡಗಳವರ ಅಭಿವೃದ್ಧಿಗೂ ಒಂದು ಗ್ರಾಂಟನ್ನು ಕೊಡಲಾಗುತ್ತಿದೆಯೆಂದು ತಾವು ಲೋಕಾಭಿರಾಮವಾಗಿ, ಅದರಿಂದಲೇ ಎಲ್ಲವೂ ಅನುಕೂಲವಾಗಿ ಹೋಗಲು ಸಾಧ್ಯವಿದೆಯೆಂದು ಹೇಳಿದರೆ ಅದು ಸಾಲದೆಂದು ನಾನು ಹೇಳಬೇಕಾಗಿದೆ. ಈ ದಿವಸ ಸರ್ಕಾರದವರು ಈ ನಿಮ್ನ ತರಗತಿಯವರ ಅಭಿವೃದ್ಧಿಗಾಗಿ ಏನೊಂದು ಗ್ರಾಂಟನ್ನು ಈ ದಿವಸ ಉದಾರವಾಗಿ ಕೊಟ್ಟಿದ್ದಾರೋ ಅದಕ್ಕಾಗಿ ನಾವೆಲ್ಲರೂ ಅವರನ್ನು ಅಭಿನಂದಿಸ ಬೇಕಾಗಿದೆ. ಆದರೆ ಈ ಗ್ರಾಂಟೂ ಸಹ ಯಾವುದೋ ಒಬೀರಾಯನ ಕಾಲದಲ್ಲಿ ನಿಗದಿಮಾಡಲ್ಪಂಥ ಒಂದು ಗ್ರಾಂಟು. ಈಗ ತಾವು ನಿಮ್ನ ಪಂಗಡದವರಿಗೆ ವಾಸದ ಮನೆಗಳನ್ನು ಕಟ್ಟಿಕೊಳ್ಳಲು ಗ್ರಾಂಟನ್ನು ಕೊಡುತ್ತಿದ್ದೀರಿ. ಆದರೆ ತಾವು ಇಷ್ಟೇ ಗ್ರಾಂಟನ್ನು ಕೊಡುತ್ತಾ ಹೋದರೆ ಅವರು ಎಷ್ಟು ವರ್ಷಗಳಲ್ಲಿ ಈ ಕೊರತೆಯನ್ನು ನಿವಾರಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಹೀಗೆ ಅವರ ಒಂದು ಅಭಿವೃದ್ಧಿ ಎಷ್ಟು ಕಾಲದೊಳಗೆ ಒಂದು ನಿರೀಕ್ಷಿಸಿದ ಮಟ್ಟವನ್ನು ತಲಪಬೇಕೋ ಅಷ್ಟನ್ನು ಮುಟ್ಟುವಂತೆ ಮಾಡಲು ತಾವು ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರಿಸಿ ಇಲ್ಲಿಯವರೆಗೆ ನಮ್ಮ ಮುಂದೆ ಇಟ್ಟಿರುವುದಿಲ್ಲ. ನಾನು ಈ ಹಿಂದೆಯೇ, ಎಂದರೆ, 1945 ರಲ್ಲೇ ಈ ನಿಮ್ನ ತರಗತಿಯವರ ಯೋಜನೆಗಾಗಿ ಸರ್ಕಾರದವರು ಯಾವ ಒಂದು ಯೋಜನೆಯನ್ನೂ ಕೈಕೊಂಡಿರುವುದಿಲ್ಲವೆಂದು ಒತ್ತಾಯಪಡಿಸಿದಕಾರಣದ ಮೇಲೆ, ಸರ್ಕಾರದವರು ಈ ಡಿಪ್ರೆಸ್ಡ್ ಕ್ಲಾಸಿನವರ ಅಭಿವೃದ್ಧಿಗೆ ವಿವಿಧ ಮಾರ್ಗಗಳನ್ನು ಸೂಚಿಸುವಂತೆ ಒಂದು ಸಮಿತಿಯನ್ನು ನೇಮಕವಾಡಿ ಈ Housing Scheme ಎಂಬ ಯೋಜನೆಯ ಮೂಲಕ ಜಾರಿಗೆ ಬರುವಂತೆ ಮಾಡಿದರು. ಆದರೆ ಈಗ ತಾವು ಈ ನೀತಿಯ ಪ್ರಕಾರ ಜಿಲ್ಲಾವಾರ್ ಇದನ್ನು ಹಂಚುವಂತೆ ಮಾಡಿದ್ದೀರಿ. ಈ ಒಂದು ಯೋಜನೆ ವಿನಾ ಮತ್ತೆ ಯಾವುದನ್ನಾದರೂ ಎಂದರೆ ಇಂಥ ಇನ್ನೊಂದು ಯೋಜನೆಯನ್ನಾದರೂ ಸರ್ಕಾರ ಇಲ್ಲಿಯತನಕಮಾಡಿರುತ್ತದೆಯೇ ಹೇಳಲಿ ಎಂದು ನಾನು ಕೇಳುತ್ತೇನೆ. ಹೀಗೆ ಆ ಒಂದು Housing Scheme ವಿನಾ ಮತ್ತೆ ಯಾವುದನ್ನೂ ಸರ್ಕಾರದವರು ಇಲ್ಲಿಯತನಕ ಮಾಡಿಲ್ಲವೆಂದು ತಿಳಿಸುತ್ತೇನೆ.

ಇನ್ನೂ ಅವರಿಗೆ ಜಮೀನು ಕೊಡತಕ್ಕ ಬಗ್ಗೆ ಮತ್ತು ಆರ್ಥಿಕಾಭಿವೃದ್ಧಿಯ ಬಗ್ಗೆ ಮತ್ತು ಅವರ ವಿದ್ಯಾಪ್ರಗತಿಗಾಗಿ ಏನೇನು ಅನುಕೂಲತೆಗಳನ್ನು ಕಲ್ಪಿಸಬೇಕೋ ಅಂಥ ಅನುಕೂಲತೆಗಳನ್ನು ಕಲ್ಪಿಸತಕ್ಕ ಯೋಜನೆಗಳೊಂದನ್ನೂ ಇಲ್ಲಿಯತನಕ ಸರ್ಕಾರ ಹಾಕಿರುವುದಿಲ್ಲ. ಈ ವಿಚಾರಗಳಿಗೆಲ್ಲಾ ತಾವು ಒಂದು ಟಾರ್‌ಜೆಟ್ಟನ್ನು ಫಿಕ್ಸ್ ಮಾಡಬೇಕು. ಇದಕ್ಕಾಗಿಯೇ ಅಂಥ ಒಂದು ಸಮಿತಿ ಅಗತ್ಯವೆಂದು ನಾನು ಹೇಳುತ್ತಿರುವುದು. ಆದರೆ ಈ ವಿಚಾರಗಳಿಗೆಲ್ಲಾ ಎಷ್ಟೋ ಪಾಲಸಿ ಸಮಿತಿಗಳು ಇರುತ್ತವೆಯೆಂದು ತಾವು ಹೇಳಬಹುದು. ಆ ಪಾಲಿಸಿ ಸಮಿತಿಯನ್ನೇ ತಾವು ಕಮಿಷನ್ ಎಂದೂ ಕರೆದರೂ ಕರೆಯಬಹುದು. ಹಾಗೆ ಕರೆಯುವುದರಿಂದ ಏನೂ ವಿರೋಧವಾಗಲಾರದು. ಆದರೆ ಈಗ ಬಂದಿರತಕ್ಕ ವಿಚಾರ ಅದಲ್ಲ. ಈಗ ಒಂದು ಪ್ರತ್ಯೇಕ ಸಮಿತಿಯನ್ನೇ ಇದಕ್ಕಾಗಿ ಏರ್ಪಾಡು ಮಾಡಬೇಕು. ಮುಂದಕ್ಕೆ ನಮಗೆ ಇಂಡಿಯಾ ಸರ್ಕಾರದವರಿಂದ ಬರಬೇಕಾದ ಕನ್‌ಸೆಷನ್‌ಗಳು ಮತ್ತು ಸಹಾಯಗಳು ಜಾಸ್ತಿ ಆಗಬೇಕಾಗಿರುವುದರಿಂದ ತಾವು ಈ ಒಂದು ಸಮಿತಿಯನ್ನು ನೇಮಿಸಲೇಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

(Sri S. Gopala Gowda rose.)

Mr. SPEAKER.—Would you like to hear Sri T. Mariappa and then speak?

Sri T. MARIAPPA (Mysore City North).—It is much better that the other members also speak.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ)

ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರತಕ್ಕ ಈ ನಿರ್ಣಯವನ್ನು ಸಮರ್ಥಿಸುತ್ತ ನಾನು ನಿಮ್ನ ತರಗತಿಗಳವರ ಅಭಿವೃದ್ಧಿಯ ಬಗ್ಗೆ ಕೆಲವು ಸಲಹೆಗಳನ್ನು ನೀಡಬೇಕೆಂದಿದ್ದೇನೆ. ನಮ್ಮ ಸಮಾಜದಲ್ಲಿ ಈ ನಿಮ್ನ ಪಂಗಡಗಳವರು ದಲಿತರು ಮತ್ತು ದೀನರೂ ಕೂಡ ಆಗಿದ್ದಾರೆ. ಇದನ್ನು ಮನಗಂಡು ಭಾರತ ರಾಜ್ಯಾಂಗದಲ್ಲಿ ಇನ್ನು 10 ವರ್ಷಗಳ ತನಕ ಅವರಿಗೆ ವಿಶೇಷ ಸೌಲಭ್ಯಗಳನ್ನೂ ಮತ್ತು ಅವಕಾಶಗಳನ್ನೂ ಕಲ್ಪಿಸಿಕೊಟ್ಟು ಅವರ ಅಭಿವೃದ್ಧಿಯನ್ನು ಇತರ ಜನಾಂಗಗಳ ಮಟ್ಟಕ್ಕೆ ತರಬೇಕೆಂದು ಉದ್ದೇಶಿಸಲಾಗಿದೆ. ಈ ನಿಮ್ನ ಪಂಗಡದವರಲ್ಲಿ ಇಲ್ಲಿಯತನಕ ಬಹುಮಂದಿ ಕೃಷಿಯಿಂದ ಜೀವನ ಮಾಡುತ್ತಿದ್ದರೂ ಅವರಿಗೆ ಸ್ವಂತ ವ್ಯವಸಾಯಕ್ಕೆ ಭೂಮಿಯಿಲ್ಲ. ಆದುದರಿಂದ ಅವರಲ್ಲಿರತಕ್ಕವರೆಲ್ಲರೂ ಪೂರಾ Landless Agricultural Labourers ಆಗಿದ್ದಾರೆ. ಆದುದರಿಂದ ಅವರು ತಮ್ಮದೇ ಆದಂಥ ಒಂದು ಕುಲ ಕಸುಬನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ. ಮತ್ತೆ ಕೆಲವರು ಇತರ ಸಣ್ಣ ಪುಟ್ಟ ಬೇರೆ ಬೇರೆ ವ್ಯಾಪ್ತಿಯ ರತಕ್ಕ ವೃತ್ತಿಗಳನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ. ಹಿಂದೂ ಸಮಾಜವನ್ನು ನೋಡಿದರೆ ಕುಷ್ಠರೋಗದಿಂದ ಕೈಕಾಲುಗಳು ಕೊಳೆತು ಹೋದ ಒಬ್ಬ ಮನುಷ್ಯನಿದ್ದಂತೆ ಕಾಣುತ್ತಿದೆ. ಹೀಗೆ ಈ ಜನಾಂಗದ ಶತ ಶತಮಾನಗಳಿಂದಲೂ ತುಳಿಯಲ್ಪಟ್ಟು ಕೆಳಕ್ಕೆ ಒತ್ತಲ್ಪಟ್ಟು, ಕಡೆಗೆ ಈ ಜನಾಂಗನವನ್ನೇ ಯಾರೂ ಮುಟ್ಟದಂತೆ ಮಾಡಿ ಹಾಕಿದ್ದರು. ಹೀಗೆ ಮುಟ್ಟಲೂ ಬಾರದೆಂದು ಮಾಡಿರತಕ್ಕಂಥ ಜನಾಂಗಗಳ ಸಂಖ್ಯೆ ಸಾವಿರಗಟ್ಟಲೆ ಅಪಾರವಾಗಿದೆ. ನಮ್ಮ ದೇಶದ ಈ ಪ್ರಜಾ ಪ್ರಭುತ್ವದ ಯಶಸ್ಸು ಇವರ ಮೇಲೆಯೇ ಅವಲಂಬಿಸಿರುತ್ತದೆಂದು ಹೇಳಿದರೂ ಹೇಳಬಹುದು. ಹೀಗೆ

ನೂರಾರು ವರ್ಷಗಳಿಂದ ಈ ಒಂದು ಜನಾಂಗ ಇತರ ಜನಾಂಗಗಳವರ ಅಭಿವೃದ್ಧಿಗೆ ಕೊಟ್ಟಿರತಕ್ಕಂಥ ಸಾಲವನ್ನು ತೀರಿಸುವುದಕ್ಕೆ ನಾವೆಲ್ಲರೂ ತೆರಬೇಕಾದ ಋಣ ಬಹಳವಾಗಿದೆಯೆಂದು ಹೇಳುತ್ತೇನೆ. ತಾವು ಯಾವ ಒಂದು ಪಟ್ಟಣಕ್ಕೆ ಹೋಗಲಿ ಅಥವಾ ಒಂದು ಊರಿಗೇ ಹೋಗಲಿ ಅಲ್ಲಿ ಒಂದು ಹೊಲಗೇರಿ ಇದ್ದೇ ಇರುತ್ತದೆ. ಇದು ನಿಮ್ಮ ಹಿಂದೂ ಸಂಸ್ಕೃತಿಗೆ ಒಂದು ಕಳಂಕ ಪ್ರಾಯವಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—"ನಿಮ್ಮ ಹಿಂದೂ ಸಂಸ್ಕೃತಿಗೆ" ಎಂದು ಹೇಳುತ್ತಿದ್ದೀರಿ. ಹಾಗಾದರೆ ತಾವೇನು ಹಿಂದುಗಳಲ್ಲವೋ?

ಶ್ರೀ ಎಸ್. ಗೋಪಾಲಗೌಡ.—ನಾನು ಹಾಗೆ ಹೇಳಿದ್ದು ತಪ್ಪಿರಬಹುದು. ನಾನು "ನಮ್ಮ ಹಿಂದೂ ಸಂಸ್ಕೃತಿಗೆ" ಎಂದೇ ಹೇಳಬೇಕಾಗಿತ್ತು. ನಾನು ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಜನಾಂಗವನ್ನು ಇತರ ಸವರ್ಣ ಹಿಂದುಗಳು ಎಲ್ಲಿಯತನಕ ಮೇಲ್ಮಟ್ಟಕ್ಕೆ ಎತ್ತುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶ ಮುಂದುವರಿಯಲು ಖಂಡಿತ ಸಾಧ್ಯವಿಲ್ಲವೆಂದು ನಾನು ತಿಳಿಸುತ್ತೇನೆ. ಅವರ ಸಂಖ್ಯೆ ಎಷ್ಟು ಹೆಚ್ಚಾಗಿದೆಯೋ ಅವರ ಕ್ಷೇತ್ರವೂ ಕೂಡ ಅಷ್ಟೇ ವಿಶಾಲವಾಗಿದೆ. ಆದರೆ ನಾನು ಹೇಳಿರತಕ್ಕ ಒಂದು ವಿಚಾರವನ್ನು ಎಂದರೆ, ಈ ಜನಾಂಗದಲ್ಲಿರತಕ್ಕವರೆಲ್ಲರೂ "ದೀನರು, ದಲಿತರು" ಎಂದು ಹೇಳಿರುವುದರಿಂದ ಕೆಲವರು, ಅಂಥ ದೀನರೂ ದಲಿತರೂ ಆಗಿರತಕ್ಕವರು ಬೇರೆ ಜನಾಂಗಗಳಲ್ಲಿರುವುದಿಲ್ಲವೇ, ಎಂದು ಕೇಳಿದರೂ ಕೇಳಬಹುದು, ನಮ್ಮ ದೇಶದಲ್ಲಿ ಈ ದಿವಸ ಈ ಆರ್ಥಿಕ ಮತ್ತು ಸಾಮಾಜಿಕ ಎರಡೂ ಬಹಳ ಜಿಗುಟಾದ ಸಮಸ್ಯೆಗಳಾಗಿವೆ; ಈ ದಿವಸ ಇಂಗ್ಲೆಂಡ್ ಅಥವಾ ಇತರ ಯಾವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೇ ಆಗಲಿ ಅವರು ತಮ್ಮ ಜನಗಳ ಆರ್ಥಿಕ ಸಮಸ್ಯೆಯೊಂದನ್ನು ಮೊದಲು ಬಿಡಿಸಿ ಬಿಟ್ಟರೆ, ಅನಂತರ ಇನ್ನುಳಿಯತಕ್ಕ ಅವಶ್ಯಕವಾದ ಇತರ ಸಮಸ್ಯೆಗಳೆಲ್ಲವೂ ತಮ್ಮಷ್ಟಕ್ಕೆ ತಾವೆ ಸರಿಹೋಗುತ್ತವೆಂದು ಹೇಳಬಹುದು. ಅದರ ಪ್ರಕಾರ ನೋಡಿದರೆ, ಇತರ ಎಲ್ಲಾ ಸಮಸ್ಯೆಗಳಿಗೂ ಈ ಆರ್ಥಿಕ ಸಮಸ್ಯೆಯೇ ಮೂಲಾಧಾರವೆಂದು ನನಗೆ ಹೊಳೆಯುತ್ತದೆ. ಆದರೆ ಈ ಸಾಮಾಜಿಕ ಸಮಸ್ಯೆಯೂ ಅಷ್ಟೇ ಮೂಲಭೂತವಾಗಿದೆ. ಆದ್ದರಿಂದ ಈ ಮೂಲ ತೊಡಕುಗಳನ್ನೆಲ್ಲಾ ಬಿಡಿಸ ಬೇಕಾಗಿದ್ದರೆ ಭಾರತ ಸಂವಿಧಾನದಲ್ಲಿ ಅವರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿ ಕೊಟ್ಟು, ಅವರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳಾಗಿ ಬರುವುದಕ್ಕೆ ಅವಕಾಶವಿರುವ ಹಾಗೆ ಮಾಡಿದ ವಿನಃ ಅವರಿಗೆ ಈ ಸಮಸ್ಯೆಗಳನ್ನು ಬಿಡಿಸಲು ಎಂದಿಗೂ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರವಾಗಿ ನಾವೂ ಇನ್ನೂ ಹೆಚ್ಚಿಗೆ ತೀವ್ರ ಗಮನವನ್ನು ಕೊಟ್ಟು, ದೇಶದ ಮಹಾ ಜನರೂ ಮತ್ತು ಇಂಥ ವಿಧಾನ ಸಭೆಗಳವರೂ ಕಾನೂನು ಪ್ರಕಾರ ಅವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅವುಗಳೆಲ್ಲವನ್ನೂ ಕೊಡುವಂತೆ ಮಾಡತಕ್ಕದ್ದು ಎಲ್ಲ ಸರ್ಕಾರಗಳ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಸ್ವಲ್ಪ ಹೆಚ್ಚು ಕಡಿಮೆ ಈ ಜನಾಂಗದವರಂತೆಯೇ ಇನ್ನೂ ತೊಂದರೆಗೊಳಗಾಗತಕ್ಕ ಮತ್ತೊಂದು ಜನಾಂಗವಿದೆ. ಮಲೆನಾಡು ಪ್ರದೇಶದಲ್ಲಿ ಅವರನ್ನು 'ದೀವರು' ಎಂದು ಕರೆಯುತ್ತಿದ್ದಾರೆ. ಈ ಜನಾಂಗದವರೂ ಕೂಡ ಈ ಷೆಡ್ಯೂಲ್ಡ್ ಪಂಗಡಗಳವರಿಗೆ ಒದಗಿಸುತ್ತಿರುವಂಥ ಎಲ್ಲ ಸೌಲಭ್ಯಗಳನ್ನೂ ತಮಗೂ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆದರೆ ಈ ಸೌಲಭ್ಯಗಳನ್ನು ಕೇಳುವ ಅವರೂ ಸಹ ಅವರ ಗುಂಪಿಗೆ ಸೇರಿಕೊಳ್ಳಲಿ ಎಂದು ಹೇಳಬಹುದು. ಆದರೆ ಹಾಗೆ ಕೇಳತಕ್ಕದ್ದು ಅಷ್ಟು ಹಿತಕರವಾಗಿರುತ್ತದೆಂದು ಕಾಣುವುದಿಲ್ಲ. ಆ ಜನಾಂಗದಲ್ಲಿಯೂ ಕೂಡ ಹೆಚ್ಚು ಜನ ಬಡವರಿದ್ದಾರೆ. ಅವರಿಗೆ ಸಾಕಷ್ಟು ಜಮೀನಿರುವುದಿಲ್ಲ; ಉದ್ಯೋಗಗಳು ಬೇಕಾಗಿವೆ. ಆದರೆ ಅವರು ಹೋರಾಟವನ್ನು ಮಾತ್ರ ಇನ್ನೂ ಮಾಡಿರುವುದಿಲ್ಲ. ಅವರು ಈ ಸೌಲಭ್ಯಗಳಿಗಾಗಿ ಹೋರಾಟ ಮಾಡಿದರೆ ಸಾಕು ಅವರಿಗೂ ಈ ಸೌಲಭ್ಯಗಳು ಬಂದೇ ಬರುತ್ತವೆ. ಅವರೂ ಈ ನಿಮ್ಮ ಪಂಗಡದವರಲ್ಲಿರುವವರ ಹಾಗೆ ದಲಿತರೂ, ದೀನರೂ ಆಗಿದ್ದಾರೆ ಎಲ್ಲರಿಗೂ ಗೌರವ ಸಲ್ಲಿಸಬೇಕಾದ್ದು ನ್ಯಾಯವಾಗಿದೆ. ಆದರೆ ಅದು ಎಲ್ಲರಿಗೂ ಈ ದಿವಸ ಸಲ್ಲುತ್ತಿಲ್ಲ. ಯಾವುದೋ ಕಾಲದ ಓಬೀರಾಯನ ನಡವಳಿಕೆಗಳೇ ಇನ್ನೂ ಮುಂದುವರಿದುಕೊಂಡು ಬರುತ್ತಿವೆ. ಮಲೆನಾಡಿನಲ್ಲಿ ಇವರನ್ನೇ ಹರಿಜನರಂತೆ ಕಾಣಲಾಗುತ್ತಿದೆ. ಆದರೆ ಅವರಿಗೆ ಆ ಕೆಲಸಗಳನ್ನೆಲ್ಲಾ ಮಾಡಿಸಿಕೊಂಡನಂತರ ಏನು ಗೌರವಗಳನ್ನು ಸಲ್ಲಿಸಬೇಕಾಗಿತ್ತೋ ಆ ಗೌರವಗಳನ್ನು ಮಾತ್ರ ಸಲ್ಲಿಸುತ್ತಿಲ್ಲ

4. P.M.

ಇಪ್ಪತ್ತು ವರ್ಷಗಳ ಮೇಲೆ ಕೂಡ ಏನಾದರೂ ಜಗಳ ಮಾಡಿಕೊಂಡು ಅವರು ಅವನಿಗೆ ಸಲ್ಲಬೇಕಾದ ಸಂಬಳ ಕೊಡದೆ ಇದ್ದರೂ ಹಾಗೆಯೇ ಅವನು ಏನಾದರೂ ಪರಾರಿಯಾದರೂ ಅಂಥವನನ್ನು ಮತ್ತೆ ಹಿಡಿಸಿ ಕೈಕಾಲು ಕಟ್ಟಿಹಾಕಿ ತಂದು ದುಡಿಸುತ್ತಾರೆ. ಇದು ಜೀತದ ಪದ್ಧತಿ! ಅವನಿಗೆ ಮದುವೆಮಾಡಿದರೆ, ಅವನು, ಅವನ ಹೆಂಡತಿ ಅವನ ಮಕ್ಕಳು ಎಲ್ಲರೂ ಅವರ ಸ್ವತ್ತು! ಚರಸ್ವತ್ತು ಇದ್ದ ಹಾಗೆ. ಇಂಥಾದ್ದು ಸಮಾಜದಲ್ಲಿ ಇವೊತ್ತಿಗೂ ಇದೆಯೆಂದು ಹೇಳಿದರೆ ನಾವು ಪ್ರಜಾಪ್ರಭುತ್ವಯುಗದಲ್ಲಿದ್ದೇವೆಯೇ, ಅಥವಾ ಪ್ರಜಾಪ್ರಭುತ್ವವನ್ನು ಆಚರಿಸುತ್ತಿದ್ದೇವೆಯೇ ಎಂದು ಹೇಳಲಿಕ್ಕೂ ಸಾಧ್ಯವಿಲ್ಲ. ಹೆಚ್ಚಾಗಿ, ಈ ಸಮಸ್ಯೆಗಳು ಪಟ್ಟಣಗಳಲ್ಲಿ ಕಾಣದೆ ಇರಬಹುದು. ಹಳ್ಳಿಗಳಲ್ಲಿ ಹೋಗಿ ನೋಡಬೇಕು. ಹಳ್ಳಿಗಳಲ್ಲಿ ಈಗಲೂ ಕೂಡ ದೇವಸ್ಥಾನಗಳಿಗೆ ಹರಿಜನರು ಹೋಗುವುದಾಗಲಿ, ಹರಿಜನರು ಸವರ್ಣಹಿಂದುಗಳ ಬಾವಿಗಳನ್ನು ಉಪಯೋಗಿಸುವುದಾಗಲಿ, ಅವರನ್ನು ಸಮಭಾವದಿಂದ ಕಾಣುವುದಾಗಲಿ ಎಲ್ಲೂ ಇಲ್ಲ. ನಿಮ್ಮ ಕಾನೂನಿನ ಪುಸ್ತಕದ ಕಡತದಲ್ಲಿದೆಯೇ ಹೊರತು ಕಾರ್ಯತಃ ಬಂದಿಲ್ಲ. ಅವು ಕಾರ್ಯತಃ ಬರುವುದಕ್ಕೂ ಅನೇಕರು ಅಡ್ಡಿಪಡಿಸುತ್ತಾರೆ. ಯಾರಿಗೆ ಈಗ ಅವರಿಂದ ಹೆಚ್ಚು ಉಪಯೋಗವಾಗುತ್ತಿದೆಯೋ, ಯಾರು ಅವರನ್ನು ಸಂಬಳ ಸಾರಿಗೆ ಕೊಡದೆ ಯಾವ ಹೀನ ಕೆಲಸಕ್ಕಾದರೂ ಹಚ್ಚಿ ದುಡಿಸುತ್ತಿದ್ದಾರೆಯೋ ಅಂಥ interested ಜನಗಳು ಸಮಾಜದಲ್ಲಿ ಪ್ರಗತಿಯಾಗಬೇಕೆಂದು ಪ್ರಯತ್ನಪಟ್ಟರೂ ಅದನ್ನು ಮೊಟಕು ಮಾಡುತ್ತಾರೆ, ಅವರನ್ನು ತಡೆಯುತ್ತಾರೆ. ಆದ್ದರಿಂದ ಇದನ್ನು ಮನಗಂಡು ಹೆಚ್ಚುಹೆಚ್ಚಾಗಿ ನಾವು ಈಬಗ್ಗೆ ಪ್ರಯತ್ನಮಾಡಿ ಅವರನ್ನು ಮೇಲುಮಟ್ಟಕ್ಕೆ ತರುವುದಕ್ಕೆ ಪ್ರಯತ್ನಮಾಡಬೇಕು. ಈ ಸಂಬಂಧದಲ್ಲಿ ಒಂದು ಸಮಿತಿಯನ್ನು ಏರ್ಪಾಡು ಮಾಡಿ ಅವರು ಎಲ್ಲೆಲ್ಲಿ ಉದ್ಯೋಗದಲ್ಲಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕು. ಈ ಪಂಗಡಕ್ಕೆ ಸೇರಿದಂತೆ ಲಂಬಾಣಿಗರೆಂದು ಜನ ಇದ್ದಾರೆ. ಅವರ ಊರನ್ನು ತಾಂಡಾ ಎಂದು ಹೇಳುತ್ತಾರೆ. ತಾಂಡಾಗಳೆಂದರೆ ಊರಿನ ಹೊರಗೆ ಇದ್ದ ಹಾಗೆ. ಅವರಿಗೆ ಯಾವ ಸೌಲಭ್ಯಗಳನ್ನೂ ಇದುವರೆಗೂ ಕಲ್ಪಿಸಿಕೊಟ್ಟಿಲ್ಲ. ಅವರ ವೃತ್ತಿ

(ಶ್ರೀ ಎಸ್. ಗೋಪಾಲಗೌಡ.)

